ಜನಶಕ್ತಿ

ಕನ್ನಡ ವಾರಪತ್ರಿಕೆ

Blog: janashakthi.wordpress.com e-mail: js_weekly@yahoo.com


ಸಂಪುಟ 7 ಸಂಚಿಕೆ 26

ಜೂನ್ 30, 2013 ಪುಟ 16 ರೂ. 10/-





ಪರ್ಯಾಯ ಧೋರಣೆಯ ದಿಕ್ಕಿನೆಡೆಗೆ ರಾಜಕೀಯ ಮಂಥನ ಸಾಗಲಿ



■ ತೆರಿಗೆ ಏರಿಕೆಯ ಬಜೆಟ್ ಸಿದ್ಧತೆಯಲ್ಲಿ ಸಿದ್ದರಾಮಯ್ಯ



ಹೊರೆಯಾದ ಬಸ್ ಪ್ರಯಾಣ ದರ

ಟರ್ಕಿಯಲ್ಲಿ ಈಗ 'ವಶಪಡಿಸಿಕೊಳ್ಳಿ' ಚಳುವಳಿಯ ಬಿರುಗಾಳಿ






ಕೊರಗ ಸಮುದಾಯದಲ್ಲಿ ಹುಟ್ಟಿದ್ದು ತಪ್ಪೇ?

ಗುಲ್ಬರ್ಗಾ: ದಲಿತ ಯುವಕರ ಮೇಲಿನ ಹಲ್ಲೆ-ಪ್ರತಿಭಟನೆ



ರೈತ ಚಳುವಳಿಯ ಆರಂಭ : ಪೆಂಗ್ ಪೈ ಎಂಬ ಮೊದಲ ರೈತ ನಾಯಕ



ಜಿ.ಎನ್. ನಾಗರಾಜ್ 34

ಚೀನಾದ ಕ್ರಾಂತಿಯ ಬೆಳವಣಿಗೆಯ ಚರಿತ್ರೆ ಯ ವಿವರಣೆಯಲ್ಲಿ ಒಂದು ತಿಂಗಳ ವಿರಾಮ. ಚುನಾವಣೆಗಳು, ವಚನ ಚಳುವಳಿಯ ಬಗೆಗಿನ ಅಧ್ಯಯನ, ಬರವಣಿಗೆ ಇವೆಲ್ಲ ಈ ವಿರಾಮಕ್ಕೆ ಕಾರಣವಾಗಿವೆ. ನಾವು ಆಗ ಮೇ ದಿನಾಚರಣೆಯ ಸ್ಫೂರ್ತಿಗೆ ಅನುಗುಣವಾಗಿ, 1925ರ ಮೇ 30 ರ ಹೋರಾಟ ಎಂದು ಚೀನಾದ ಚಳುವಳಿಯ ಚರಿತ್ರೆಯಲ್ಲಿ ಪ್ರಸಿದ್ಧವಾದ 2,50,000 ಹಾಂಗ್ ಕಾಂಗ್ ಕಾರ್ಮಿಕರ ವಿಶ್ವದ ಅತಿ ದೀರ್ಘ ಮುಷ್ಕರದ ವಿವರಣೆಯಲ್ಲಿದ್ದವು. ಅದು ಚೀನಾದಲ್ಲಿ ಕೆಲವೇ ತಿಂಗಳುಗಳಲ್ಲಿ ಕಾರ್ಮಿಕ ಸಂಘಟನೆ ವೇಗವಾಗಿ ಬೆಳೆದು ಎಲ್ಲೆಲ್ಲೂ ಕಾರ್ಮಿಕ ಸಂಘಗಳು ರೂಪುಗೊಂಡವು. ಸದಸ್ಯತ್ವ 28 ಲಕ್ಷವನ್ನು ಮೀರಿತು. ಪಕ್ಷದ ಸದಸ್ಯತ್ವವೂ ಕೂಡ ವೇಗವಾಗಿ ಬೆಳೆಯಿತು. ಈ ಹೋರಾಟದ ಪ್ರಭಾವದಿಂದ ಇಡೀ ದಕ್ಷಿಣ– ಪೂರ್ವ ಏಷಿಯಾದಲ್ಲಿ–ವಿಯೆಟ್ನಾಂ, ಮಲೇಷಿಯಾಗಳಲ್ಲಿ ಕೂಡ ಚಳುವಳಿ ಬೆಳೆಯಲು ಸ್ಫೂರ್ತಿ ನೀಡಿತು. ಈ ಬಗ್ಗೆ ಓದಿದ್ದೀರಿ.

ಮೇ 30 ರ ಕಾರ್ಮಿಕ ಹೋರಾಟ ಇಡೀ ಚೀನಾದಲ್ಲಿ ದಮನಿತ ಜನರಲ್ಲಿ ಸ್ಫೂರ್ತಿ ತುಂಬಿತು. ದೀರ್ಘವಾದ ಈ ಹೋರಾಟದ ಸುದ್ದಿಗಳು ಹಳ್ಳಿ ಹಳ್ಳಿಗೂ ತಲುಪಿದವು. ದೊಡ್ಡ ದೊಡ್ಡ ಭೂಮಾಲಕರ ದಬ್ಬಾಳಿಕೆಯಲ್ಲಿ ನಲುಗುತ್ತಿದ್ದ ಗೇಣಿದಾರ ರೈತರು ತಮ್ಮ ಸಂಕಟಗಳನ್ನು ಪರಿಹರಿಸಿಕೊಳ್ಳಲು ಈ ಹೋರಾಟ ಧೈರ್ಯ ತುಂಬಿತು.

ಪೆಂಗ್ ಪೈ ಎಂಬ ದೊಡ್ಡ ಭೂಮಾಲಕರ ಮಗ

ಭಾರತದ ಕೆಲವು ಮೊದಲ ಕಮ್ಯುನಿಸ್ಟರಂತೆಯೇ ಪೆಂಗ್ ಪೈ ಒಬ್ಬ ದೊಡ್ಡ ಭೂಮಾಲಕರ ಮಗ. ಅದರೆ ಒಬ್ಬ ಬಡ ರೈತನ ಮಗಳಾದ ಅವನ ತಾಯಿಯನ್ನು ಅವರ ಅಪ್ಪ ಇಟ್ಟುಕೊಂಡಿದ್ದ. ಈ ತಾಯಿಯ ಪ್ರಭಾವದಿಂದ ಬಡ ರೈತರ ಬಗ್ಗೆ ಬಾಲ್ಯದಿಂದಲೇ ಅನುಕಂಪ ಹೊಂದಿದ್ದ. ನೆರೆಯ ದೇಶವಾದ ಜಪಾನಿನಲ್ಲಿ ಉನ್ನತ ಅಧ್ಯಯನ ಮಾಡುತ್ತಿರುವಾಗಲೇ ಕಮ್ಯುನಿಸ್ಟ್ ಪ್ರಣಾಳಿಕೆಯನ್ನು ಓದಿ ಕಮ್ಯುನಿಸ್ಟ್ ತತ್ವಗಳತ್ತ ಆಕರ್ಷಿತನಾಗಿದ್ದ. ಅಲ್ಲಿಂದ ಚೀನಾಕ್ಕೆ ಹಿಂದಿರುಗಿದ ಕೂಡಲೇ ಸಮಾಜವಾದದ ಅಧ್ಯಯನ ತಂಡವನ್ನು ರಚಿಸಿದ್ದ ಹಾಗೂ ಸಮಾಜವಾದೀ ಯುವ ಸಂಘದ ಸದಸ್ಯನಾಗಿದ್ದ. ಈ ನಡುವೆ ಅವನನ್ನು ಅವನ ತಾಲೂಕಾದ ಹೈಫೆಂಗ್‌ನ ಶಿಕ್ಷಣಾಧಿಕಾರಿಯಾಗಿ ನೇಮಿಸಲಾಯಿತು. ಸ್ವಲ್ಪ ಸಮಯದಲ್ಲಿಯೇ ಅನೇಕ ಶಾಲೆಗಳನ್ನು ಸ್ಥಾಪಿಸಿದ ಕೀರ್ತಿ ಅವನದಾಯಿತು. ಈ ಹೊಸ ಶಾಲೆಗಳ ಶಿಕ್ಷಕರು, ವಿದ್ಯಾರ್ಥಿಗಳನ್ನೂ ಸೇರಿಸಿಕೊಂಡು ಮೇ ದಿನಾಚರಣೆಯನ್ನು ಉತ್ಸಾಹದಿಂದ ಆಚರಿಸಿದ. ಈ ಕಾರಣಕ್ಕಾಗಿಯೇ ಅವನನ್ನು ಶಿಕ್ಷಣಾಧಿಕಾರಿಯ ಹುದ್ದೆಯಿಂದ ತೆಗೆದು ಹಾಕಲಾಯಿತು. ಆದರೆ ಅದು ರೈತರನ್ನು ಸಂಘಟಿಸುವ ಕೆಲಸದಲ್ಲಿ ಪೂರ್ಣ ಕಾಲ ತೊಡಗಿಕೊಳ್ಳಲು ವರದಾನವಾಯಿತು. ರೈತ ಸಂಘಟನೆಯನ್ನು ಆರಂಭಿಸಿ ಗೇಣೀದಾರರ ಮೇಲೆ ನಡೆಸುತ್ತಿದ್ದ ದಬ್ಬಾಳಿಕೆಯ ವಿರುದ್ಧ ಅವರನ್ನು ಹೋರಾಟಕ್ಕಿಳಿಸಿದ. ಗೇಣಿ ಕಡಿತ ಮಾಡಲು ಅವರು ಹೋರಾಟ ಆರಂಭಿಸಿದರು. ಆಗ ಅವನ ತಂದೆ ಮತ್ತು ಅವನ ಸಹೋದರ ಸಹೋದರಿಯರು ಇವನನ್ನು ಕುಲ ದ್ರೋಹಿ ಎಂದು ಹೀಗಳೆದರು. ಇವನು ಅದಾವುದನ್ನೂ ಲೆಕ್ಕಿಸಲಿಲ್ಲ. ತನ್ನ ಪಾಲಿಗೆ ಬಂದ ಭೂಮಿಯನ್ನು ಗೇಣಿದಾರರಿಗೆ ಹಂಚಿಬಿಟ್ಟ, ಆದರೂ ಆ ರೈತರಿಗೆ ಆ ಭೂಮಿಯನ್ನು ಬೇಸಾಯ ಮಾಡುವ ಧೈರ್ಯ ಬರಲಿಲ್ಲ. ಅವರಿಗೆ ಧೈರ್ಯ ತುಂಬಲು ಎಲ್ಲರನ್ನೂ ಒಟ್ಟಾಗಿ ಸೇರಿಸಿ ಅವರ ಮುಂದೆ ಬೆಂಕಿ ಹಚ್ಚಿ ಅವರ ಗೇಣಿಯ ಪತ್ರಗಳನ್ನು ಸುಟ್ಟುಹಾಕಿದ.

ರೈತ ಸಂಘದ ವಿಸ್ತರಣೆ

ಇಂತಹ ವಿಶಿಷ್ಟ ವ್ಯಕ್ತಿತ್ವದ ನಾಯಕ ಪೆಂಗ್ ಪೈ ಕೋಮಿಂಟಾಂಗ್ -ಕಮ್ಯುನಿಸ್ಟ್ ಪಕ್ಷಗಳ ನಡುವೆ ಮೈತ್ರಿಯಾದಾಗ ರೈತರಲ್ಲಿ ಉತ್ಸಾಹ ಮೂಡಿದ ಸಮಯದಲ್ಲಿ ಇಡೀ ಪ್ರಾಂತ್ಯದಲ್ಲಿಯೇ ರೈತ ಸಂಘವನ್ನು ಬೆಳಿಸಲು ಶ್ರಮಿಸಿದರು. ಜೊತೆಗೆ ಭೂಮಾಲಕರ ಗೂಂಡಾಗಳಿಂದ ರಕ್ಷಿಸಿಕೊಳ್ಳಲು ಒಂದು ಸ್ವಯಂ ಸೇವಕರ ಪಡೆಯನ್ನೂ ರಚಿಸಿದರು. ಈ ಪ್ರಯತ್ನದ ಭಾಗವಾಗಿ ಮಾವೋರವರ ಜೊತೆ ಸೇರಿ ಕೋಮಿಂಟಾಂಗ್ ಪಕ್ಷದ ಮುಂದೆ ರೈತ ವಿಭಾಗವೊಂದನ್ನು ತೆರೆಯುವ ಹಾಗೂ ಒಂದು ರಾಷ್ಟ್ರೀಯ ರೈತ ತರಬೇತಿ ಸಂಸ್ಥೆಯನ್ನು ಸ್ಥಾಪಿಸುವ ಪ್ರಸ್ತಾಪ ಮಂಡಿಸಿ ಅದಕ್ಕೆ ಅನುಮತಿ ಪಡೆದರು. ಈ ತರಬೇತಿ ಸಂಸ್ಥೆಯ ಮೊದಲ ನಿರ್ದೇಶಕ ಕೂಡ ಇವರೇ. ಇವರ ನೇತೃತ್ವದಲ್ಲಿ ಮೊದಲ ಐದು ತಂಡ ತರಬೇತಿ ಪಡೆಯಿತು, ನಂತರವೇ ಮಾವೋ ಆ ಸಂಸ್ಥೆಯ ನಿರ್ದೇಶಕರಾದದ್ದು. ಈ ಸಂಸ್ಥೆಯಲ್ಲಿ ಇಪ್ಪತ್ತೊಂದು ಪ್ರಾಂತ್ಯಗಳ ರೈತರಿಗೆ ತರಬೇತಿ ನೀಡಿದರೂ ಅತಿ ಹೆಚ್ಚು ತರಬೇತಿ ಪಡೆದವರು ಅದೇ ಪ್ರಾಂತ್ಯದ ರೈತರಾದ ಗ್ವಾಂಗ್ ಡಾಂಗ್ ಪ್ರಾಂತ್ಯದವರು.

ಈ ಪ್ರಾಂತ್ಯದ ರಾಜಧಾನಿಯಾಗಿದ್ದ ಕ್ಯಾಂಟನ್ ನಗರದಲ್ಲಿದ್ದ ಕೋಮಿಂಟಾಂಗ್ ಕ್ರಾಂತಿಕಾರಿ ಸರ್ಕಾರದ ಮೇಲೆ ಯುದ್ಧಕೋರ ಭೂಮಾಲಕರ ಧಾಳಿ ನಡೆದಾಗ ಅದನ್ನು ರಕ್ಷಿಸಲು ಹಳ್ಳಿ ಹಳ್ಳಿಗಳಲ್ಲಿ ನೆರವಾದದ್ದು ಈ ರೈತ ಸಂಘಟನೆ ಮತ್ತವರ ಸ್ವಯಂ ಸೇವಕ ದಳ. ಹೀಗೆ ಒಂದು ಕಡೆ ಕಾರ್ಮಿಕ ಚಳುವಳಿ ಮತ್ತು ಸಂಘಗಳು, ಮತ್ತೊಂದು ಕಡೆ ಹೊಸದಾಗಿ ಬೆಳೆದ ರೈತ ಸಂಘಟನೆ. 1911 ರಲ್ಲಿ ಸನ್ ಯಾತ್ ಸೇನ್ ರವರು ಮೊದಲು ಕ್ರಾಂತಿ ನಡೆದು ಸಾಮ್ರಾಟರನ್ನು ಕಿತ್ತು ಹಾಕಿದಾಗ ಯುದ್ಧಕೋರ ಪಾಳೆಯಗಾರರಿಂದ

ಪೆಂಗ್ ಪೈ



ಅದನ್ನು ರಕ್ಷಿಸಿಕೊಳ್ಳಲಾಗಲಿಲ್ಲ. ಆದರೇ ಈಗ ಕಮ್ಯುನಿಸ್ಟ್ ಪಕ್ಷದೊಂದಿಗಿನ ಮೈತ್ರಿ, ಕಾರ್ಮಿಕ ಚಳುವಳಿ, ರೈತ ಚಳುವಳಿ ಕೋಮಿಂಟಾಂಗ್ ಸರ್ಕಾರಕ್ಕೆ ರಕ್ಷಣೆ ನೀಡಿದವು.

ಮೇ 30 ರ ಮಹಾ ಹೋರಾಟವಂತೂ ನಡೆದದ್ದು ಹಾಂಗ್ ಕಾಂಗ್– ಗ್ವಾಂಗ್ ಡಾಂಗ್ ಪ್ರದೇಶದಲ್ಲಿ. ಇಂತಿರುವಾಗ ಆಗಲೇ ಕೆಲವು ಹೋರಾಟಗಳಲ್ಲಿ ಭಾಗವಹಿಸಿ ಅನುಭವ ಪಡೆದ, ರೈತ ತರಬೇತಿ ಸಂಸ್ಥೆಯಲ್ಲಿ ಮೂರರಿಂದ ಆರು ತಿಂಗಳವರೆಗೂ ತರಬೇತಿ ಪಡೆದಿದ್ದ ಈ ಪ್ರಾಂತ್ಯದ ರೈತ ನಾಯಕರು ಹಾಂಗ್ ಕಾಂಗ್ ಮಹಾ ಮುಷ್ಕರದಿಂದ ಸ್ಫೂರ್ತಿ ಪಡೆದಿದ್ದ ರೈತರನ್ನು ವೇಗವಾಗಿ ಸಂಘಟಿಸಿದರು. 1925 ರಲ್ಲಿ ಮೊದಲ ಪ್ರಾಂತ್ಯ ರೈತ ಸಮ್ಮೇಳನವನ್ನು ಸಂಘಟಿಸಿದರು. ಪೆಂಗ್ ಪೈರವರನ್ನು ಸಹಜವಾಗಿಯೇ ಅದರ ಅಧ್ಯಕ್ಷರನ್ನಾಗಿ ಆರಿಸಲಾಯಿತು. ಇಡೀ ಪ್ರಾಂತ್ಯಕ್ಕೆ ರೈತ ಸಂಘ ಹಬ್ಬಿತು. 1926 ರ ವೇಳೆಗೆ ಚೀನಾದಲ್ಲಿ ಇದ್ದ ರೈತ ಸಂಘದ ಸದಸ್ಯತ್ವದಲ್ಲಿ ಮೂರನೇ ಎರಡು ಭಾಗ ಗ್ವಾಂಗ್ ಡಾಂಗ್ ಪ್ರಾಂತ್ಯದ್ದೇ ಆಗಿತ್ತು.

ಮಹಿಳೆ ರೈತರ ಸಂಘಟನೆಗೆ ಪ್ರಾಮುಖ್ಯತೆ

ಅಂದಿನ ಚೀನಾದ ಸಂದರ್ಭದಲ್ಲಿ ಮಹಿಳೆಯರು ಮನೆಯಿಂದ ಹೊರ ಬರುವಂತೆಯೇ ಇರಲಿಲ್ಲ. ಇನ್ನು ಗ್ರಾಮೀಣ ಮಹಿಳೆಯರ ಪರಿಸ್ಥಿತಿಯಂತೂ ಹೇಳ ತೀರದು. ಅಂತಹ ವಾತಾವರಣದಲ್ಲಿಯೂ ಮಹಿಳೆಯರನ್ನು ರೈತ ಸಂಘದಲ್ಲಿ ಕ್ರಿಯಾಶೀಲರನ್ನಾಗಿಸಲು ಪೆಂಗ್ ಪೈ ಆಸಕ್ತಿ ವಹಿಸಿದರು. ಆ ಪ್ರಾಂತ್ಯದಲ್ಲಿ 30,000ಕ್ಕಿಂತ ಹೆಚ್ಚು ಮಹಿಳೆಯರು ರೈತಸಂಘದ ಸದಸ್ಯರಾದರು. 30 ಕ್ಕೂ ಹೆಚ್ಚು ರೈತ ಮಹಿಳೆಯರು ರಾಷ್ಟ್ರೀಯ ರೈತ ತರಬೇತಿ ಸಂಸ್ಥೆಯಲ್ಲಿ ತರಬೇತಿ ಪಡೆದರು. ಅದರಲ್ಲಿ ಬಹಳ ಜನರು ರೈತ ಸಂಘಟನೆಯಲ್ಲಿ, ಕೋಮಿಂಟಾಂಗ್ ಸೈನ್ಯಕ್ಕೆ ಸಹಕರಿಸುವುದರಲ್ಲಿಯೂ ಕ್ರಿಯಾಶೀಲರಾದರು. ಅವರಲ್ಲಿ ಕೆಲವರನ್ನು ಮಹಿಳಾ ಸಂಘಟನೆ ಕಟ್ಟುವುದರಲ್ಲಿಯೂ ತೊಡಗಿಸಲು ಸಾಧ್ಯವಾಯಿತು.

ಚೀನಾದ ಮೊದಲ ಸೋವಿಯೆತ್ ರಚನೆ

ಹೀಗೆ ರೈತ ಸಂಘಟನೆ ಒಂದು ಕಡೆ ವಿಸ್ತಾರ ಹಾಗೂ ಭೂಮಾಲಕರ ಗೂಂಡಾಗಿರಿಯನ್ನು ಎದುರಿಸುವುದರಲ್ಲಿ ಸಮರ ಶೀಲ ಧೈರ್ಯವನ್ನು ತೋರಿಸುತ್ತಾ ಬೆಳೆಯುತ್ತಿರುವಾಗ ಆ ಪ್ರದೇಶದ ಯುದ್ಧ ಕೋರ ಪಾಳೆಯಗಾರರನ್ನು ಎದುರಿಸಿ ಹಿಮ್ಮೆಟ್ಟಿಸಲಾಯಿತು. ಒಂದು ಇಡೀ ಪ್ರದೇಶದ ಭೂ ಮಾಲಕರು ಹೆದರಿ ಪಟ್ಟಣಗಳಿಗೆ ಓಡಿ ಹೋದರು. ಇಂತಹ ಪರಿಸ್ಥಿತಿಯಲ್ಲಿ ಆ ಪ್ರದೇಶದ ರೈತರು ತಮ್ಮ ಆಳ್ವಿಕೆಯನ್ನು ತಾವೇ ನಡೆಸಲು ಒಂದು ಸೋವಿಯೆತ್ ಅನ್ನು ಸ್ಥಾಪಿಸಿದರು. ಇದೇ ಚೀನಾದ ದುಡಿಯುವ ಜನರು ತಮ್ಮ ಆಡಳಿತವನ್ನು ತಾವೇ ನಡೆಸಲು ಮುಂದಾದ ಮೊದಲ ಆಡಳಿತ ರಚನೆ– ಸೋವಿಯೆತ್. ಕೇವಲ ಕೆಲವೇ ತಿಂಗಳ ಕಾಲ ಈ ಸೋವಿಯೆತ್ ಅಸ್ತಿತ್ವದಲ್ಲಿದ್ದರೂ ಈ ಅನುಭವವನ್ನು ಮುಂದೆ ಚೀನಾದಲ್ಲಿ ವ್ಯಾಪಕವಾಗಿ ಬಳಸಲಾಯಿತು. (ಸೋವಿಯೆತ್ ಒಕ್ಕೂಟ ಎಂಬುದು ಸಮಾಜವಾದೀ ಕ್ರಾಂತಿ ನಡೆಸಿದ ನಂತರದ ರಷ್ಯಾ ಪಡೆದುಕೊಂಡ ಹೆಸರು. ಇದು ಕ್ರಾಂತಿಗೆ ಮೊದಲೇ ಕ್ರಾಂತಿಕಾರೀ ಚಳುವಳಿಯ ತೀವ್ರತೆಯಲ್ಲಿ ದೇಶಾದ್ಯಂತ ರಚಿಸಿಕೊಳ್ಳಲಾದ ಕ್ರಾಂತಿಕಾರೀ ಆಡಳಿತದ ಸಂಸ್ಥೆಗಳು. ಕಾರ್ಮಿಕರ ಸೋವಿಯೆತ್, ರೈತರ ಸೋವಿಯೆತ್, ಸೈನಿಕರ ಸೋವಿಯೆತ್‌ಗಳೂ ಇದ್ದವು. ಇಂತಹ ಕ್ರಾಂತಿಕಾರೀ ಆಡಳಿತದ

ಪುಟ 15 ಕ್ಕೆ

ಸಂಪಾದಕೀಯ

ಹೊರೆಯಾದ ಬಸ್ ಪ್ರಯಾಣ ದರ ಏರಿಕೆ

ಅಧಿಕಾರಕ್ಕೆ ಬಂದ ತಕ್ಷಣ ಅಗ್ಗದ ಅಕ್ಕಿ, ಗುಟ್ಕಾ ನಿಷೇದದಂತಹ ಕೆಲವು ಜನಾಕರ್ಷಕ ಯೋಜನೆಗಳನ್ನು ಪ್ರಕಟಿಸಿ ಜನಮೆಚ್ಚುಗೆ ಪಡೆದಿದ್ದ ಕಾಂಗ್ರೆಸ್ ಸರ್ಕಾರದ ಇನ್ನೊಂದು ಮುಖ ಈಗ ಬಯಲಾಗಿದೆ. ರಾಜ್ಯ ರಸ್ತೆ ಸಾರಿಗೆ ನಿಗಮದ ಎಲ್ಲಾ ವಿಭಾಗಗಳ ಪ್ರಯಾಣ ದರಗಳನ್ನು ಶೇ. 10.50ರಷ್ಟು ಮತ್ತು ಬೆಂಗಳೂರು ಮಹಾನಗರ ಸಾರಿಗೆ ನಿಗಮದ ಪ್ರಯಾಣ ದರಗಳನ್ನು ಶೇ. 16ರಷ್ಟು ಏರಿಕೆ ಮಾಡಿರುವ ಸರ್ಕಾರ, ಈಗಾಗಲೇ ಅಗತ್ಯ ವಸ್ತುಗಳ ತೀವ್ರ ಬೆಲೆಏರಿಕೆಯಿಂದ ಕಂಗೆಟ್ಟಿರುವ ಸಾಮಾನ್ಯ ಮತ್ತು ಮಧ್ಯಮ ವರ್ಗಗಳ ಜನತೆಗೆ ಗಾಯದ ಮೇಲೆ ಬರೆ ಎಳೆದಿದೆ. ಇದು ಕೆ.ಎಸ್.ಆರ್.ಟಿ.ಸಿ. ಮತ್ತು ಬಿ.ಎಂ.ಟಿ.ಸಿ ಇತಿಹಾಸದಲ್ಲೇ ಅತ್ಯಧಿಕ ದರ ಏರಿಕೆಯಾಗಿದ್ದು ಕಾಂಗ್ರೆಸ್ ಸರ್ಕಾರದ ಅತ್ಯಂತ ಖಂಡನಾರ್ಹ ಕ್ರಮವಾಗಿದೆ.

ಕೇಂದ್ರದಲ್ಲಿರುವುದು ಇದೇ ಕಾಂಗ್ರೆಸ್ ಪಕ್ಷದ ಸರ್ಕಾರ. ಅದು ಆರು ತಿಂಗಳಲ್ಲಿ ಡೀಸೆಲ್ ದರವನ್ನು ಐದು ಬಾರಿ ಏರಿಸಿದ್ದನ್ನು ರಾಜ್ಯ ಸರ್ಕಾರ ಸಮರ್ಥಿಸಲಾಗದು. ಕೇಂದ್ರ ಸರ್ಕಾರ ತೈಲ ಕಂಪೆನಿಗಳ ಲಾಭಗಳಿಕೆಗೆ ಅನುಕೂಲ ಮಾಡಿಕೊಡಲು ತೈಲ ಮಾರಾಟವನ್ನು ನಿಯಂತ್ರಣ ಮುಕ್ತಗೊಳಿಸಿದ್ದೇ ತೈಲೋತ್ಪನ್ನಗಳ ನಿಯಂತ್ರಣವಿಲ್ಲದ ಬೆಲೆ ಏರಿಕೆಗೆ ಕಾರಣವಾಗಿದೆ. ರಾಜ್ಯ ಸರ್ಕಾರ ಇದನ್ನು ಮರೆ ಮಾಚಲು ಸಾಧ್ಯವಿಲ್ಲ. ತೈಲ ಕಂಪೆನಿಗಳು ಮತ್ತೊಮ್ಮೆ ಪೆಟ್ರೋಲ್ ದರವನ್ನು ಲೀಟರ್‌ಗೆ 2ರೂ. ಏರಿಸಿದ್ದು ಅಷ್ಟೇ ಖಂಡನಾರ್ಹವಾಗಿದೆ.

ಸಾರಿಗೆ ನಿಗಮಗಳಿಗೆ ಡಿಸೇಲ್ ಬೆಲೆ ಏರಿಕೆಯಿಂದ ಉಂಟಾಗುತ್ತಿರುವ ಆರ್ಥಿಕ ಹೊರೆಯನ್ನು ಜನರ ಮೇಲೆ ಹೇರುವ ಬದಲು ರಾಜ್ಯ ಸರ್ಕಾರ ನಿಗಮಗಳಿಗೆ ಇಂತಹ ಸಂದರ್ಭದಲ್ಲಿ ಅಗತ್ಯ ಸಬ್ಸಿಡಿ ನೀಡಬೇಕು. ಸೇವೆಯನ್ನು ಒದಗಿಸುವ ವಿಷಯದಲ್ಲಿ ಲಾಭವೊಂದೇ ಗುರಿಯಾಗಿರಬಾರದು. ಇತರ ಅನೇಕ ರಾಜ್ಯ ಸರ್ಕಾರಗಳು ನೀಡುತ್ತಿರುವಂತೆ ಕರ್ನಾಟಕ ಸರ್ಕಾರವೂ ರಾಜ್ಯದ ಸಾರಿಗೆ ನಿಗಮಗಳಿಗೆ ಅಗತ್ಯ ಸಬ್ಸಿಡಿಗಳನ್ನು ನೀಡಿ ಜನರ ಮೇಲೆ ಹೊರೆ ಹೇರುವುದನ್ನು ತಪ್ಪಿಸಬೇಕು. ನಿತ್ಯದ ಓಡಾಟಕ್ಕೆ ಬಡ ಹಾಗೂ ಮಧ್ಯಮ ವರ್ಗದ ಜನರೇ ಸರ್ಕಾರಿ ಬಸ್‌ಗಳನ್ನು ಅವಲಂಭಿಸಿರುತ್ತಾರೆ. ಎಲ್ಲ ರೀತಿಯ ಬೆಲೆ ಏರಿಕೆಗೆ ಅವರೇ ಬಲಿಯಾಗುತ್ತಿರುತ್ತಾರೆ. ಈಗಾಗಲೇ ತೀವ್ರ ಬೆಲೆ ಏರಿಕೆಯಿಂದ ತತ್ತರಿಸಿರುವ ರಾಜ್ಯದ ಬಡ ಜನತೆಗೆ ಅಲ್ಪಸ್ವಲ್ಪ ಪರಿಹಾರವನ್ನು ಒದಗಿಸುವ ದೃಷ್ಟಿಯಿಂದಲಾದರೂ ಬಸ್ ಪ್ರಯಾಣ ದರ ಏರಿಕೆಯ ಕ್ರಮವನ್ನು ಸರ್ಕಾರ ಕೈಬಿಡಲೇಬೇಕು.

ಇಂಧನ ಬೆಲೆ ಏರಿಕೆಯಾದಾಗೆಲ್ಲ ಅದರ ಹೊರೆಯನ್ನು ಸಾಮಾನ್ಯ ಪ್ರಯಾಣಿಕರ ಹೆಗಲಿಗೆ ವರ್ಗಾಯಿಸುವುದು ಸಮರ್ಥನೀಯ ಕ್ರಮವಲ್ಲ. ಡೀಸೆಲ್ ಬೆಲೆ ಹೆಚ್ಚಳದ ನೆಪದಲ್ಲಿ ಪ್ರಯಾಣ ದರವನ್ನು ಹೆಚ್ಚಿಸುವುದನ್ನೇ ವಾಡಿಕೆಯಾಗಿಸಿಕೊಂಡರೆ ಪರ್ಯಾಯ ಹಾದಿಯ ಅವಕಾಶಗಳು ಕಾಣುವುದೇ ಇಲ್ಲ. ವರಮಾನ ಸೋರಿಕೆಯನ್ನು ತಡೆಗಟ್ಟಲು ಸಾರಿಗೆ ನಿಗಮಗಳ ಆಡಳಿತಕ್ಕೆ ಇನ್ನೂ ಸಾಧ್ಯವಾಗಿಲ್ಲ. ಟಿಕೆಟ್‌ನಿಂದ ಬರುವ ಆದಾಯ ಸೋರಿಕೆ ಮಾತ್ರವಲ್ಲ ಡಿಪೋಗಳಲ್ಲಿ ಬಿಡಿಭಾಗಗಳ ಖರೀದಿ ಮುಂತಾದ ಬಾಬತ್ತುಗಳಲ್ಲಿ ಆಗುತ್ತಿರುವ ಸೋರಿಕೆಯನ್ನು ಪರಿಣಾಮಕಾರಿಯಾಗಿ ತಡೆಗಟ್ಟಲು ಸಾಧ್ಯವಾದರೆ ಆಗಾಗ ಪ್ರಯಣ ದರಗಳನ್ನು ಏರಿಸಿ ಸಾಮಾನ್ಯ ಪ್ರಯಾಣಿಗರನ್ನು ಕಷ್ಟಕ್ಕೀಡು ಮಾಡುವ ಪ್ರಸಂಗ ಬರುವುದಿಲ್ಲ.


'ರಾಜ್ಯ ರಸ್ತೆ ಸಾರಿಗೆಯನ್ನು ನಿಭಾಯಿಸಲು ರಾಜ್ಯ ಸರ್ಕಾರಕ್ಕೆ ಸಾಧ್ಯವಾಗದೆ ಇದ್ದ-ರೆ, ಖಾಸಗಿಯವರಿಗೆ ಒಪ್ಪಿಸಿ' ಎಂಬ ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ಅವರ ಹೇಳಿಕೆ ಅಷ್ಟೇ ಖಂಡನಾರ್ಹವಾಗಿದೆ. ಅವರು ಸೂಚಿಸುವ ಪರಿಹಾರ ಸಮಸ್ಯೆಗಿಂತ ಹೆಚ್ಚು ಅಪಾಯಕಾರಿಯಾಗಿದೆ. ಸಾರಿಗೆಯಂತಹ ಸಾರ್ವಜನಿಕ ಸೇವೆಗಳನ್ನು ಸರ್ಕಾರವೇ ನಡೆಸುವಂತಿದ್ದರೆ ಮಾತ್ರ ಜನಸಾಮಾನ್ಯರ ಹಿತರಕ್ಷಣೆ ಸಾಧ್ಯ. ಜನಚಳುವಳಿಗಳ ಒತ್ತಡ-ಕ್ಕೆ ಮಣಿದು ಸರ್ಕಾರ ತನ್ನ ಜನವಿರೋಧಿ ಧೋರಣೆಗಳನ್ನು ಬದಲಾಯಿಸಲು ಸಾಧ್ಯ. ಆದರೆ ಅದನ್ನೇ ಖಾಸಗೀ ವ್ಯವಸ್ಥೆಯಡಿಯಲ್ಲಿ ಸಾಧ್ಯವಿಲ್ಲ. ಖಾಸಗಿ ರಂಗದ ಉದ್ದೇಶ ಲಾಭಗಳಿಕೆಯೊಂದೇ. ಅಲ್ಲಿ ಜನಸೇವೆಯ ಉದ್ದೇಶಕ್ಕೆ ಅವಕಾಶವೇ ಇಲ್ಲ. ರಸ್ತೆ ಸಾರಿಗೆಯನ್ನು ಖಾಸಗೀ ರಂಗಕ್ಕೆ ಒಪ್ಪಿಸುವುದೆಂದರೆ, ಖಾಸಗಿ ಸಾರಿಗೆ ಕಂಪನಿಗಳ ಲಾಭಕೋರತನಕ್ಕೆ ಜನಸಾಮಾನ್ಯರನ್ನು ಬಲಿಕೊಡುವುದೆಂದೇ ಅರ್ಥ. ಅಲ್ಲಿ ಪ್ರಯಾಣಿಗರ ಹಕ್ಕುಬಾಧ್ಯತೆಗಳಿಗಾಗಲಿ, ನೌಕರರ ಹಕ್ಕು ಬಾಧ್ಯತೆಗಳಿಗಾಗಲಿ ರಕ್ಷಣೆ ಇರಲಾರದು. ಯಾವುದೇ ಸಾಮಾಜಿಕ ಸಮಸ್ಯೆಗೆ ಖಾಸಗೀಕರಣ ಪರಿಹಾರವಾಗದು. ಕುಮಾರಸ್ವಾಮಿ ಅವರ ಹೇಳಿಕೆ ಲಾಭಕೋರ ಖಾಸಗಿ ಸಾರಿಗೆ ಕಂಪನಿಗಳ ಪರವಾಗಿದೆ ಎಂದು ಹೇಳದೆ ಇರಲಾಗದು.

ಅನಿರೀಕ್ಷಿತ ಬಸ್ ಪ್ರಯಾಣ ದರ ಏರಿಕೆಗೆ ರಾಜ್ಯದ್ಯಂತ ವ್ಯಾಪಕ ವಿರೋಧ ವ್ಯಕ್ತವಾಗಿದೆ. ಜನಸಾಮಾನ್ಯರು ಅಲ್ಲಲ್ಲಿ ತಾವುತಾವಾಗಿ ಬೀದಿಗಿಳಿದು ಪ್ರತಿಭಟಿಸಿದ್ದಾರೆ. ಸಿದ್ದರಾಮಯ್ಯ ಸರ್ಕಾರ ಇದನ್ನೊಂದು ಪ್ರತಿಷ್ಠೆಯ ವಿಷಯವನ್ನಾಗಿಸದೆ, ಜನರ ಭಾವನೆಗಳನ್ನು ಅರ್ಥ ಮಾಡಿಕೊಂಡು ಏರಿಸಿದ ಬಸ್ ಪ್ರಯಾಣ ದರಗಳನ್ನು ಇಳಿಸಲು ಮುಂದಾಗಬೇಕು.

ಬಿಜೆಪಿ–ಕೆಜೆಪಿ ಭಾಯಿ, ಭಾಯಿ!?

ಸಂದರ್ಭಸಾಧಕತೆಯ ಮತ್ತೊಂದು ಅವತರಣಿಕೆಗೆ ರಂಗ ಸಿದ್ಧತೆ!

ನರೇಂದ್ರಮೋದಿ ಬಿಜೆಪಿಯ ಚುನಾವಣಾ ಪ್ರಚಾರ ಸಮಿತಿಯ ಅಧ್ಯಕ್ಷನಾಗಿರುವುದನ್ನೇ ಪ್ರಧಾನಿ ಪಟ್ಟವೇ ಗಿಟ್ಟಿದಂತೆ ಕಾರ್ಪೊರೇಟ್ ಮಾಧ್ಯಮಗಳು ಸಂಭ್ರಮಿಸುತ್ತಿವೆ. ಆದರೆ ಎನ್.ಡಿ.ಎ.ಕೂಟ ಬಲವಾಗುವ ಬದಲು ಒಡೆದು ದುರ್ಬಲವಾಗುತ್ತಿದೆ. ಮೋದಿಯ ವ್ಯಕ್ತಿತ್ವವೇ ಅಂತಹುದಲ್ಲವೇ! ವಿಭಜನೆ! ಮತ್ತಷ್ಟು ವಿಭಜನೆ!! ಇದೀಗ ಬಿಜೆಪಿ-ಜೆಡಿ-ಯುವಿನ ಹದಿನೇಳು ವರುಷಗಳ ಮೈತ್ರಿ ಮುರಿದು ಬಿದ್ದಿದೆ. ಈ ಎಳೆಯನ್ನೇ ಹಿಡಿದು ರಾಜಕೀಯ ಚೌಕಾಶಿ ಮಾಡಲು ಅದ್ವಾನಿ ಗುಂಪು ಬೈಠಕ್ ಕೂಡಲು ಭಾಗವತರತ್ತ ಹೊರಟಿದೆ.



ಎರಡು ಮುಖಗಳು


ಅಷ್ಟು ಮಾತ್ರವಲ್ಲ, ಸ್ವತಃ ಬಿಜೆಪಿಯೇ ಎರಡು ಗುಂಪುಗಳಾಗಿ ಒಡೆದಿದ್ದು ಅವುಗಳ ನಡುವಿನ ಅಂತರ ಹೆಚ್ಚುತ್ತಿದೆ. ಕಾರ್ಪೊರೇಟ್ ಕಂಪನಿಗಳ ವರಾತಕ್ಕೆ ಸಿಲುಕಿ ಬಿದ್ದಿರುವ ಬಿಜೆಪಿ-ಆರೆಸ್ಸೆಸ್‌ಗಳು ಮೋದಿಯನ್ನಿಟ್ಟುಕೊಳ್ಳದೇ ಗತ್ಯಂತರವಿಲ್ಲವೆಂದೂ ಭಾವಿಸಿವೆ. ದೇಶದ ಮತ್ತು ವಿದೇಶಗಳ ಸುಲಿಗೆಗಾರರನ್ನು ಪೋಷಿಸಲು ಸರ್ವಾಧಿಕಾರದ, ಆಕ್ರಮಣಶೀಲ ನಾಯಕತ್ವವೇ ಮದ್ದೆಂದು ಫ್ಯಾಶಿಸ್ಟ್ ಕೂಟ ನಂಬಿದೆ. ಈ ಸ್ಥಿತಿಯಲ್ಲೇ ಅವರಿಗೆ ಬೆಂಬಲ ಕ್ರೋಢೀಕರಿಸಲು ಯಾರ ಜೊತೆಗೂ ಹೋಗಬಹುದಾದ ಹತಾಶೆಯ ಸ್ಥಿತಿಯಲ್ಲಿದೆ. ಅದಕ್ಕಾಗಿಯೇ ಸಿದ್ಧಾಂತ-ತತ್ವ, ಆದರ್ಶಗಳು, ಶಿಸ್ತು ಯಾವುದನ್ನೂ ಮಾತನಾಡದೇ ಗಾಢ ಮೌನಕ್ಕೆ ಬಿದ್ದವರಂತೆ ನಟಿಸುತ್ತಿರುವುದು. ಯಾವುದನ್ನು ಕೈ ಬಿಡುವ ಅಥವಾ ಶಿಸ್ತಿಗೊಳಪಡಿಸುವ ಸ್ಥಿತಿಯಲ್ಲಿ ಸಂಘವೇ ಇಲ್ಲ. ಹಾಗಾಗಿ ಸ್ವಯಂಸೇವಕ ಅದ್ವಾನಿಯವರೊಂದಿಗೆ ಸರಸಂಚಾಲಕರಾದ ಭಾಗವತರು ಮಾತು-ಕತೆ ಯನ್ನಾಡಿ ತೇಪೆ ಹಚ್ಚಲಿದ್ದಾರೆ. ಒಂದೆಡೆ ಫ್ಯಾಶಿಸ್ಟ್ ಮುಖ ಇನ್ನೊಂದೆಡೆ ಉದಾರವಾದದ ಮುಖ ಎರಡೂ ಸಂಘಕ್ಕೆ ಬೇಕು. ಹೇಗಾಗುತ್ತೋ ಹಾಗೆ ಬಳಸಬಹುದಲ್ಲಾ!

ಅಂತೂ, ಈಗ ಬಿಜೆಪಿಗೆ ಯಾ-ರೋ, ಎಂಥವರೋ ನೆಂಟರು ಬೇಕು. ಜೆಡಿಯು ಹೋದರೇನು, ಇನ್ನೊಬ್ಬರು ಬಂದರು ಎಂದು ತೋರಿಸಿಕೊಳ್ಳಬೇಕು. ಹೀಗಾಗಿಯೇ ಅವರೆಲ್ಲಿ ಸಿಕ್ಕಾರು ಅಂತಾ ದುರ್ಬೀನು ಹಾಕಿ ಹುಡುಕುತ್ತಿರುವುದು. ಅದರಲ್ಲಿ ತಕ್ಷಣ ಸಿಕ್ಕವರೆಂದರೆ ಶ್ರೀಮಾನ್ ಯಡಿಯೂರಪ್ಪನವರ ಬಣ!

'ಅನ್ನ ಹಳಸಿತ್ತು ನಾಯಿ ಹಸಿದಿತ್ತು' ಎಂಬ ಸ್ಥಿತಿ ಎರಡೂ ಕಡೆಗಳಲ್ಲಿದೆ. (ಬಿಎಸ್ಸಾರ್ ಸಹ ಹೊರತಲ್ಲ, ಅವರೊಂದಿಗೂ ಚೌಕಾಶಿಗಳು ನಡೆದಿವೆ.) ಕರ್ನಾಟಕದ ವಿಧಾನ ಸಭಾ ಚುನಾವಣೆ ಮತ್ತದರ ಮೊದಲು ಆರೋಪ-ಪ್ರತ್ಯಾರೋಪಗಳ ಸುರಿಮಳೆಯೇ ನಡೆದಿತ್ತು. ಇವರೆಲ್ಲಾ ತೊಲಗಿದ್ದರಿಂದ ಪರಮ ಶುದ್ಧಿಯಾದೆವೆಂದೆಲ್ಲಾ ಸಾರಿತ್ತು. ಬಿಜೆಪಿ ಒಂದು ದ್ರೋಹಿಗಳ, ಕಳ್ಳರ ಕೂಟವೆಂದು ಕೆಜೆಪಿ ಒಂದು ಕಡೆಯಿಂದ ಜರೆದರೆ, ಮತ್ತೊಂದು ಕಡೆಯಿಂದ ಭ್ರಷ್ಟ, ಸ್ವಾರ್ಥಿ, ನೀಚ ಎಂದೆಲ್ಲಾ ಬಿಜೆಪಿ ಪ್ರತ್ಯಾರೋಪ ಮಾಡಿತ್ತು. ಇನ್ನೆಂದೂ ಬಿಜೆಪಿಯತ್ತ ಮುಖ ಮಾಡಿಯೂ ನಿಲ್ಲುವುದಿಲ್ಲ ಎಂದೆಲ್ಲಾ ಹೇಳಿದ್ದವರು ಇಂದು ಕೈ ಹಿಡಿದು ಪ್ರೇಮಗೀತೆ ಹಾಡಲು ಮೆತ್ತಗೆ ಕಳ್ಳ ಹೆಜ್ಜೆ ಹಾಕುತ್ತಿದ್ದಾರೆ! ಅದಕ್ಕೆ ನಾಗಪುರದಲ್ಲಿ ಮಹೂರ್ತವೂ ನಿಗದಿಯಾಗುತ್ತಿದೆ.

ಕಳೆದ ಕೆಲವೇ ದಿನಗಳ ಹಿಂದೆಯಷ್ಟೇ ಯದ್ವಾ ತದ್ವಾ ಮಾತನಾಡಿದ್ದ ಕೆಜೆಪಿ ಚುನಾವಣಾ ಸಮಿತಿಯ ಅಧ್ಯಕ್ಷ ಧನಂಜಯ ಕುಮಾರ್ ಇದೀಗ ಮೋದಿ ಮತ್ತು ಯಡಿಯೂರಪ್ಪನವರ ನಡುವೆ ಮಾತುಕತೆ ನಡೆಸಲು ಸಿದ್ಧತೆ ಆರಂಭಿಸಿದ್ದಾರೆ. ಇದ-ಕ್ಕೆ 'ದೇಶಭಕ್ತ ಸಾಂಸ್ಕೃತಿಕ ಸಂಘಟನೆ' ಪೌರೋಹಿತ್ಯ ವಹಿಸಲಿದೆ. ತಮ್ಮ ವೈರತ್ವ ಅದ್ವಾನಿಯವರ ಮೇಲಿನದೆಂದೂ, ಅವರೀಗ ಮೂಲೆಗೆ ಸರಿದಿರುವುದರಿಂದ ಮೋದಿ ನಾಯಕತ್ವದಲ್ಲಿ ಮತ್ತೇ ಒಂದಾಗಲು ತಮ್ಮದೇನೂ ತಕರಾರು ಇಲ್ಲವೆಂದೂ, ಎಲ್ಲಿದ್ದರೂ ತಾವು ಸ್ವಯಂಸೇವಕರೆಂದು

ಪುಟ 4 ಕ್ಕೆ



ಬಿಜೆಪಿ–ಕೆಜೆಪಿ ಭಾಯಿ...

ಪುಟ 3 ರಿಂದ

ಹೇಳಿಕೊಳ್ಳುತ್ತಿದ್ದಾರೆ. ಅದರಂತೆ ವ್ಯವಹಾರಿಕವಾಗಿ ಬಿಜೆಪಿ ಬಿಟ್ಟರೂ ಆರೆಸ್ಸೆಸ್ ಸಂಪರ್ಕ ಡಾ. ಯಡ್ಡಿ ಕಳೆದುಕೊಂಡಿರಲಿಲ್ಲ. ಹಿಂದೆಲ್ಲಾ ತಾನು ಸೆಕ್ಯುಲರ್ ಎಂದು ಡಂಗೂರ ಹೊಡೆಯುತ್ತಿದ್ದ ಅವರಿಗೆ ಮೋದಿ ಮುಖದಲ್ಲಿ ಈಗ ಸೆಕ್ಯುಲರ್ ಕಳೆ ಕಾಣಿಸುತ್ತಿದೆಯೇ ? ಇಂತಹ ಸಂದರ್ಭಸಾಧಕತೆಯ ನಿದರ್ಶನಗಳಿಗೆ ಮುಂದೆಯೂ ಕೊರತೆ-ಯಂತೂ ಆಗಲಾರದು!

ಗತಿ ಇಲ್ಲ, ಮತಿಯೂ ಇಲ್ಲಾ

ಇತ್ತೀಚಿನ ವಿಧಾನಸಭಾ ಚುನಾವಣೆಯ ಫಲಿತಾಂಶದಿಂದ ಕಂಗಾಲಾದ ಬಿಜೆಪಿಯು ಮರುಕ್ಷಣದಿಂದಲೇ ಈ ಹಾನಿಯನ್ನು ತುಂಬಿಕೊಳ್ಳುವುದರತ್ತ ಕಾರ್ಯಮಗ್ನವಾಯಿತು. ಸೋಲಿನ ರಾಜಕೀಯ ಕಾರಣಗಳ ಬಗ್ಗೆ ಅಷ್ಟಾಗಿ ತಲೆಕೆಡಿಸಿಕೊಳ್ಳದ ಸಂಘವು ಮತದಾನದ ಪ್ರಮಾಣದತ್ತಲೇ ಹೆಚ್ಚು ನಿಗಾವಹಿಸಿದಂತೆ ಕಾಣುತ್ತದೆ. ತನ್ನ ಕರುಳ ಕುಡಿ ಬಿಜೆಪಿ ಸೋತಿರುವಲ್ಲಿ ಮತಗಳ ವಿಭಜನೆಯೇ ಮುಖ್ಯ ಕಾರಣವೆಂದು ಹೇಳುತ್ತಲೇ ಬಂತು. ಹಿಂದಿನ ಚುನಾವಣೆಯಲ್ಲಿ ಬಿಜೆಪಿ ಶೇ. 33.86 ಪಡೆದಿದ್ದರೆ ಈಗ ಶೇ.19.97 ಮಾತ್ರ, ಅದರಿಂದ ಸಿಡಿದು ಹೋಗಿರುವ ಯಡಿಯೂರಪ್ಪನವರ ಕೆಜೆಪಿ ಈಗ ಶೇ.9.83 ಪಡೆದಿದ್ದರೆ, ಗಾಲಿ–ಶ್ರೀರಾಮುಲು ಪಕ್ಷ ಬಿಎಸ್ಸಾರ್ ಶೇ.2.69 ಪಡೆದಿದೆ. ಇವೆಲ್ಲಾ ಸೇರಿದರೆ ಎಂತಹ ಸ್ಥಿತಿಯಲ್ಲಿಯೂ ಗೆಲುವು ತಮಗೇ ಎಂದು ಸರಳ ಲೆಕ್ಕಾಚಾರ ಹಾಕಿದೆ. ಆದ್ದರಿಂದಲೇ ಆ ಎರಡೂ ಪಕ್ಷಗಳೊಂದಿಗೆ ‘ಬೇಕಾದವರ’ ಮೂಲಕ ಮಾತುಕತೆ ಆಡುತ್ತಲೇ ಬಂದಿದ್ದು. ಇದರ ತೀವ್ರತೆ ಎಷ್ಟೆಂದರೆ ‘ಅನಂತಕುಮಾರನನ್ನು ಪಕ್ಕಕ್ಕಿಟ್ಟು(ಕೇಂದ್ರಕ್ಕೆ ಸೀಮಿತಗೊಳಿಸಿ) ಯಡಿಯೂರಪ್ಪನವರನ್ನು ಪುರಸ್ಕರಿಸಿ’ ಎಂದು ಪಂಚಪೀಠದ ರಂಭಾಪುರಿ ಜಗದ್ಗುರುಗಳೇ ಬಹಿರಂಗವಾಗಿ ವಕಾಲತ್ತು ವಹಿಸಿದರು. ಅದು ಪರೋಕ್ಷವಾಗಿ ಬಿಜೆಪಿಯನ್ನು ಬಲಪಡಿಸುವ ಕಾಳಜಿಯೂ ಆಗಿತ್ತು.

ಹೊಸ ಅವತರಣಿಕೆ

ರಾಜ್ಯದಿಂದ ಒಂದೊಮ್ಮೆ 19 ಸಂಸದರನ್ನು ಹೊಂದಿದ್ದ ಬಿಜೆಪಿಗೆ ಮುಂಬರುವ ಚುನಾವಣೆಯಲ್ಲಿ ಹೆಚ್ಚಿನ ಸ್ಥಾನಗಳನ್ನು ಪಡೆಯಲೇಬೇಕು ಎಂದು ಅನಿಸಿದೆ. ಆಕಾಶಕ್ಕೆ ಏಣಿ ಹಾಕಿ ನಿಂತಿದ್ದ ಯಡಿಯೂರಪ್ಪನವರಿಗೆ ತಾನೇನೆಂದು, ತನ್ನನ್ನು ಬಿಟ್ಟರೆ ಏನಾದೀತೆಂದು ಬಿಜೆಪಿಗೆ ತೋರಿಸಿದೆನೆಂಬ ಸೇಡಿನ ಸಂತೋಷ ಮರೆಯಾಗುತ್ತಾ ಮುಂದಿನ ದಿಕ್ಕೇಡಿ ಸ್ಥಿತಿ ನೆನೆದು ಆತಂಕವಾಗುತ್ತಿದೆ. ಸ್ವತಃ ಒಂದು ಪ್ರಾದೇಶಪಕ್ಷವನ್ನು ಕಟ್ಟಿ ನಿಲ್ಲಿಸುವ ಛಾತಿಯಾಗಲೀ, ಕಾಯುವ ಭರವಸೆ, ನಿಜ ಜನ ಕಾಳಜಿಯಾಗಲೀ ಇಲ್ಲದಿರುವಾಗ ಇನ್ನೇನು ಇರಲು ಸಾಧ್ಯ? ಸಿಬಿಐನ ಕುಣಿಕೆ ಹಿಡಿದಿರುವ ಕಾಂಗ್ರೆಸ್‌ನ ರಿಂಗ್ ಮಾಸ್ಟರ್ ತಂತ್ರದ ಬೆದರಿಕೆಯೆದುರು ಯಡ್ಡಿ ನಡೆ ಏನು, ಕಾಂಗ್ರೆಸ್ ನ ತಂತ್ರವೇನು ಮುಂದಷ್ಟೇ ನೋಡಲು ಸಾಧ್ಯ. ಇನ್ನಂತೂ ಸಂದರ್ಭಸಾಧಕತೆಯ ಮತ್ತೊಂದು ಅವತರಣಿಕೆಗೆ ರಂಗ ಸಿದ್ಧತೆಯ ಆರಂಭ!

ಕಾಂಗ್ರೆಸ್‌ನ ತಾಲೀಮು! ಗಾಯಕ್ಕಿದೆಯೇ ಮುಲಾಮು?

ಕರ್ನಾಟಕದ ವಿಧಾನಸಭಾ ಚುನಾವಣೆಯಲ್ಲಿ ಗೆದ್ದ ನಂತರ ಪಾರ್ಲಿಮೆಂಟ್ ಚುನಾವಣೆಯಲ್ಲಿ ಹೆಚ್ಚಿನ ಸ್ಥಾನಗಳನ್ನು ಪಡೆಯಬೇಕೆಂಬುದೇ ಆದ್ಯತೆ ಎಂಬಂತೆ ಅಧಿಕಾರದ ಚುಕ್ಕಾಣಿ ಹಿಡಿದಿರುವ ಕಾಂಗ್ರೆಸ್ ವರ್ತಿಸುತ್ತಿದೆ. ಮೊದಲ ಸುತ್ತಿನಲ್ಲೇ ಹಲವಾರು ಜನಪ್ರಿಯ ಯೋಜನೆಗಳನ್ನು ಘೋಷಿಸಲಾಯಿತು. ನಂತರ ಅವುಗಳ ಆರ್ಥಿಕ ಹೊರೆಯನ್ನರಿತು ‘ಸರ್ಜರಿ’ ಮಾಡಲಾಯಿತು. ಈಗಲೂ ಪ್ರತಿ ಮಂತ್ರಿ ಬಾಯಲ್ಲಿಯೂ ಹೊಸ ಹೊಸ ಯೋಜನೆಗಳು ತುಂಬಿಕೊಂಡಿವೆ. ಉತ್ಸಾಹ ಒಳ್ಳೆಯದೇ. ಆದರೆ ಕರ್ನಾಟಕದ ಜನತೆಯ ಆದ್ಯತೆಗಳೇನು? ಅದ-ಕ್ಕೆ ಹಣಕಾಸು ಹೊಂದಿಸುವುದೆಲ್ಲಿಂದ? ಎಲ್ಲ ಮಗ್ಗಲುಗಳಲ್ಲಿಯೂ ಯೋಚಿಸಬೇಕಲ್ಲ.

ನೆರವು–ಹರಿವು!

ನಿಜ! ಕೇಂದ್ರದಲ್ಲಿಯೂ ಇವರದ್ದೇ ಪಕ್ಷದ ಸರ್ಕಾರವಿರುವಾಗ ರಾಜ್ಯದ ಯೋಜನೆಗಳಿಗೆ ಹಣಕಾಸು ನೆರವು ಸುಲಭವಾಗಿ ತರಬಹುದು ಎಂಬುದು ಒಂದು ಸರಳ ತರ್ಕ. ಒಕ್ಕೂಟದ ವ್ಯವಸ್ಥೆಯೊಳಗೆ ಎಲ್ಲಾ ರಾಜ್ಯಗಳಿಗೂ ನ್ಯಾಯವಾದ ಪಾಲು ಸಿಗಬೇಕೆಂಬುದು ಲಿಖಿತ ನಿಯಮ. ಆದರೆ ಹಾಗಾಗುತ್ತಿಲ್ಲ. ಆ ಹಂಚಿಕೆಗೂ ರಾಜಕೀಯ ಗಣನೆ – ಪರಿಗಣನೆಗಳೇ ಪ್ರಧಾನ ಪಾತ್ರ ವಹಿಸುತ್ತವೆ. ಸದ್ಯ ಎರಡೂ ಕಡೆ ಒಂದೇ ಪಕ್ಷದ ಸರಕಾರಗಳಿವೆ. ಈಗಲೂ ರಾಜ್ಯ ಸರ್ಕಾರದ ಯೋಜನೆಗಳಿಗೆ ಕೇಂದ್ರದ ಧಾರಾಳ ನೆರವು ಸಿಕ್ಕಿತೆ?

‘ನಾವು ಕೂಡಲು ಸಿದ್ದ’ವೆಂದು ಕೇಂದ್ರ ಗ್ರಾಮೀಣ ಅಭಿವೃದ್ಧಿ ಮಂತ್ರಿ ಜಯರಾಮ್ ರಮೇಶ್ ಪ್ರಕಟಿಸಿದ್ದಾರೆ. ಈ ವಾರ ರಾಜ್ಯ-ಕ್ಕೆ ಬಂದಿದ್ದ ಸಚಿವರು ರಾಜ್ಯದ ಹಲವಾರು ಗ್ರಾಮೀಣ ಅಭಿವೃದ್ಧಿ ಯೋಜನೆಗೆ ಸುಮಾರು 5 ಸಾವಿರ ಕೋಟಿಯಷ್ಟು ನೆರವಿನ ಹರಿವನ್ನು ಘೋಷಿಸಿದ್ದಾರೆ. ಇದು ತವರು ರಾಜ್ಯದ ಮೇಲಿನ ಪ್ರೀತಿ ಎಂಬ ಗಿಲೀಟಿನ ವರದಿಗಳಿವೆಯಾದರೂ ಮುಂದಿನ ಪಾರ್ಲಿಮೆಂಟ್ ಚುನಾವಣೆಯ ವಾಸನೆ ಇಲ್ಲದಿಲ್ಲ. ಆದರೆ ರಾಜ್ಯದ ಅಗತ್ಯಗಳು ಬೇಡಿ-ಕೆಯ ಮುಂದೆ ಇದೇನೂ ಹೆಚ್ಚಿನದೇನಲ್ಲ.

ಸಂಪುಟ ವಿಸ್ತರಣೆಯಲ್ಲೂ. .

ಅಂದ ಹಾಗೆ ರಾಜ್ಯದಲ್ಲಿ ಎರಡನೇ ಕಂತಿನ ಸಂಪುಟ ವಿಸ್ತರಣೆ ಇನ್ನೂ ಆಗಿಲ್ಲ. ಕೇಂದ್ರದ್ದು ಆಗಿದೆ. ಈ ಬಾರಿ ಮುಖ್ಯಮಂತ್ರಿಯಾಗುವ ಕನಸನ್ನಿಟ್ಟುಕೊಂಡಿದ್ದ ಕೇಂದ್ರ ಕಾರ್ಮಿಕ ಸಚಿವ ಮಲ್ಲಿಕಾರ್ಜುನ ಖರ್ಗೆಯವರು ಸಂಪುಟದ ವಿಸ್ತರಣೆಯಲ್ಲಿ ಅಂದಿನ ಅಧಿಕಾರದ ಚೌಕಾಶಿಯಿಂದಾಗಿ ರೈಲ್ವೆ ಸಚಿವರಾಗಿ ದೊಡ್ಡ ಆದಾಯದ ಖಾತೆ-ಗೆ ಬಡ್ತಿ ಪಡೆದಿದ್ದಾರೆ. ಇವರಿಂದಲೂ ರಾಜ್ಯ ಹೊಸ ಕೊಡುಗೆಗಳ ನಿರೀಕ್ಷೆಯಿಟ್ಟಿದೆ! ಜೊತೆಗೆ ಕಾಂಗ್ರೆಸ್ (ನಾಯಕರ) ನಿಷ್ಠಾವಂತ (ಸಂತ!)ಆಸ್ಕರ್ ಫರ್ನಾಂಡಿಸ್‌ಗೆ ರಸ್ತೆ ಸಾರಿಗೆ ಮಂತ್ರಿಯಾಗಿ ಮತ್ತೆ ಸೇರ್ಪಡೆ ಮಾಡಿರುವುದು ಅದೇ ಲೆಕ್ಕಾಚಾರದಲ್ಲಿಯೇ. ‘ಅಹಿಂದ’ ಜಾತಿ ಸೂತ್ರದಿಂದ ರಾಜ್ಯದಲ್ಲಿ ಅತ್ಯಧಿಕ ಸಂಸದರನ್ನು ಪಡೆಯುವ ನಿರೀ-ಕ್ಷೆಯ ರಾಜಕಾರಣಕ್ಕೆ ಅನುಗುಣವಾಗಿಯೇ ಈ ವಿಸ್ತರಣೆಯೂ ಇದೆ.

ಅದೇ ರೀತಿ ರಾಜ್ಯಕ್ಕೆ ಉಸ್ತುವಾರಿಯಿದ್ದ ಮೇಸ್ತ್ರಿ ಬದಲು ದಿಗ್ವಿಜಯ್‌ಸಿಂಗ್‌ರನ್ನು ಹೊಸದಾಗಿ ನೇಮಕ ಮಾಡಿರುವುದು ಅಂತಹದೇ ಚುನಾವಣೆಯ ವಿಚಾರದಲ್ಲಿ. ಇನ್ನು ದಿಗ್ವಿಜಯ್‌ಸಿಂಗ್‌ರ ‘ಕಿಡಿ ನುಡಿ’ಗಳಿಂದ ಕಾಂಗ್ರೆಸ್ ಬಲಗೊಳ್ಳವುದೊಂದೇ ಬಾಕಿ ಇದೆ!

ಎಂತಹಾ ಬಜೆಟ್ ?

ಇನ್ನು, ಒಂದು ರೂಪಾಯಿಗೆ ಕೆ.ಜಿ ಅಕ್ಕಿಯನ್ನು ನೀಡಲು ಹೊರಟಿರುವುದು ಬಡಜನರ ಮೇಲಿನ ಕಾಳಜಿಯಿಂದ ಅಲ್ಲವೆಂಬುದು ಜಗಜ್ಜಾಹೀರು! ಅರ್ಹರನ್ನೇ ಎ.ಪಿ.ಎಲ್, ಬಿ.ಪಿ.ಎಲ್, ಎಂದು ವಿಂಗಡಿಸಿರುವುದೇ ಅನ್ಯಾಯ. ಎಪಿಎಲ್ ನವರಿಗೆ ಆ ಅಕ್ಕಿ ಇಲ್ಲವೆಂಬುದು ಯಾವ ನ್ಯಾಯ? ಕೇಂದ್ರ ಇದಕ್ಕಾಗಿ ಅಗತ್ಯ ನೆರವಿನ ಹಸ್ತ ನೀಡಲು ಸಿದ್ಧವಿಲ್ಲ. ಅದು ತನ್ನ ಆರ್ಥಿಕ, ರಾಜಕೀಯ ನೀತಿಗೆ ವಿರುದ್ದವೆಂದೇ ತಿಳಿದಿದೆ. ಆದರೆ ಸಿದ್ದರಾಮಯ್ಯನವರು ಬಿಪಿಎಲ್‌ಗೆ ಜುಲೈ 1 ರಿಂದ ಅಕ್ಕಿ ನೀಡುವುದಾಗಿ ಘೋಷಿಸಿಯೂ ಅಗಿದೆ, ಅಕ್ಕಿ ರಾಜ್ಯದಲ್ಲಿ ಇಲ್ಲವೆಂದು ಛತ್ತೀಸ್‌ಘಡಕ್ಕೆ ಅಧಿಕಾರಿಯ ತಂಡವನ್ನು ಕಳಿಸಿಯೂ ಆಗಿದೆ. ಈ ಯೋಜನೆಯನ್ನು ಇನ್ನಷ್ಟು ವಿಸ್ತರಿಸಬೆಕು ಮತ್ತು ಇದು ಚುನಾವಣೆ ನಂತರ ನಿಲ್ಲಬಾರದು.

ಇನ್ನೇನು ಮುಂದಿನ ಜುಲೈ ಮಧ್ಯದಲ್ಲಿ ಹೊಸ ಸರ್ಕಾರವು ಹೊಸ ಬಜೆಟ್‌ನ್ನು ಮಂಡಿಸಲು ತಯಾರಾಗುತ್ತಿದೆ. ಸ್ವತಃ ಹಣಕಾಸು ಖಾತೆಯನ್ನು ಹೊಂದಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ‘ಒಳ್ಳೆ ಬಜೆಟ್’ ಕೊಡುವುದಾಗಿ ಹೇಳುತ್ತಾರೆ! ವಿಚಿತ್ರವೆಂದರೆ ಸ್ವಂತ ಬಜೆಟ್ ಎಂಬುದು ಬಹುತೇಕ ಕಾಂಗ್ರೆಸ್ ಮತ್ತು ಬಿಜೆಪಿಯಂತಹ ಪಕ್ಷಗಳಲ್ಲಿ ಸಾಧ್ಯವೇ ಇಲ್ಲ. ಯಾಕೆಂದ-ರೆ ಅದನ್ನೆಲ್ಲಾ ವಿಶ್ವ ಹಣಕಾಸು ಸಂಸ್ಥೆಗಳೇ ಬರೆದಿಟ್ಟು ಬಿಟ್ಟಿವೆ, ಪಕ್ಷಗಳು ಪಾಲಿಸುತ್ತವೆ. ವಿಧಾನಸಭೆಗಳು ಆಗಲೇ ಅನುಮೋದಿಸಿ ಕೈ–ಕಾಲು ಕಟ್ಟಿಕೊಂಡಿವೆ. ಇಲ್ಲೇನಿದ್ದರೂ ಅಲಂಕಾರಕ್ಕಷ್ಟೇ ಅವಕಾಶ!

ಹೊರೆ–ಬರೆ !

ಈಗಾಗಲೇ ಬಜೆಟ್ ಪೂರ್ವದಲ್ಲೇ ಸಾರಿಗೆ ಪ್ರಯಾಣ ದರವನ್ನು ಸರಕಾರ ಹೆಚ್ಚಿಸಿ ಬಿಟ್ಟಿದೆ!. ಬಾಯಲ್ಲಿ ಶೇ 10.5 ಎಂದು ಹೇಳಿದ್ದರೂ ಬಹಳಷ್ಟು ಕಡೆ ವಿಶೇಷವಾಗಿ ಗ್ರಾಮಾಂತರದಲ್ಲಿ ಹೆಚ್ಚಳ ಶೇ. 20 ರಿಂದ 22 ದಾಟಿರುವುದೇ ವಾಸ್ತವ. ಪ್ರಮಾಣ ವಚನ ಸ್ವೀಕರಿಸಿದಾಗ ನಗರದ ಬಸ್ ಪಾಸ್ ದರ ಹೆಚ್ಚಳದ ಬಗ್ಗೆ ಮಾಧ್ಯಮಗಳು ಪ್ರಶ್ನಿಸಿದಾಗ ತಗ್ಗಿಸಲು ಸಮಾಲೋಚಿಸುವುದಾಗಿ ಹೇಳಿದ್ದ ಅವರು ಈಗ ‘ನಷ್ಟ ಸರಿದೂಗಿಸಲು’ ಹೆಚ್ಚಳ ಅನಿವಾರ್ಯವೆಂದು ಸಮರ್ಥಿಸಿಕೊಂಡಿದ್ದಾರೆ. ಸಾರಿಗೆಯೆಂಬುದು ಸಾರ್ವಜನಿಕ ಸೇವೆ. ಅಲ್ಪ ಹೊರೆಯಾದರೆ ಸರ್ಕಾರ ವಹಿಸಿಕೊಂಡು ಬೆಲೆ ಏರಿಕೆಯ ಬಾಧೆಯಿಂದ ತತ್ತರಿಸಿರುವ ನಾಗರೀಕರನ್ನು ರಕ್ಷಿಸಬೇಕಾದ್ದು ಅದರ ಕರ್ತವ್ಯ. ಕೇಂದ್ರ ಸರ್ಕಾರ ತೈಲದ ಬೆಲೆ ಏರಿಸುತ್ತ ಹೋಗುವುದು, ರಾಜ್ಯ ಸರ್ಕಾರವೂ ಬರೆ ಎಳೆಯುತ್ತ ಬರುವುದು ಯಾರ ಹಿತದಲ್ಲಿ? ಹಾಗೆಯೇ, ಮುಂಬರುವ ಬಜೆಟ್‌ನಲ್ಲಿ ಭೂಮಿ ಮಾರ್ಗ ಸೂಚಿಗೆ ಹೆಚ್ಚಿನ ತೆರಿಗೆ ವಿಧಿಸುವಂತೆ ಕೋರುವುದಾಗಿ ಕಂದಾಯ ಸಚಿವ ವಿ.ಶ್ರೀನಿವಾಸಪ್ರಸಾದ್‌ರವರು ಹೇಳುತ್ತಿರುವುದು ಬಂಡಾಟದ ಬಜೆಟ್ ಇನ್ನೆಂತಹದಿದ್ದೀತು? ಬಿಜೆಪಿ ದುರಾಡಳಿತದಲ್ಲಿ ಅನುದಿನದ ಕಷ್ಟ ಅನುಭವಿಸುತ್ತಾ, ಬೇಡಿಕೆಗಳನ್ನಿಡುತ್ತಾ ಬಂದಿರುವ ಜನರಿಗೆ ಏನು ಕಾದಿದೆಯೋ ಸಿದ್ಧರೇ ಬಲ್ಲರು!

ಉತ್ತರಖಾಂಡ: ಭೀಕರ ದುರಂತ– ಸಂತ್ರಸ್ತರಿಗೆ ನಿಧಿ ಸಂಗ್ರಹಕ್ಕೆ ಸಿಪಿಐ(ಎಂ) ಕರೆ

ಹಿಮಾಲಯದ ತಪ್ಪಲಿನ ರಾಜ್ಯವಾದ ಉತ್ತರಖಾಂಡ್‌ನಲ್ಲಿ ಸುರಿದ ಭಾರಿ ಮಳೆ ಪರಿಣಾಮವಾಗಿ ಉಂಟಾದ ಹಿಂದೆಂದು ಕಂಡರಿಯದ ಭೀಕರ ದುರಂತದಲ್ಲಿ ಅಪಾರ ಸಾವು ನೋವು ಮತ್ತು ವ್ಯಾಪಕವಾದ ಆಸ್ತಿಪಾಸ್ತಿ ನಷ್ಟವಾಗಿದೆ. ಕೇದಾರನಾಥ ಮತ್ತು ಚಮೇಲಿ ಮುಂತಾದ ಕಡೆ ಆಗಿರುವ ಭಯಾನಕ ಹಾನಿಯ ವಿವರಗಳು ಈಗಿನ್ನೂ ಹೊರಬರುತ್ತಿವೆ. ಸಾವಿಗೀಡಾದವರ ಪ್ರಮಾಣ ದಿನದಿನವೂ ಏರುತ್ತಾ ಹೋಗುತ್ತಿದೆ. ಅಪಾಯದಲ್ಲಿ ಸಿಲುಕಿದವರ ರಕ್ಷಣೆ ಈಗ ಗಂಭೀರ ಸವಾಲಿನ ಪ್ರಶ್ನೆಯಾಗಿದೆ. ಕೇಂದ್ರ ಸರ್ಕಾರ ರಾಜ್ಯ ಸರ್ಕಾರಕ್ಕೆ ಈ ಸಂಬಂಧ ಅಗತ್ಯವಾದ ಎಲ್ಲ ನೆರವನ್ನು ನೀಡಬೇಕಿದೆ.

ವಿದ್ಯುತ್ ಉತ್ಪಾದನಾ ಯೋಜನೆಗಳಿಗಾಗಿ ವಿವೇಚನಾ ರಹಿತವಾದ ರೀತಿಯಲ್ಲಿ ಪರ್ವತವನ್ನು ಕೊರೆದಿರುವುದು ಮತ್ತು ಕೊ-ರೆದ ಮಣ್ಣನ್ನು ಅಲ್ಲಲ್ಲೇ ರಾಶಿ ಬಿಟ್ಟಿರುವುದು ಈ ಅನಾಹುತದ ಪರಿಣಾಮವನ್ನು ಹೇಗೆ ಹೆಚ್ಚಿಸಿದೆ ಎಂಬ ಬಗ್ಗೆ ಮುಂದೆ ತನಿಖೆಯಾಗಬೇಕಿದೆ. ಈಗ ರಾಜ್ಯ ಸರ್ಕಾರ ಎಲ್ಲ ರಾಜಕೀಯ ಶಕ್ತಿಗಳನ್ನು ಮತ್ತು ನಾಗರೀಕ ಸಂಘಟನೆಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಸರ್ವ ಶಕ್ತಿಯನ್ನೂ ಒಗ್ಗೂಡಿಸಿ ಜನರನ್ನು ರಕ್ಷಿಸುವ ಕೆಲಸಕ್ಕೆ ಮುಂದಾಗಬೇಕಿದೆ.

ಸಿಪಿಐ(ಎಂ) ಪಕ್ಷದ ಪೊಲಿಟ್ ಬ್ಯೂರೋ ದುರಂತ ಸಂತ್ರಸ್ತ ಲಕ್ಷಾಂತರ ಕುಟುಂಬಗಳಿಗೆ ತನ್ನ ಸಾಂತ್ವನವನ್ನು ಹೇಳಿದೆ. ಹಾಗೆಯೇ ಸಂತ್ರಸ್ತರಿಗೆ ಪರಿಹಾರ ನಿಧಿ ಸಂಗ್ರಹಿಸಿ ಕೊಡಲು ತನ್ನ ಎಲ್ಲ ಘಟಕಗಳಿಗೆ ಕರೆ ನೀಡಿದೆ.

ಜನಶಕ್ತಿ
ಕನ್ನಡ ವಾರಪತ್ರಿಕೆ

ಕೊರಗ ಸಮುದಾಯದಲ್ಲಿ ಹುಟ್ಟಿದ್ದೇ ತಪ್ಪೇ?

ಬಾಲಕೃಷ್ಣ ಶೆಟ್ಟಿ

ಬುದ್ಧಿವಂತರ ಜಿಲ್ಲೆ, ಮುಂದುವರಿದ ಜಿಲ್ಲೆ ಎಂದೆಲ್ಲ ಬಣ್ಣಿಸಲ್ಪಟ್ಟ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಪ್ರಮುಖ ವೈರುದ್ಯವೊಂದು ಬಹಿರಂಗಗೊಂಡಿದೆ. 'ಹಿಂದೂಗಳು ನಾವೆಲ್ಲ ಒಂದು' ಎಂಬ ಘೋಷಣೆಯ ಮೂಲಕ ಶೋಷಣೆಗೆ ಒಳಗಾದ ಜನರ ಹಾದಿ ತಪ್ಪಿಸಿ ರಾಜಕೀಯ ಅಧಿಕಾರ ಪಡೆಯಲು ಬಯಸುವ ಕಲ್ಲಡ್ಕ ಪ್ರಭಾಕರ ಭಟ್ಟರ ಅನುಯಾಯಿಗಳು ಒಂದೆಡೆ-ಯಾದರೆ (ಇತ್ತೀಚಿನ ಚುನಾವಣೆಗಳಲ್ಲಿ ಸೋಲಾಗಿದೆ). ಇನ್ನೊಂದೆಡೆಯಲ್ಲಿ ಗ್ರಾಮಪಂಚಾಯಿತ್



ಅಧ್ಯಕ್ಷೆಯಾದರೂ ತನ್ನದೇ ಮದುವೆಯಲ್ಲಿ ಪುರೋಹಿತರು ಭಾಗವಹಿಸಲು ಒಪ್ಪದೆ ಇರುವುದು, ಸ್ವಚ್ಛಗೊಳಿಸುವವರು, "ಇದು ಕೊರಗರ ಮದುವೆ ನಾವು ಸ್ವಚ್ಛಗೊಳಿಸಲು ಆಗುವುದಿಲ್ಲ" ಎಂದು ಹೇಳಿರುವುದು ನಡೆದಿದೆ. ಇಂತಹ ಘಟನೆಗಳು ಒಂದಲ್ಲ ಒಂದು ರೀತಿಯಲ್ಲಿ ಈ ಮುಂದುವರಿದ ಜಿಲ್ಲೆಗಳಲ್ಲಿ ನಡೆಯುತ್ತಿವೆ. ಆದರೆ ಕೆಲವು ಮಾತ್ರ ಬೆಳಕಿಗೆ ಬರುತ್ತವೆ.

ಜೂನ್ 5, 2013 ರಂದು ಕೊರಗ ಸಮುದಾಯಕ್ಕೆ ಸೇರಿದ ಕುಂದಾಪುರ ತಾಲ್ಲೂಕಿನ ಗಂಗೊಳ್ಳಿ ಗ್ರಾಮ ಪಂಚಾಯಿತಿ ಅಧ್ಯಕ್ಷೆ ಸಾಕಮ್ಮನವರ ವಿವಾಹ ಭಟ್ಕಳದ ರಾಜೇಶ್ ಅವರೊಂದಿಗೆ ತ್ರಾಸಿ ಎಂಬ ಊರಿನ ಅಣ್ಣಪ್ಪಯ ಸಭಾಭವನದಲ್ಲಿ ನಡೆಯುವುದಿತ್ತು. ವಿವಾಹದ ಎಲ್ಲಾ ಜವಾಬ್ದಾರಿಯನ್ನು ಸಭಾಭವನದ ಮಾಲಕರಿಗೆ ಒಪ್ಪಿಸಿ 42,000/- ರೂ ಹಣವನ್ನು ಪಾವತಿಸಲಾಗಿತ್ತು. ಆದ-ರೆ ವಿವಾಹ ನೆರವೇರಿಸಲೆಂದು ಬಂದ ಪುರೋಹಿತರು ವಧುವರರು ಕೊರಗ ಸಮುದಾಯಕ್ಕೆ ಸೇರಿದವರು ಎಂದು ತಿಳಿದ ಕೂಡಲೇ ವಿವಾಹ ಕಾರ್ಯವನ್ನು ನಡೆಸಲು ಒಪ್ಪದೇ ಅಲ್ಲಿಂದ ಹೊರಟೇ ಬಿಟ್ಟರು. ಉಂಡ ಎಲೆಯನ್ನು ತೆಗೆದು ಸ್ವಚ್ಛ ಮಾಡಲೆಂದು ಬಂದ ಇತರೆ ಸಿಬ್ಬಂದಿ ಕೂಡಾ ಅವರನ್ನು ಹಿಂಬಾಲಿಸಿದರು.

ಅವಮಾನವನ್ನು ತಾಳಲಾಗದ, ಆದರೆ ಮದುವೆ ಎಂಬ ಶಾಸ್ತ್ರವನ್ನು ಮುಗಿಸಲೇ ಬೇಕಾದ ಅನಿವಾರ್ಯ ಸಂದರ್ಭದಲ್ಲಿ ಸಾಕಮ್ಮನವರ ಅಣ್ಣ ಜಿ. ಈಶ್ವರರವರು ಪೋಲೀಸರಿಗೆ ದೂರು ನೀಡಿದ ನಂತರ ಪರ್ಯಾಯ ವ್ಯವಸ್ಥೆ ನಡೆಸಲಾಯ್ತು. ಅಷ್ಟರಲ್ಲಿ 'ಮುಹೂರ್ತ' ಕಳೆದು 2 ಗಂಟೆ ಕಳೆದಿತ್ತು. ಬಡವರಿಗೆ ಎಲ್ಲಿಯ ಮುಹೂರ್ತ? ಹಿಂದೂಗಳು ಒಂದೇ ಎಂಬ ಜನರ ಎಲ್ಲಿ ಹೋದರು?

ವಿಪರ್ಯಾಸವೆಂದರೆ, ವಿಧಾನಸಭಾ ಚುನಾವಣೆಗೆ ಸುಮಾರು ಒಂದು ತಿಂಗಳ ಮೊದಲು ಸಂಘ ಪರಿವಾರದ ಭಟ್ಟಂಗಿಗಳು ಗಂಗೊಳ್ಳಿಯಲ್ಲಿ ಮಸೀದಿ ನಿರ್ಮಾಣ ಮಾಡಬಾರದೆಂದು ಇದೇ ಸಾಕಮ್ಮನವರನ್ನು ಜತೆಯಲ್ಲಿ ಸೇರಿಸಿಕೊಂಡು ಪ್ರತಿಭಟನೆ ನಡೆಸಿದ್ದರು ಮಾತ್ರವಲ್ಲ. ಮಸೀದಿ ಕಟ್ಟಲು ಲೈಸನ್ಸ್‌ಗೆ ಅರ್ಜಿ ಹಾಕಿದುದನ್ನು ಸಾಕಮ್ಮನವರ ಸಹಾಯದಿಂದ 2 ವರ್ಷಗಳ ಕಾಲ ತಡೆಹಿಡಿದಿದ್ದರು! ಆದ-ರೆ ಸಾಕಮ್ಮನವರ ಮದುವೆಗೆ ಮಾತ್ರ ಇವರ್‍ಯಾರೂ ಬಂದಿಲ್ಲ. ಪುರೋಹಿತರು ಬಾರದಿದ್ದಾಗ ಪೌರೋಹಿತ್ಯವನ್ನೂ ನಡೆಸಲು ಮುಂದಾಗಲಿಲ್ಲ.

ಇದೇ ಸಂದರ್ಭದಲ್ಲಿ ಇನ್ನೊಂದು ಘಟನೆಯ ಬಗ್ಗೆ ಕೂಡಾ ಬರೆಯ ಬೇಕಾಗುತ್ತದೆ.

ದ.ಕ. ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕಿನ ನಡ ಗ್ರಾಮದ, 'ಸುರ್ಯ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ'ಯಲ್ಲಿ ದಲಿತ ಯುವತಿ ಸಾವಿತ್ರಿಯವರನ್ನು ಅಡುಗೆ ಸಹಾಯಕಿಯನ್ನಾಗಿ ನೇಮಕ ಮಾಡಲಾಗಿತ್ತು. ಈ ವರ್ಷ ಫೆಬ್ರವರಿ 6 ರಂದು ಅವರು ಕೆಲಸಕ್ಕೆ ಹಾಜರಾದ ದಿನವೇ ಅವರು ಮಾಡಿದ ಅಡುಗೆಯನ್ನು ದಲಿತೇತರ 47 ವಿದ್ಯಾರ್ಥಿಗಳು ಬಹಿಷ್ಕರಿಸಿದರು. ದಲಿತ ಯುವತಿ ತಯಾರು ಮಾಡಿದ ಅಡುಗೆಯನ್ನು ತಮ್ಮ ಮಕ್ಕಳು ಊಟ ಮಾಡುವುದಿಲ್ಲವೆಂದು ಪೋಷಕರು ಮಕ್ಕಳನ್ನು ಮನೆಗೆ ಕ-ರೆದು ಕೊಂಡುಹೋದರು. ದಲಿತಮಕ್ಕಳು 6 ಜನರು ಮಾತ್ರ ಆದಿನ ಊಟ ಮಾಡಿದರು. ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಿ 66 ವರ್ಷ ಕಳೆದರೂ ಮುಂದುವರಿದ ಜಿಲ್ಲೆ, ಬುದ್ಧಿವಂತರ ಜಿಲ್ಲೆಯಲ್ಲಿ ದಲಿತರಿಗೆ ದಿನಾಲೂ ಅವಮಾನ ಆಗುತ್ತಲೇ ಇದೆ.


ಪಟ್ಟಭದ್ರ ಹಿತಾಸಕ್ತಿಗಳ ಹಿಡಿತ :

ದೈವ, ದೇವರುಗಳ ನಾಡಿನಲ್ಲಿ ಚಾತುರ್ವರ್ಣ್ಯವನ್ನು ಪ್ರತಿ ಪಾದಿಸುವವರದ್ದೇ ಪಾರುಪತ್ಯ ನಡೆಯುತ್ತಿದೆ ಎನ್ನೋಣವೇ? ಹಾಗೆ ಹೇಳಿದರೆ ಇಂದಿನ ಪರಿಸ್ಥಿತಿಯನ್ನು ತೀರಾ ಸರಳೀಕರಿಸಿದಂತೆ ಆಗುತ್ತದೆ. ಆದರೂ ಚಾತುರ್ವರ್ಣ್ಯವನ್ನು ಗಟ್ಟಿಗೊಳಿಸಬಯಸುವ ಹಿಂದುತ್ವ ಸಿದ್ಧಾಂತವಾದಿಗಳಾದ ಕಲ್ಲಡ್ಕ ಪ್ರಭಾಕರ ಭಟ್ಟರು ಮತ್ತು ಪೇಜಾವರ ಶ್ರೀಗಳು ಇನ್ನೂ ಸಾಕಷ್ಟು ಪ್ರಭಾವವನ್ನು ಹೊಂದಿದ್ದಾರೆ.

ಪುಟ 7 ಕ್ಕೆ

ಕಾಂ. ಜ್ಯೋತಿಬಸು ಜನ್ಮ ಶತಮಾನೋತ್ಸವ ಆಚರಣೆಗೆ ಕರೆ

ಜುಲೈ 8 – ಕಮ್ಯೂನಿಸ್ಟ್ ಪಕ್ಷ ಮತ್ತು ದೇಶದ ಎಡ ಪಂಥೀಯ ಚಳವಳಿಯ ಒಬ್ಬ ಶ್ರೇಷ್ಠ ನಾಯಕರಾಗಿದ್ದ, ಪಶ್ಚಿಮಬಂಗಾಳದ ಮಾಜಿ ಮುಖ್ಯಮಂತ್ರಿ ಜ್ಯೋತಿಬಸು ಅವರ ಜನ್ಮ ಶತಮಾನೋತ್ಸವದ ಆಚರಣೆಯ ಆರಂಭದ ದಿನವಾಗಿದೆ. ಕಮ್ಯೂನಿಸ್ಟ್ ಪಕ್ಷದಲ್ಲಿ ಏಳು ದಶಕಗಳ ಕಾಲ ಕೆಲಸ ಮಾಡಿದ ಅವರು ಭಾರತೀಯ ರಾಜಕೀಯ ಭೂಪಟದಲ್ಲಿ ತಮ್ಮ ಅಚ್ಚಳಿಯದ ಛಾಪು ಮೂಡಿಸಿ ಹೋಗಿದ್ದಾರೆ.



1940ರಲ್ಲಿ ಕಮ್ಯೂನಿಸ್ಟ್ ಪಕ್ಷ ಸೇರಿದ ಅವರು ಮೊಟ್ಟಮೊದಲು ರೈಲ್ವೆ ಕಾರ್ಮಿಕರ ಸಂಘಟನೆಯಲ್ಲಿ ತೊಡಗಿಕೊಂಡರು. ರೈಲ್ವೆ ವಿಧಾನಸಭಾ ಕ್ಷೇತ್ರದಿಂದ 1946ರಲ್ಲಿ ಬಂಗಾಳ ವಿಧಾನಸಭೆಗೆ ಆಯ್ಕೆಯಾದರು. ತಮ್ಮ ಸುದೀರ್ಘ ಸಂಸದೀಯ ಜೀವನದಲ್ಲಿ ಕಮ್ಯೂನಿಸ್ಟ್ ಮತ್ತು ಇನ್ನಿತರ ಪ್ರಗತಿಪರರ ಸಂಘಟನೆಗಳಿಗೆ ಸಂಸದೀಯ ಸಂಸ್ಥೆಗಳಲ್ಲಿ ಹೇಗೆ ಕೆಲಸ ಮಾಡಬೇಕು, ಹೇಗೆ ಜನರ ಸೇವೆ ಸಲ್ಲಿಸಬೇಕೆಂಬುದಕ್ಕೆ ಜ್ಯೋತಿಬಸು ಮಾದರಿಯಾದರು.

ಪಶ್ಚಿಮ ಬಂಗಾಳ ಮತ್ತು ಅಖಿಲ ಭಾರತ ಮಟ್ಟದಲ್ಲಿ ಕಮ್ಯೂನಿಸ್ಟ್ ಪಕ್ಷದ ಬೆಳವಣಿಗೆಯಲ್ಲಿ ಜ್ಯೋತಿ ಬಸು ಬಹುಮುಖ್ಯ ಪಾತ್ರವಹಿಸಿದರು. 1954ರಿಂದ 1960ರವರೆಗೂ ಸಿಪಿಐ ಪ್ರಾಂತೀಯ ಸಮಿತಿಯ ಕಾರ್ಯದರ್ಶಿಯಾಗಿದ್ದರು. 1951ರಲ್ಲಿ ಸಿಪಿಐ ಕೇಂದ್ರ ಸಮಿತಿ ಸದಸ್ಯರಾದರು. ಸಿಪಿಐ (ಎಂ) ರಚನೆಯಾದಾಗ ಅವರು ಪಕ್ಷದ ಪಾಲಿಟ್ ಬ್ಯೂರೋ ಹಾಗೂ ಕೇಂದ್ರಿಯ ಸಮಿತಿಯ ಸಂಸ್ಥಾಪಕ ಸದಸ್ಯರಾದರು.


1977ರಲ್ಲಿ ಪಶ್ಚಿಮ ಬಂಗಾಳದ ಎಡ ಸರ್ಕಾರದ ಮುಖ್ಯಮಂತ್ರಿಯಾದರು. 2000ನೇ ಇಸವಿಯವರೆಗೂ ನಿರಂತರವಾಗಿ ಅವರು ಆ ಸ್ಥಾನದಲ್ಲಿದ್ದರು.. ಇದಕ್ಕೂ ಮುನ್ನ 1967–1970ರ ನಡುವೆ ಎರಡು ಸಲ ಅವರು 'ಸಂಯುಕ್ತ ರಂಗ' ಸರ್ಕಾರಗಳ ಉಪಮುಖ್ಯಮಂತ್ರಿಯಾಗಿದ್ದರು. ಜ್ಯೋತಿ ಬಸು ಅವರ ನಾಯಕತ್ವದಲ್ಲಿ ಸರ್ಕಾರ ಭೂ ಸುಧಾರಣೆ ಹಾಗೂ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಜಾರಿಗೆ ತಂದಿತು.

ಜ್ಯೋತಿಬಸು ಅವರ ಮುಖ್ಯಮಂತ್ರಿತನದಲ್ಲಿ ಪಶ್ಚಿಮ ಬಂಗಾಳ ಕೋಮು ಸೌಹಾರ್ದತೆ ಹಾಗೂ ಜಾತ್ಯತೀತ ಮೌಲ್ಯಗಳ ತೊಟ್ಟಿಲಾಯಿತು. ಜ್ಯೋತಿಬಸು ಅವರು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಸಂಬಂಧಗಳ ಪುನರ್‌ರಚನೆ ಮತ್ತು ಒಕ್ಕೂಟ ವ್ಯವಸ್ಥೆಯ ಸ್ಥಾಪನೆಯ ಪರ ಪ್ರತಿಪಾದನೆಯಲ್ಲಿ ಮುಂಚೂಣಿ ಪಾತ್ರವಹಿಸಿದರು.

ಜ್ಯೋತಿಬಸು ಅವರು ಮಾರ್ಕ್ಸ್‌ವಾದವನ್ನು ಭಾರತೀಯ ಸಮಾಜದ ನಿರ್ದಿಷ್ಟ ಪರಿಸ್ಥಿತಿಗಳಿಗೆ ಸೃಜನಶೀಲವಾಗಿ ಅನ್ವಯಿಸಿದ ಮುಖಂಡರಾಗಿದ್ದರು. ಪಕ್ಷವನ್ನು ಮುನ್ನಡೆಸುವ ಹಾದಿಯ ನೀಲನಕ್ಷೆ ರೂಪಿಸುವಲ್ಲಿ ಅವರು ಅಗಾಧ ಕಾಣಿಕೆ ನೀಡಿದರು.

ಜ್ಯೋತಿಬಸು ತಮ್ಮ ಜೀವಿತಾವಧಿಯ ಉದ್ದಕ್ಕೂ ಎಡ, ಪ್ರಜಾಸತ್ತಾತ್ಮಕ ಮತ್ತು ಜಾತ್ಯತೀತ ಶಕ್ತಿಗಳ ಸಂಕೇತವಾಗಿದ್ದರು.

ಜುಲೈ 8 2013 ರಿಂದ ಒಂದು ವರ್ಷ ಜ್ಯೋತಿಬಸು ಅವರ ಜನ್ಮ ಶತಮಾನೋತ್ಸವ ಆಚರಿಸಲು ಸಿಪಿಐ(ಎಂ) ಪಾಲಿಟ್ ಬ್ಯೂ-ರೊ ಕರೆ ನೀಡಿದೆ. (ಬೆಲೆಕಟ್ಟಲಾಗದ) ಮಹಾನ್ ನಾಯಕ ಜ್ಯೋತಿ ಬಸು ಅವರ ಜೀವನ ಕೊಡುಗೆಗಳ ಕುರಿತು ಪ್ರಚುರ ಪಡಿಸುವ ಸಭೆಗಳು, ವಿಚಾರ ಸಂಕಿರಣ, ವಿಶೇಷ ಪ್ರಚಾರಗಳ ಮೂಲಕ ಇದು ನಡೆಯಬೇಕಿದೆ.



ವಾ.ಉ

ಕರಾವಳಿ ನಗರಗಳಲ್ಲಿ ಸಿಐಟಿಯು ಪ್ರತಿಭಟನಾ ದಿನ

ಸಿಐಟಿಯು 43ನೇ ಸಂಸ್ಥಾಪನಾ ದಿನದ ಅಂಗವಾಗಿ 2013 ಮೇ 30 ರಿಂದ ಹಮ್ಮಿಕೊಂಡಿದ್ದ ರಾಷ್ಟ್ರವ್ಯಾಪಿ ಪ್ರಚಾರಾಂದೋಲನದ ಭಾಗವಾಗಿ, ದ.ಕ. ಮತ್ತು ಉಡುಪಿ ಜಿಲ್ಲೆಗಳ ಪ್ರಮುಖ ಪಟ್ಟಣಗಳಲ್ಲಿ ಜೂನ್ 14 ರಂದು ಸಿಐಟಿಯು ಕಾರ್ಮಿಕ ಸಂಘಟನೆಗಳು ತಮ್ಮ ಬೇಡಿಕೆಗಳನ್ನು ಒತ್ತಾಯಿಸಿ ಪ್ರತಿಭಟನಾ ದಿನ ಆಚರಿಸಿದವು.



ಮಂಗಳೂರು

ಬೆಲೆ ಏರಿಕೆ ನಿಯಂತ್ರಿಸಿ - ಎಲ್ಲ ಕುಟುಂಬಗಳಿಗೆ ರೇಶನ್ ವ್ಯವಸ್ಥೆ ಕಲ್ಪಿಸುವ ಸಾರ್ವತ್ರಿಕ ಪಡಿತರ ವ್ಯವಸ್ಥೆ ಜಾರಿಗೊಳಿಸಿ, ಸಾರ್ವಜನಿಕ ಉದ್ದಿಮೆಗಳ ಶೇರು ವಿಕ್ರಯ ಖಾಸಗೀಕರಣ ನಿಲ್ಲಿಸಿ, ಕಾರ್ಮಿಕ ಕಾನೂನುಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಿ, ಸರ್ಕಾರದ ವಿವಿಧ ಸ್ಕೀಮುಗಳಡಿ ದುಡಿಯುವ ಸಿಬ್ಬಂದಿಯನ್ನು ನೌಕರರೆಂದು ಪರಿಗಣಿಸಿ ಈ ಮೊದಲಾದ ಕಾರ್ಮಿಕ ವರ್ಗದ ಬೇಡಿಕೆಗಳನ್ನು ಈಡೇರಿಸಬೇಕೆಂದು ಈ ಸಂದರ್ಭದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರವನ್ನು ಆಗ್ರಹಿಸಲಾಯಿತು.

ಕರಾವಳಿ ಜಿಲ್ಲೆಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ದುಡಿಯುತ್ತಿರುವ ಬೀದಿ ಬದಿ ವ್ಯಾಪಾರಿಗಳ ಬೇಡಿಕೆಯಾದ ರಾಷ್ಟ್ರೀಯ ಸ್ವಾಸ್ಥ್ಯ ಬಿಮಾ ಯೋಜನೆಯನ್ನು ಜಾರಿಗೊಳಿಸುವುದು, ಬೀಡಿ ಕಾರ್ಮಿಕರಿಗೆ ರಾಷ್ಟ್ರೀಯ ಮಟ್ಟದಲ್ಲಿ ಕನಿಷ್ಠ ಕೂಲಿ ರೂ.200 ಜಾರಿ ಮಾಡುವುದು, ಬೀಡಿ ಕಾರ್ಮಿಕರ ಮಕ್ಕಳಿಗೆ ಈ ಹಿಂದಿನಂತೆಯೇ 8ನೇ ತರಗತಿ ವರೆಗೆ ವಿದ್ಯಾರ್ಥಿ ವೇತನ ನೀಡುವುದು ಮತ್ತು ವಿದ್ಯಾರ್ಥಿ ವೇತನ ನೀಡಲು 'ಆಧಾರ್' ಕಾರ್ಡು ಕಡ್ಡಾಯಗೊಳಿಸುವ ಆದೇಶವನ್ನು ಸರಕಾರ ಹಿಂತೆಗೆದುಕೊಳ್ಳುವುದು, 2012-13ರ ತನಕ ಅರ್ಜಿ ಸಲ್ಲಿಸಿದ ಎಲ್ಲ ಕಟ್ಟಡ ಕಾರ್ಮಿಕರಿಗೆ ಪರಿಷ್ಕೃತಗೊಂಡ ಸೌಲಭ್ಯಗಳನ್ನು ನೀಡುವುದು - ಇವೇ ಮೊದಲಾದ ಬೇಡಿಕೆಗಳಿಗೆ ವಿಶೇಷವಾದ ಒತ್ತಾಯ ಮಾಡಲಾಯಿತು.

ಮಂಗಳೂರು:

ಒಂದು ರೂಪಾಯಿಗೆ ಒಂದು ಕೆ.ಜಿ.ಯಂತೆ ತಿಂಗಳಿಗೆ 30 ಕೆ.ಜಿ. ಅಕ್ಕಿಯನ್ನು ಬಿಪಿಎಲ್ ಕುಟುಂಬಗಳಿಗೆ ನೀಡುವುದಾಗಿ ಭರವಸೆ ನೀಡಿದ್ದ ರಾಜ್ಯ ಸರ್ಕಾರ ತನ್ನ ನಿಲುವನ್ನು ಬದಲಿಸಿ, ಅಕ್ಕಿ ನೀಡಿಕೆ ಪ್ರಮಾಣವನ್ನು ಬದಲಾಯಿಸಲು ಕೈಗೊಂಡ ನಿರ್ಧಾರ ಅವೈಜ್ಞಾನಿಕವಾಗಿದೆ ಎಂಬುದಾಗಿ ಸಿಐಟಿಯು ರಾಜ್ಯ ಸಮಿತಿ ಉಪಾಧ್ಯಕ್ಷರಾದ ಬಿ.ಮಾಧವ ಹೇಳಿದ್ದಾರೆ.

ದ.ಕ. ಜಿಲ್ಲಾಧಿಕಾರಿ ಕಚೇರಿ ಎದುರು ನಡೆದ ಪ್ರತಿಭಟನಾ ಪ್ರದರ್ಶನವನ್ನು ಉದ್ದೇಶಿಸಿ ಅವರು ಮಾತನಾಡುತ್ತಿದ್ದರು. ಕೇಂದ್ರ ಸರಕಾರ ತರಲು ಬಯಸಿರುವ ಆಹಾರ ಭದ್ರತೆ ಕಾಯಿದೆಯಲ್ಲೂ ಲೋಪಗಳಿದ್ದು, ಅದನ್ನು ಸರಿಪಡಿಸದೆ ಜಾರಿಗೆ ತಂದರೆ ಅದರಿಂದ ಬಡವರು, ಕಾರ್ಮಿಕ ವರ್ಗದವರಿಗೆ ಅನ್ಯಾಯವಾಗುವ ಅಪಾಯವಿದೆ ಎಂದು ವಿವರಿಸಿದರು.

ಮಂಗಳೂರಿನಲ್ಲಿ ನಡೆದ ಪ್ರತಿಭಟನಾ ಪ್ರದರ್ಶನದಲ್ಲಿ ಮಂಗಳೂರು ನಗರ, ಉಳ್ಳಾಲ ಮತ್ತು ಬಂಟ್ವಾಳ ವಲಯದ ಸಿಐಟಿಯು ನೇತೃತ್ವದ ಕಾರ್ಮಿಕರು ಭಾಗವಹಿಸಿದ್ದರು. ಪ್ರತಿಭಟನೆಯನ್ನುದ್ದೇಶಿಸಿ ಸಿಐಟಿಯು ದ.ಕ. ಜಿಲ್ಲಾ ಸಮಿತಿ ಅಧ್ಯಕ್ಷ ಜೆ.ಬಾಲಕೃಷ್ಣ ಶೆಟ್ಟಿ, ಪ್ರಧಾನ ಕಾರ್ಯದರ್ಶಿ ವಸಂತ ಆಚಾರಿ ಮಾತನಾಡಿದರು. ಸಿಐಟಿಯು ಮುಖಂಡರಾದ ಸುನಿಲ್ ಕುಮಾರ್ ಬಜಾಲ್, ಜಯಂತಿ ಬಿ.ಶೆಟ್ಟಿ, ಭಾರತಿ ಬೋಳಾರ್, ಬಾಬು ದೇವಾಡಿಗ, ಸಂಜೀವ ಬಂಗೇರ, ರಾಮಣ್ಣ ವಿಟ್ಲ, ಶಶೀಂದ್ರ ಕುಕ್ಯಾನ್, ಸಿಪಿಎಂ ಉಳ್ಳಾಲ ವಲಯ ಕಾರ್ಯದರ್ಶಿ ಕೃಷ್ಣಪ್ಪ ಸಾಲ್ಯಾನ್ ವಿವಿಧ ಕಾರ್ಮಿಕ ಸಂಘಗಳ ಮುಖಂಡರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಉಡುಪಿ:

ಉಡುಪಿಯಲ್ಲಿ ನಡೆದ ಪ್ರತಿಭಟನಾ ಪ್ರದರ್ಶನ ಉಡುಪಿ ತಾಲೂಕು ಕಚೇರಿ ಎದುರು ನಡೆಯಿತು. ಪ್ರತಿಭಟನಾಕಾರರನ್ನುದ್ದೇಶಿಸಿ ಸಿಐಟಿಯು ಮುಖಂಡರು ಮಾತನಾಡಿದರು.

ಸಿಐಟಿಯು ಉಡುಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಾಲಕೃಷ್ಣ ಶೆಟ್ಟಿ, ಉಪಾಧ್ಯಕ್ಷರಾದ ಪಿ.ವಿಶ್ವನಾಥ ರೈ, ದೋಗು ಸುವರ್ಣ, ಜಂಟಿ ಕಾರ್ಯದರ್ಶಿ ಲಕ್ಷ್ಮಿ, ಮುಖಂಡರಾದ ಕೆ.ಲಕ್ಷ್ಮಣ್, ಸುಜಾತ ಶೆಟ್ಟಿ, ಉಮೇಶ್, ಜ್ಯೋತಿ, ಸತೀಶ್ ಪೂಜಾರಿ ಉಪಸ್ಥಿತರಿದ್ದರು.

ಮೂಡಬಿದ್ರೆ:

ಮೂಡಬಿದ್ರೆ ತಹಶೀಲ್ದಾರ್ ಕಚೇರಿ ಎದುರು ಮೂಡಬಿದ್ರೆ ವಲಯ ಸಿಐಟಿಯು ಕಾರ್ಮಿಕರು ಪ್ರತಿಭಟನಾ ಪ್ರದರ್ಶನ ನಡೆಸಿದರು.

ಪ್ರತಿಭಟನಾಕಾರರನ್ನು ಉದ್ದೇಶಿಸಿ ಸಿಐಟಿಯು ರಾಜ್ಯ ಉಪಾಧ್ಯಕ್ಷರಾದ ರಮಣಿ,



ಉಡುಪಿ

ಮೂಡಬಿದ್ರೆ ವಲಯ ಸಿಪಿಎಂ ಕಾರ್ಯದರ್ಶಿಯಾದವ ಶೆಟ್ಟಿ ಮಾತನಾಡಿದರು. ಸಿಐಟಿಯು ವಲಯಾಧ್ಯಕ್ಷ ಶಂಕರ, ಕಾರ್ಯದರ್ಶಿ ರಾಧ, ಅಕ್ಷರ ದಾಸೋಹ ಸಂಘಟನೆಯ ಜಿಲ್ಲಾಧ್ಯಕ್ಷೆ ಗಿರಿಜಾ, ಕಾರ್ಮಿಕ ಮುಖಂಡರಾದ ವಿಶ್ವನಾಥ, ಪ್ರಾಂತ ರೈತ ಸಂಘದ ಸುಂದರ ಶೆಟ್ಟಿ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಬೆಳ್ತಂಗಡಿ:

ಬೆಳ್ತಂಗಡಿ ತಾಲೂಕು ಸಿಐಟಿಯು ಕಾರ್ಮಿಕರು ಬೆಳ್ತಂಗಡಿ ತಾಲೂಕು ಕಚೇರಿ ಎದುರು ಪ್ರತಿಭಟನಾ ಪ್ರದರ್ಶನ ನಡೆಸಿದರು.

ಪ್ರತಿಭಟನಾಕಾರರನ್ನುದ್ದೇಶಿಸಿ ಸಿಐಟಿಯು ತಾಲೂಕು ಸಮಿತಿ ಅಧ್ಯಕ್ಷ ಬಿ.ಎಂ.ಭಟ್ ಮಾತನಾಡಿದರು. ಸಿಐಟಿಯು ತಾಲೂಕು ಸಮಿತಿ ಮುಖಂಡರುಗಳಾದ ಎಸ್.ಎಂ.ಶಿವಕುಮಾರ್, ನೀಲೇಶ್ ಪೆರಿಂಜೆ, ವಸಂತ ನಡ, ಶೇಖರ ಲಾಯಿಲ, ಜಯರಾಮ ಮಯ್ಯ, ವಿವಿಧ ಕಾರ್ಮಿಕ ಸಂಘಗಳ ಕಾರ್ಯಕರ್ತರಾದ ಜಯಂತಿ ನೆಲ್ಲಿಂಗೇರಿ, ದೇವಕಿ ಕಳಂಜ, ರೋಹಿಣಿ ಪೆರಾಡಿ, ಸಂಜೀವ ನಾಯಿಕ್, ಸೌ... ಪಿಲ್ಯ, ಜಯಶ್ರೀ ಕಳಂಜ ಮತ್ತಿತರರು ಹಾಜರಿದ್ದರು.

ಗುರುಪುರ:

ಗುರುಪುರ ವಲಯ ಸಿಐಟಿಯು ಕಾರ್ಮಿಕರು ಗುರುಪುರ ಕೈಕಂಭದಲ್ಲಿರುವ ನಾಡ ಕಚೇರಿ ಎದುರು ಪ್ರತಿಭಟನಾ ಪ್ರದರ್ಶನ ನಡೆಸಿದರು.

ಪ್ರತಿಭಟನೆಯನ್ನುದ್ದೇಶಿಸಿ ಗುರುಪುರ ವಲಯ ಸಿಐಟಿಯು ಅಧ್ಯಕ್ಷರಾದ ಗಂಗಯ್ಯ ಅಮೀನ್, ಕಾರ್ಯದರ್ಶಿ ಸದಾಶಿವ ದಾಸ್ ಮಾತನಾಡಿದರು. ಸಿಐಟಿಯು ವಲಯ ಸಮಿತಿ ಮುಖಂಡರುಗಳಾದ ನೋಣಯ್ಯ ಗೌಡ, ವಸಂತಿ ಕುಪ್ಪೆಪದವು ಮತ್ತಿತರರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ನೀವು 'ಜನಶಕ್ತಿ'ಯ ಚಂದಾದಾರರೇ? ಏಜೆನ್ಸಿದಾರರೇ? ದಯವಿಟ್ಟು ಗಮನಿಸಿ

'ಜನಶಕ್ತಿ ಕನ್ನಡ ವಾರ ಪತ್ರಿಕೆ'ಯ ಆಡಳಿತ ಮತ್ತು ಪ್ರಸಾರ ನಿರ್ವಹಣೆಯ ಜವಾಬ್ದಾರಿ ಬದಲಾವಣೆಯಾಗಿರುವುದನ್ನು ಈಗಾಗಲೇ ಗಮನಿಸಿದ್ದೀರಿ ಎಂದು ಭಾವಿಸುತ್ತೇವೆ. ಹೊಸ ಚಂದಾಗಳ ನೀಡಿಕೆ, ವಿಳಾಸ ಬದಲಾವಣೆ, ಪತ್ರಿಕೆ ತಲುಪದಿರುವ ಬಗೆಗಿನ ದೂರುಗಳು, ಏಜೆನ್ಸಿದಾರರ ಪತ್ರಿಕೆಗಳ ಹೆಚ್ಚಳ, ಬಾಕಿ ವಿಚಾರಣೆ, ಹಣ ಪಾವತಿ, ದೂರುಗಳು ಹಾಗೂ ಜಾಹಿರಾತುಗಳಿಗೆ ಸಂಬಂಧಿಸಿದ ಎಲ್ಲ ವ್ಯವಹಾರ, ವಿಚಾರಣೆ ಇತ್ಯಾದಿಗಳನ್ನು ಇನ್ನು ಮುಂದೆ ಈ ಕೆಳಗಿನ ವಿಳಾಸದಲ್ಲೇ ಮಾಡುವುದು. ಕಚೇರಿಯ ನೇರ ಸಂಪರ್ಕವು ಕಛೇರಿ ಕಾರ್ಯ ನಿರ್ವಹಿಸುವ ನಿರ್ದಿಷ್ಟ ಅವಧಿಯಲ್ಲಿ ಮಾತ್ರ ಲಭ್ಯವಿರುತ್ತದೆ ಎಂಬುದನ್ನು ಗಮನಿಸತಕ್ಕದ್ದು.

ವಿಳಾಸ : 'ಜನಶಕ್ತಿ' ಆಡಳಿತ ಕಚೇರಿ,
c/o. ಕ್ರಿಯಾ ಪ್ರಕಾಶನ, ಸೂರಿ ಭವನ, # 40/5, 2ನೇ 'ಬಿ' ಮೈನ್, 16ನೇ ಕ್ರಾಸ್, ಸಂಪಂಗಿರಾಮನಗರ, ಬೆಂಗಳೂರು-560027
email : janashakthi13.admn@gmail.com
Phone : 22234369
ಹೆಚ್.ಆರ್.ಸವಿತ ರಾಣಿ : 9483966467,
ಜಿ.ಚಂದ್ರಶೇಖರ್ : 9448578021
(ಕಾರ್ಯಾಲಯದ ಸಮಯ: ಬೆಳಿಗ್ಗೆ 10.00 ರಿಂದ ಸಂಜೆ 6.00 ಗಂಟೆವರೆಗೆ)

‘ಪೇಜಾವರ ಶ್ರೀಗಳ ಹೇಳಿಕೆ ಅವಾಸ್ತವ’ : ಖಂಡನೆ

ಪೇಜಾವರ ಮಠದ ಶ್ರೀಗಳಾದ ವಿಶ್ವೇಶ್ವರ ತೀರ್ಥ ಸ್ವಾಮೀಜಿಯು ಉಡುಪಿ ಶ್ರೀ ಕೃಷ್ಣ ದೇವಸ್ಥಾನದ ಕುರಿತಾಗಿ ನೀಡಿದ ಹೇಳಿಕೆಯು ಅವಾಸ್ತವ ಎಂದು ಸಿಪಿಐ(ಎಂ) ಕರ್ನಾಟಕ ರಾಜ್ಯ ಕಾರ್ಯದರ್ಶಿ ಜಿ.ವಿ. ಶ್ರೀರಾಮರೆಡ್ಡಿ ಹೇಳಿಕೆ ನೀಡಿದ್ದಾರೆ.

ಸ್ವಾಮೀಜಿ ತಮ್ಮ ಹೇಳಿಕೆಯ ಮೂಲಕ ಶ್ರೀ ಯಡಿಯೂರಪ್ಪನವರನ್ನು ಬಚಾವು ಮಾಡಲು ಪ್ರಯತ್ನಿಸಿದ್ದಾರೆ ಮಾತ್ರವಲ್ಲ ಶ್ರೀಕೃಷ್ಣ ಮಠವನ್ನು ಮುಜರಾಯಿ ಇಲಾಖೆಗೆ ತಂದದ್ದು ರೂಪಾಯಿ 50,000 ಲಂಚ ಕೇಳಿದ ಅಧಿಕಾರಿ ಎಂದು ಹೇಳಿದ್ದು ಸತ್ಯಕ್ಕೆ ದೂರವಾದ ಸಂಗತಿಯಾಗಿದೆ.

ಕಾರಣ 1997ರ ಕರ್ನಾಟಕ ಹಿಂದೂ ಧಾರ್ಮಿಕ ಮತ್ತು ಸೇವಾ ಸಂಸ್ಥೆಗಳ ಕಾಯ್ದೆ ಅನುಸರಿಸಿ ಉಡುಪಿ ಶ್ರೀ ಕೃಷ್ಣ ಮಠವೂ ಸೇರಿ ಕೆಲವು ದೇವಸ್ಥಾನಗಳನ್ನು ಮುಜರಾಯಿ ಇಲಾಖೆಯ ವ್ಯಾಪ್ತಿಯಲ್ಲಿ ತರಲಾಗಿತ್ತು. ಈ ಕಾಯ್ದೆಯನ್ನು ತಂದದ್ದು ಜನತಾದಳದ ಮುಖ್ಯಮಂತ್ರಿ ಜೆ.ಹೆಚ್. ಪಟೇಲ್ ಕಾಲದಲ್ಲಿ. ಅದೇ ಮಂತ್ರಿ ಮಂಡಲದಲ್ಲಿ ಸಿದ್ದರಾಮಯ್ಯನವರು ಮಂತ್ರಿಯಾಗಿದರು. ಈ ಕಾಯ್ದೆಯ ಅಡಿಯಲ್ಲಿ ಮಾಡಿದ ನಿಯಮಾವಳಿ ಮತ್ತು ಇಸ್ತಿಹಾರು ಪ್ರಕಟಣೆ ಎಸ್.ಎಂ. ಕೃಷ್ಣ ಮುಖ್ಯಮಂತ್ರಿಯಾದ ಸಮಯದಲ್ಲಿ ಆಗಿತ್ತು.



1997ರ ಕಾಯ್ದೆ ಜಾತ್ಯಾತೀತವಾದ ಅಂಶಗಳನ್ನು ಒಳಗೊಂಡದ್ದಾಗಿತ್ತು, ಆಯುಕ್ತರು ಮಾತ್ರ ಹಿಂದೂವಾಗಿರಬೇಕೆಂಬ ವಿಧಿಯು ಈ ಕಾನೂನಿನಲ್ಲಿತ್ತು. 1997ರ ಕಾನೂನಿನ ಪ್ರಕಾರ ಅರ್ಚಕರ ನೇಮಕಾತಿ ಹಣಕಾಸಿನ ವ್ಯವಹಾರ ಅಗತ್ಯವಿದ್ದರೇ ದೇವಸ್ಥಾನಕ್ಕೆ ಅನುದಾನ ನೀಡುವುದು, ಸಲಹಾ ಸಮಿತಿಯ ಆಡಳಿತ ಇವೆಲ್ಲವೂ ಕಾನೂನುಬದ್ಧವಾಗಿ ನಡೆಸಬೇಕಾಗಿತ್ತು. ಈ ಕಾಯ್ದೆ ಅನುಸರಿಸಿ ಮಠಗಳ ಆಡಳಿತದಲ್ಲಿದ್ದ ದೇವಸ್ಥಾನಗಳು ಒಳಪಡಬೇಕಾಗಿತ್ತು. ಹಾಗಾಗಿ 800 ವರ್ಷಗಳಿಂದ ಪರ್ಯಾಯ ಮಠಗಳ ನಿಯಂತ್ರಣದಲ್ಲಿದ್ದ ಶ್ರೀಕೃಷ್ಣ ದೇವಸ್ಥಾನ 1997ರ ಕಾನೂನಿನ ಅನುಸಾರ 2011ರವರೆಗೂ ಸರ್ಕಾರದ ನಿಯಂತ್ರಣದಲ್ಲೇ ಇದ್ದದ್ದು. ಶ್ರೀ ಯಡಿಯೂರಪ್ಪ ಮಾಡಿದ್ದಾರೆ ಎಂದು ಹೇಳುತ್ತಿರುವ "ಡಿ-ನೋಟಿಫಿಕೇಷನ್" ಒಂದು ಲಂಚಕೋರ ಅಧಿಕಾರಿಯ ಕೃತ್ಯವನ್ನು ಸರಿಪಡಿಸಿದಲ್ಲ, 1997ರ ಕಾನೂನನ್ನು 2011ರಲ್ಲಿ ತಿದ್ದುಪಡಿ ಮಾಡಲಾಗಿದೆ ಎಂಬುದೇ ನಿಜ. 2011ರ ತಿದ್ದುಪಡಿ 1997ರ ಕಾನೂನಿನ ಜಾತ್ಯಾತೀತ ಅಂಶಗಳನ್ನು ಮೊಟಕುಗೊಳಿಸಿದೆ. ನಿರ್ದಿಷ್ಟವಾಗಿ 2011ರ ತಿದ್ದುಪಡಿ ಮಠಗಳ ಅಡಳಿತದಲ್ಲಿರುವ ದೇವಸ್ಥಾನಗಳನ್ನು 1997ರ ಕಾನೂನಿನ ವ್ಯಾಪ್ತಿಯಿಂದ ತೆಗೆದದ್ದೇ ಯಡಿಯೂರಪ್ಪನವರ ಕೃತ್ಯ.

ಉಡುಪಿ ಶ್ರೀಕೃಷ್ಣ ಮಠವನ್ನು 1997ರ ಕಾಯ್ದೆಯ ಅಡಿಯಿಂದ ಹೊರಗೆ ತಂದ ಯಡಿಯೂರಪ್ಪನವರನ್ನು ಕುರಿತು ಸ್ವಾಮೀಜಿ ಹೆಮ್ಮೆಯಿಂದ ಹೇಳಿಕೊಳ್ಳುವುದು ಸರಿಯಷ್ಟೇ.ಮುಜರಾಯಿ ಇಲಾಖೆಯ ಅಡಿಯಲ್ಲಿ ನಮ್ಮ ದೇವಸ್ಥಾನ ಬಂದರೆ ನಾವು ಸೇವಕರಾಗಿ ಇರಬೇಕಾಗುತ್ತದೆ ಎಂಬ ಸ್ವಾಮೀಜಿಯವರ ಹೇಳಿಕೆಯೂ ನಿಜವಲ್ಲ. ಎಸ್.ಎಂ. ಕೃಷ್ಣ, ಧರ್ಮಸಿಂಗ್ ಮತ್ತು ಕುಮಾರಸ್ವಾಮಿಯೂ ಆಡಳಿತದಲ್ಲಿ ಸ್ವಾಮೀಜಿಗಳಾಗಲಿ, ಮಠದವರಾಗಲೀ ಸೇವಕರಾಗಿ ಇರಲಿಲ್ಲ ಎಂಬುದೇ ವಾಸ್ತವ. 1997ರ ಕಾಯ್ದೆ ಅನುಸರಿಸಿ ಸಲಹಾ ಸಮಿತಿಯಲ್ಲಿ ಪರ್ಯಾಯ ಮಠದ ಸ್ವಾಮೀಜಿಗಳೆಲ್ಲರೂ ಇರಬಹುದಾಗಿತ್ತು.

ಸಸ್ಯಹಾರಿಗಳು ಮತ್ತು ಮಾಂಸಹಾರಿಗಳು ಒಂದೇ ಪಂಕ್ತಿಯಲ್ಲಿ ಕೂರುವುದು ಸರಿಯಲ್ಲವೆಂದು ಹೇಳಿ ಪಂಕ್ತಿಭೇದವನ್ನು ಸಮರ್ಥಿಸುವ ಸ್ವಾಮೀಜಿಯ ಹೇಳಿಕೆಯನ್ನು ಸಿಪಿಐ(ಎಂ) ಖಂಡಿಸುತ್ತದೆ. ಪಂಕ್ತಿಭೇದ ಮಾತ್ರವಲ್ಲ ಮಡೆಸ್ನಾನವನ್ನು ಸಮರ್ಥಿಸುವ ಸ್ವಾಮೀಜಿಯ ನಿಲುಮೆಯನ್ನು ಸಿಪಿಐ(ಎಂ) ಖಂಡಿಸುತ್ತದೆ.

ಸ್ವಾಮೀಜಿ ತಿಳಿಸುತ್ತಿರುವ 1951ರ ಮದ್ರಾಸ್ ಕಾನೂನನ್ನು ಅನುಸರಿಸಿ ದಲಿತರಿಗೆ ದೇವಸ್ಥಾನ ಪ್ರವೇಶ ನೀಡುವುದನ್ನು ಖಾತ್ರಿಪಡಿಸಲು ಸರ್ಕಾರಿ ಅಧಿಕಾರಿಗಳನ್ನು ನೇಮಿಸಲಾಗಿತ್ತು ಆದರೆ ಮಠಾಧಿಕಾರಿಗಳೇ ಅದನ್ನು ಖಾತ್ರಿಪಡಿಸುತ್ತಾರೆಂಬ ವಾದವನ್ನು ಒಪ್ಪಿ ಸರ್ವೋಚ್ಛ ನ್ಯಾಯಾಲಯವು ಸರ್ಕಾರಿ ಅಧಿಕಾರಿಗಳ ನೇಮಕವನ್ನು ರದ್ದುಗೊಳಿಸಿರಬಹುದು. ಆದರೆ, ದಲಿತರ ಮತ್ತು ಹಿಂದುಳಿದ ಜಾತಿಯವರ, ಶೂದ್ರರ ಪಂಕ್ತಿಭೇದ ಮಾಡಿಸುತ್ತಿರುವುದು ಭಾರತದ ಸಂವಿಧಾನದ ವಿರೋಧವಾಗಿದೆ. ವಿಶ್ವ ಹಿಂದೂ ಪರಿಷತ್ತಿನ ಉಪಾಧ್ಯಕ್ಷರಾದ ಸ್ವಾಮೀಜಿಗಳು ಹಿಂದೂಗಳನ್ನು ಒಂದುಗೂಡಿಸುವ ಪರವಾಗಿ ಇರಬೇಕಲ್ಲದೆ ದಲಿತರನ್ನು ಹಿಂದುಳಿದ ವರ್ಗದವರನ್ನು, ಶೂದ್ರರನ್ನು ದೇವಸ್ಥಾನದಲ್ಲಿ ಪ್ರತ್ಯೇಕ ಪಂಕ್ತಿಯಲ್ಲಿ ಕೂರಿಸುವುದು ಸರಿಯಲ್ಲ. ಶ್ರೀ ಕೃಷ್ಣ ಯದು ಕುಲಕ್ಕೆ ಸೇರಿದವರಾಗಿದ್ದು ಮುಂದುವರೆದ ಕುಲಕ್ಕೆ ಸೇರಿದವರಾಗಿರಲಿಲ್ಲ. ಬ್ರಾಹ್ಮಣರಾಗಿರಲ್ಲವೆಂದು ಸ್ವಾಮೀಜಿಯವರು ಗುರುತಿಸಲೇಬೇಕು. ಕೃಷ್ಣ ಮಠದಲ್ಲಿ ಶ್ರೀ ಕೃಷ್ಣ ಹಾಜರಾದರೇ ಯಾವ ಪಂಕ್ತಿಯಲ್ಲಿ ಕೂರಿಸುತ್ತಾರೆ ಎಂದು ಸ್ವಾಮೀಜಿಯವರನ್ನು ಕೇಳಬೇಕಾಗಿದೆ.

1997ರ ಕಾನೂನಿನ ಪ್ರಕಾರ ಉಡುಪಿ ಶ್ರೀಕೃಷ್ಣ ಮಠವನ್ನು ಸರ್ಕಾರದ ಅಧೀನದಲ್ಲಿ ತರಬೇಕೆಂದು ಅದಕ್ಕಾಗಿ 2011ರ ತಿದ್ದುಪಡಿಯನ್ನು ತೆಗೆದುಹಾಕಬೇಕೆಂದು ಸಿಪಿಐ(ಎಂ) ಕರ್ನಾಟಕ ರಾಜ್ಯ ಸರ್ಕಾರವನ್ನು ಒತ್ತಾಯಿಸುತ್ತದೆ. ಶ್ರೀಮಾನ್ ಸಿದ್ದರಾಮಯ್ಯನವರು ಜನತಾ ಪರಿವಾರದ ಪಂಕ್ತಿಯಲ್ಲಿ ಇದ್ದವರಾಗಿ, ಅಹಿಂದ ಸಂಘಟನೆಯವರಾಗಿ "ನಾವು ಜಾತ್ಯಾತೀತರು" ಎಂದು ಹೇಳಿಕೊಳ್ಳುವ ಕಾಂಗ್ರೆಸ್ ಮುಖ್ಯಮಂತ್ರಿಯಾಗಿ ಹಾಗೂ ಭಾಜಪದ ನೀತಿಗಳ ವಿರೋಧಿಗಳೆಂದು ಹೇಳಿಕೊಳ್ಳುವವರಾಗಿ 2011ರ ಯಡಿಯೂರಪ್ಪನವರ ಕಾನೂನು ತಿದ್ದುಪಡಿಯನ್ನು ರದ್ದುಪಡಿಸಬೇಕೆಂದು ಸಿಪಿಐ(ಎಂ) ಒತ್ತಾಯಿಸುತ್ತದೆ.

ಪೇಜಾವರ ಮಠದ ಸ್ವಾಮೀಜಿಯ ಪ್ರತಿಗಾಮಿತನವನ್ನು ವಿರೋಧಿಸಬೇಕಾದ ಕಾಂಗ್ರೆಸ್ ಪಕ್ಷ 2011ರ ತಿದ್ದುಪಡಿಯನ್ನು ರದ್ದುಗೊಳಿಸಿ ಎಸ್.ಎಂ. ಕೃಷ್ಣ ಮತ್ತು ಧರ್ಮಸಿಂಗ್ ಸರ್ಕಾರದ ಅವಧಿಯಲ್ಲಿ ಇದ್ದ ಹಾಗೇ ಉಡುಪಿಯ ಶ್ರೀ ಕೃಷ್ಣ ದೇವಸ್ಥಾನವನ್ನು ಸರ್ಕಾರದ ಅಧೀನಕ್ಕೆ ತರಬೇಕೆಂದು, ಪಂಕ್ತಿಭೇದವನ್ನು ಕೊನೆಗಾಣಿಸಲು ಕ್ರಮವಹಿಸಬೇಕೆಂದು ಸಿಪಿಐ(ಎಂ) ಒತ್ತಾಯಿಸುತ್ತದೆ.

ಕೊರಗರಾಗಿ.....

ಪುಟ 5 ರಿಂದ

ಇದೇ ಮೇ ತಿಂಗಳ 16 ರಂದು 10 ಕೋಟಿ ರೂ.ಗೂ ಹೆಚ್ಚಿನ ವೆಚ್ಚದಲ್ಲಿ ಕೈಗೊಂಡ ಪುತ್ತೂರು ಮಹಾಲಿಂಗೇಶ್ವರ ದೇವಸ್ಥಾನದ ಜೀರ್ಣೋದ್ದಾರದ ಬಳಿಕ ನಡೆದ ಧಾರ್ಮಿಕ ಸಭೆಯಲ್ಲಿ ಗೋ ಹಂತಕರಿಗೆ ಅನುಕೂಲ ಮಾಡುವ ದುರ್ದೈವ ಎದುರಾಗಿದ್ದು (ಕಾಂಗ್ರೆಸ್ ಅಧಿಕಾರಕ್ಕೆ ಬಂದುದರಿಂದಲೇ) ಗೋ ಹತ್ಯೆಯನ್ನು ತಡೆಯಲು ಮಹಾಲಿಂಗೇಶ್ವರ ಅನುಗ್ರಹ ಮಾಡಲಿ ಎಂದು ಹೇಳಿದ್ದಾರೆ. ಗೋಹತ್ಯೆಯನ್ನು ತಡೆಯಬೇಕೆನ್ನುವ ಭಟ್ಟರು ಸಂಘ ಪರಿವಾರದ ಬೆಂಬಲಕ್ಕೆ ನಿಂತ ಸಾಕಮ್ಮನವರಿಗೆ ಅವಮಾನವಾದಾಗ ಯಾವುದೇ ಸಾಂತ್ವನ ಹೇಳಲಿಲ್ಲ. ಮಸೀದಿ ಕಟ್ಟುವುದನ್ನು ವಿರೋಧಿಸುವುದಕ್ಕಾಗಿ ಸಾಕಮ್ಮನವರನ್ನು ಬಳಸಿಕೊಂಡ ಸ್ಥಳೀಯ ಸಂಘಪರಿವಾರದವರೂ ಘಟನೆಯನ್ನು ಖಂಡಿಸಲಿಲ್ಲ.

ಇನ್ನೊಂದೆಡೆಯಲ್ಲಿ ಉಡುಪಿ ಶ್ರೀಕೃಷ್ಣ ಮಠದಲ್ಲಿ ನಡೆಯುತ್ತಿರುವ ಪಂಕ್ತಿಭೇದವನ್ನು ಸಮರ್ಥಿಸುತ್ತಾ ಪೇಜಾವರ ಶ್ರೀಗಳು, "ಮಾಂಸಹಾರಿಗಳ ಜತೆ ಕುಳಿತು ಊಟಮಾಡಿದರೆ ಮಹಾನರಕ ಎಂದು ಬಸವಣ್ಣನವರೇ ಹೇಳಿದ್ದಾರೆ" ಎಂದು [ಸತ್ಯಕ್ಕೆ ದೂರವಾದ ಮಾತನ್ನು] ಹೇಳಿದ್ದಾರೆ. ಇದಕ್ಕೆ ಡಾ। ಮೀನಾಕ್ಷಿ ಬಾಳಿಯವರು ಪ್ರಜಾವಾಣಿ ಪತ್ರಿಕೆಯಲ್ಲಿ ಸೂಕ್ತವಾಗಿ ಉತ್ತರಿಸಿದ್ದಾರೆ ಆದರೂ ಪಟ್ಟು ಬಿಡದ ಪೇಜಾವರ ಶ್ರೀಗಳು ಮಾಂಸಾಹಾರಿಗಳಿಗೂ ವೈಷ್ಣವ ದೀಕ್ಷೆ ಕೊಟ್ಟು ಶಾಖಾಹಾರಿಗಳನ್ನಾಗಿ ಮಾಡಲು ಹೊರಟಿದ್ದಾರೆ. ಇಷ್ಟೊಂದು ಕಠೋರವಾಗಿ ಮಾಂಸಹಾರಿಗಳನ್ನು ದ್ವೇಷಿಸುವ 'ಪೂಜ್ಯರು' ತೀರಾ ಇತ್ತೀಚಿನವರೆಗೂ (ಕೆಲವು ಕಡೆಗಳಲ್ಲಿ ಈಗಲೂ ಇರಬಹುದು) ಸತ್ತ ದನವನ್ನು ಹೊತ್ತು ತಂದು ಅದರ ಮಾಂಸವನ್ನು ತಿನ್ನುತ್ತಿದ್ದ ಕೊರಗ ಸಮುದಾಯದ ಸಾಕಮ್ಮನವರ ರಕ್ಷಣೆಗೆ ಹೇಗೆ ಬಂದಾರು?

ಒಟ್ಟಾರೆಯಾಗಿ, ಮುಂದುವರಿದ ಜಿಲ್ಲೆಯಲ್ಲಿ ಸಾಮಾಜಿಕ ತಾರತಮ್ಯದ ವಿರುದ್ಧದ ಚಳುವಳಿ ಇನ್ನೂ ಹಿಂದುಳಿದಿರುವುದು ತೀರಾ ಶೋಚನೀಯ. ಜಾತಿ ವ್ಯವಸ್ಥೆ ಕೂಡಾ ಬಂಡವಾಳವಾದದಂತೆ ಅಧಿಕಾರ ಮತ್ತು ಸಂಪತ್ತನ್ನು ಕೆಲವರಿಗೇ ಮೀಸಲಿಡಲೆಂದು ಹುಟ್ಟಿಕೊಂಡ ಸಾಮಾಜಿಕ ರಾಜಕೀಯ ವ್ಯವಸ್ಥೆ ಎಂಬುದನ್ನು ಮನಗಾಣಬೇಕು.

ಎನ್‌ಡಿಎ ಯಿಂದ ಜೆಡಿ(ಯು) ಹೊರಬಂದಿರುವುದು ಹೊಸದೊಂದು ರಾಜಕೀಯ ಮಂಥನದ ಪ್ರಕ್ರಿಯೆಗೆ ಚಾಲನೆ ನೀಡಿವೆ ಎಂಬುದು ಸ್ಪಷ್ಟ. ಆದರೆ ಜನತೆಯ ಮೇಲೆ ಹೆಚ್ಚೆಚ್ಚು ಹೊರೆಗಳನ್ನು ಹೇರಲಾಗುತ್ತಿದೆ ಎಂಬ ಸಂಗತಿಯತ್ತ ಈ ಪ್ರಧಾನ ರಾಜಕೀಯ ಪಕ್ಷಗಳು ಸಾಕಷ್ಟು ಗಮನ ನೀಡುತ್ತಿಲ್ಲ. ಜನತೆಗೆ ಏನಾದರೂ ಪರಿಹಾರ ದೊರಕಬೇಕಾದರೆ ಪ್ರಸಕ್ತ ನವ-ಉದಾರವಾದಿ ಧೋರಣೆ-ಯ ದಿಕ್ಕಿಗೆ ಬದಲಾಗಿ ಜನಪರ ಪರ್ಯಾಯ ಧೋರಣೆಗಳ ದಿಕ್ಕನ್ನು ಅನುಸರಿಸಬೇಕಾಗುತ್ತದೆ. ಇಂತಹ ಒಂದು ಪರ್ಯಾಯ ಧೋರಣೆಯ ದಿಕ್ಕು ಕಾಂಗ್ರೆಸ್ ಮತ್ತು ಬಿಜೆಪಿ ಇವೆರಡೂ ಪಕ್ಷಗಳ ಅಳವಿಗೆ ಮೀರಿದ್ದು. ಇದು ಕಾಂಗ್ರೆಸ್ ಮತ್ತು ಬಿಜೆಪಿ ಎರಡಕ್ಕೂ ಇಂದು ಕಾಣ ಬರುತ್ತಿರುವ ರಾಜಕೀಯ ವಿರೋಧದಿಂದ ವಿಕಾಸಗೊಳ್ಳಬೇಕಾಗಿದೆ.

ಪರ್ಯಾಯ ಧೋರಣೆಯ ದಿಕ್ಕಿನಲ್ಲಿ ಪ್ರಸಕ್ತ ರಾಜಕೀಯ ಮಂಥನ ಸಾಗಲಿ


ಸೀತಾರಾಮ ಯೆಚೂರಿ

ಬಿಹಾರದಲ್ಲಿ ನಿತೀಶ್ ಕುಮಾರ್ ನೇತೃತ್ವದ ಜನತಾ ದಳ(ಯು) ಸರಕಾರ ವಿಶ್ವಾಸ ಮತವನ್ನು ನಿರ್ಣಾಯಕವಾಗಿ ಗೆದ್ದಿದೆ. ರಾಜ್ಯ ವಿಧಾನಸಭೆಯಲ್ಲಿ ಅದು 50ಶೇ.ಕ್ಕಿಂತ ಹೆಚ್ಚು ಬೆಂಬಲ ಗಳಿಸಿದೆ. ಬಿಜೆಪಿ ನರೇಂದ್ರ ಮೋದಿಯವರನ್ನು ಮುಂದಿನ ತನ್ನ ಪ್ರಧಾನ ಮಂತ್ರಿ ಅಭ್ಯರ್ಥಿ ಎಂದು ಸುಮಾರಾಗಿ ಪ್ರಕಟಿಸಿಯೇ ಬಿಟ್ಟಿರುವ ಪ್ರಶ್ನೆಯ ಮೇಲೆ ಜೆಡಿ(ಯು) ಎನ್‌ಡಿಎಯಿಂದ ಹೊರ ಬಂದಿದೆ. ಇದಕ್ಕೆ ಪ್ರತಿಕ್ರಿಯೆಯಾಗಿ 91 ಬಿಜೆಪಿ ಶಾಸಕರು ಮತದಾನದ ಮೊದಲು ಸಭಾತ್ಯಾಗ ನಡೆಸಿದರು. ಅವರು ಹಾಜರಿದ್ದು, ಸರಕಾರದ ವಿರುದ್ಧ ಮತ ನೀಡಿದ್ದರೂ ಫಲಿತಾಂಶ ಭಿನ್ನವಾಗಿರುತ್ತಿರಲಿಲ್ಲ ಎಂಬುದು ಬೇರೆ ಮಾತು.

ಇತ್ತೀಚಿನ ಈ ಬೆಳವಣಿಗೆಗಳು ಹೊಸದೊಂದು ರಾಜಕೀಯ ಮಂಥನದ ಪ್ರಕ್ರಿಯೆಗೆ ಚಾಲನೆ ನೀಡಿವೆ ಎಂಬುದು ಸ್ಪಷ್ಟ. ಒಂದು ಕಡೆ, ಕಾಂಗ್ರೆಸ್ ಯುಪಿಎ-2 ಎನ್‌ಸಿಪಿ ಬಿಟ್ಟು ತನ್ನೆಲ್ಲ ಪ್ರಮುಖ ಮಿತ್ರರನ್ನು ಕಳಕೊಂಡು ಒಂದು ಅಲ್ಪಮತಕ್ಕೆ ಇಳಿದಿದೆ. ಈಗ ಅದರ ಉಳಿವು ಸಮಾಜವಾದಿ ಪಕ್ಷ ಮತ್ತು ಬಹುಜನ ಸಮಾಜ ಪಕ್ಷದ ಹೊರಗಣ ಬೆಂಬಲವನ್ನು ಅವಲಂಬಿಸಿದೆ. ಇನ್ನೊಂದು ಕಡೆ, ಬಿಜೆಪಿ ನೇತೃತ್ವದ ಎನ್‌ಡಿಎಯಲ್ಲಿ ಅದಕ್ಕೆ ಈಗ ಉಳಿದಿರುವುದು ಎರಡೇ ಮಿತ್ರಪಕ್ಷಗಳು- ಶಿವಸೇನೆ ಮತ್ತು ಅಕಾಲಿ ದಳ.

ನಮ್ಮ ಕಾಲದ ಅಣಕ

ಎನ್‌ಡಿಎಯಿಂದ ಜೆಡಿ(ಯು) ಹೊರಬಂದಿರುವುದು ಬಿಜೆಪಿ ನೇತೃತ್ವದ ಎನ್‌ಡಿಎಯ ವೈರುಧ್ಯವನ್ನು ಬಿಂಬಿಸುತ್ತದೆ. ಇದು ಪರಿಹರಿಸಲಾಗದ ವೈರುಧ್ಯ. ಬಿಜೆಪಿ, ಆರೆಸ್ಸೆಸ್‌ನ ರಾಜಕೀಯ ಅಂಗವಾಗಿ ನರೇಂದ್ರ ಮೋದಿಯವರನ್ನು ಮುಂದಿಟ್ಟುಕೊಂಡು ತನ್ನ ಸಾಮಾಜಿಕ ನೆಲೆಯನ್ನು ಕ್ರೋಢೀಕರಿಸುವ ಕ್ರಿಯೆಗಿಳಿದಿದೆ. ಕಟ್ಟಾ ಹಿಂದುತ್ವ ಅಜೆಂಡಾವನ್ನು ಆಕ್ರಮಣಕಾರಿಯಾಗಿ ಅನುಸರಿಸುವುದರ ಪರಿಣಾಮಗಳು ಹಲವು. ಈ ದಿಕ್ಕಿನಲ್ಲಿ ಎಷ್ಟರ ಮಟ್ಟಿಗೆ ಅದು ತನ್ನ ನೆಲೆಯನ್ನು ಕ್ರೋಢೀಕರಿಸಲು ಪ್ರಯತ್ನಿಸುತ್ತದೋ, ಅಷ್ಟರ ಮಟ್ಟಿಗೆ ಮಿತ್ರರನ್ನು ಪಡೆಯುವ ಸಾಮರ್ಥ್ಯ ಕುಂದುತ್ತದೆ. ಆ ಮೂಲಕ ಮುಂದಿನ ಸಾರ್ವತ್ರಿಕ ಚುನಾವಣೆಗಳಲ್ಲಿ ಸರಕಾರ ರಚಿಸಲು ಬೇಕಾಗುವ ಸಂಖ್ಯೆಯನ್ನು ತಲುಪುವ ಅದರ ಸಾಮರ್ಥ್ಯವೂ ಕುಂದುತ್ತದೆ. ಇಂತಹ ಪರಿಹಾರವಿರದ



ಕೃಪೆ : ವಿಜಯ ಕರ್ನಾಟಕ

ವೈರುಧ್ಯವೇ ಪ್ರಸಕ್ತ ರಾಜಕೀಯ ಮಂಥನ ಪ್ರಕ್ರಿಯೆಗೆ ತನ್ನ ಕಾಣಿಕೆಯನ್ನು ನೀಡಿದೆ.

ಮೋದಿಯವರನ್ನು ಬಿಂಬಿಸುವ ಈ ಸಮಸ್ತ ಪ್ರಸಂಗದಲ್ಲಿ ಶ್ರೀಯುತ ಎಲ್. ಕೆ.ಅಡ್ವಾಣಿ ಬಿಜೆಪಿಯ ಮಂದಗಾಮಿ ಮುಖವಾಗಿ- ಉದಾರ ಮುಖವಾಗಿ ಬಿಂಬಿತವಾಗಿರುವುದು ನಿಜಕ್ಕೂ ನಮ್ಮ ಕಾಲದ ಒಂದು ಅಣಕವೇ ಎನ್ನಬಹುದು. ಇಂದಿನ ಬಿಜೆಪಿ ಮೇಲೆದ್ದು ಬಂದದ್ದು ಅವರು ಸಪ್ಟಂಬರ್ 1990ರಲ್ಲಿ ನಡೆಸಿದ 'ರಥಯಾತ್ರೆ'ಯಿಂದಾಗಿ. 'ಮಂದಿರ್ ವಹೀಂ ಬನಾಯೇಂಗೆ'(ಮಂದಿರ ಅಲ್ಲೇ, ಅಂದರೆ ಬಾಬ್ರಿ ಮಸೀದಿ ಇದ್ದಲ್ಲೇ ಕಟ್ಟುತ್ತೇವೆ) ಎಂಬ ಘೋಷಣೆಯೊಂದಿಗೆ ಅವರು ಸೋಮನಾಥದಿಂದ ಅಯೋಧ್ಯೆಗೆ ಈ 'ರಥಯಾತ್ರೆ' ನಡೆಸಿದರು. ಇದು ಹೋದ ದಾರಿಯುದ್ದಕ್ಕೂ ರಕ್ತಸಿಕ್ತ ಹೆಜ್ಜೆಗುರುತುಗಳನ್ನು ಬಿಡುತ್ತಲೇ ಹೋಯಿತು. ಕೋಮು ಗಲಭೆಗಳು ನಡೆದವು. ಕೋಮುವಾದಿ ಧ್ರುವೀಕರಣ ತೀಕ್ಷ್ಣಗೊಂಡಿತು. ಭಾರತೀಯ ಗಣತಂತ್ರದ ಜಾತ್ಯಾತೀತ ಪ್ರಜಾಸತ್ತಾತ್ಮಕ ಬುನಾದಿಗೇ ಬೆದರಿಕೆಯೊಡ್ಡಿತು. ಅಂತಿಮವಾಗಿ ಡಿಸೆಂಬರ್ 6, 1992ರಂದು ಬಾಬ್ರಿ ಮಸೀದಿ ಧ್ವಂಸಕ್ಕೆ ಅಡಿಪಾಯ ಹಾಕಿದ್ದು ಈ ಯಾತ್ರೆಯೇ.

ಪರ್ಯಾಯ ಧೋರಣೆ ಅಗತ್ಯ

ಇಂತಹ ಬೆಳವಣಿಗೆಗಳು 2014 ರ ಸಾರ್ವತ್ರಿಕ ಚುನಾವಣೆಗಳ ಮೊದಲಿನ ರಾಜಕೀಯ ಮಂಥನಕ್ಕೆ ತಮ್ಮ ಕೊಡುಗೆಗಳನ್ನು ಇನ್ನು ಮುಂದೆಯೂ ನೀಡುತ್ತವೆ ಎಂಬುದೇನೋ ನಿಜ. ಆದರೆ ಜನತೆಯ ಮೇಲೆ ಹೆಚ್ಚೆಚ್ಚು ಹೊರೆಗಳನ್ನು ಹೇರಲಾಗುತ್ತಿದೆ ಎಂಬ ಸಂಗತಿಯತ್ತ ಈ ಪ್ರಧಾನ ರಾಜಕೀಯ ಪಕ್ಷಗಳು ಸಾಕಷ್ಟು ಗಮನ ನೀಡುತ್ತಿಲ್ಲ. ಆರ್ಥಿಕತೆಯ ಬೆಳವಣಿಗೆ ನಿಧಾನಗತಿಯಲ್ಲಿದೆ. ಪರಿಸ್ಥಿತಿ ಇನ್ನಷ್ಟು ಹದಗೆಡುತ್ತಿದೆ. ಅದರಿಂದಾಗಿ ಹೆಚ್ಚುತ್ತಿರುವ ನಿರುದ್ಯೋಗ ಮತ್ತು ಲಂಗುಲಗಾಮಿಲ್ಲದ ಹಣದುಬ್ಬರ 'ಆಮ್ ಆದ್ಮಿ'ಯ ಬದುಕನ್ನು ದುರ್ಭರಗೊಳಿಸಿವೆ. ಇಂಧನ ಬೆಲೆಗಳನ್ನು ಮತ್ತೆ-ಮತ್ತೆ ಏರಿಸುವ ಕೆಲಸ ಮುಂದುವರೆದಿದೆ. ದೇಶದ ಹಲವು ಭಾಗಗಳಲ್ಲಿ ರೈತಾಪಿಗಳು ಒಂದು ತೀವ್ರ ಬರದಿಂದ ಇನ್ನೂ ಚೇತರಿಸಿಕೊಂಡಿಲ್ಲ. ಅಷ್ಟರಲ್ಲೇ ಮುಂಗಾರು ಮಳೆಯ



ಆರ್ಭಟದಿಂದಾಗಿ ನಮ್ಮ ಪ್ರಮುಖ ನದಿಗಳೆಲ್ಲ ಉಕ್ಕೇರಿ ಹರಿಯುತ್ತಿವೆ, ನೆರೆ ಹಾವಳಿ ವ್ಯಾಪಕವಾಗಿದೆ.

ಹೀಗೆ ಪ್ರಸಕ್ತ ರಾಜಕೀಯ ಮಂಥನ ನಮ್ಮ ವಿಶಾಲ ಜನಸಮೂಹಗಳಲ್ಲಿ ಬಹುಪಾಲು ಮಂದಿಯ ಸಂಕಟಗಳು ಮತ್ತು ನೋವುಗಳಿಗೆ ಸಂಪೂರ್ಣವಾಗಿ ಪರಕೀಯವಾಗಿ ಬಿಟ್ಟಿರುವಂತೆ ಕಾಣುತ್ತದೆ. ಜನತೆ ಈಗಾಗಲೇ ಕೆಳಮಟ್ಟಕ್ಕೆ ಇಳಿದಿರುವ ತಮ್ಮ ಬದುಕಿನ ಒಳಹೊಕ್ಕು ಸತತವಾಗಿ ಹೇರುತ್ತಿರುವ ಹೊರೆಗಳಿಗೆ ಪರಿಹಾರ ಕಾಣ ಬಯಸುತ್ತಾರೆ. ಈ ಅಂಕಣದಲ್ಲಿ ವಾದಿಸುತ್ತಾ ಬಂದಿರುವಂತೆ, ಜನತೆಗೆ ಏನಾದರೂ ಪರಿಹಾರ ದೊರಕಬೇಕಾದರೆ ಪ್ರಸಕ್ತ ನವ-ಉದಾರವಾದಿ ಧೋರಣೆಯ ದಿಕ್ಕಿಗೆ ಬದಲಾಗಿ ಜನಪರ ಪರ್ಯಾಯ ಧೋರಣೆಗಳ ದಿಕ್ಕನ್ನು ಅನುಸರಿಸಬೇಕಾಗುತ್ತದೆ. ಇಂತಹ ಒಂದು ಪರ್ಯಾಯ ಧೋರಣೆಯ ದಿಕ್ಕು ಕಾಂಗ್ರೆಸ್ ಮತ್ತು ಬಿಜೆಪಿ ಇವೆರಡೂ ಪಕ್ಷಗಳ ಅಳವಿಗೆ ಮೀರಿದ್ದು. ಏಕೆಂದರೆ ಇವೆರಡೂ ಪಕ್ಷಗಳು ನವ-ಉದಾರವಾದಿ ಆರ್ಥಿಕ ಸುಧಾರಣೆಗಳಿಗೆ ಮತ್ತು ಅಮೆರಿಕನ್ ಸಾಮ್ರಾಜ್ಯಶಾಹಿಯ ಸಾನಿಧ್ಯಕ್ಕೆ ಬದ್ಧವಾಗಿವೆ. ಹೀಗೆ ಇಂತಹ ಒಂದು ಪರ್ಯಾಯ ದಿಕ್ಕು-ದಾರಿ ಕಾಂಗ್ರೆಸ್ ಮತ್ತು ಬಿಜೆಪಿ ಎರಡಕ್ಕೂ ಕಾಣ ಬರುತ್ತಿರುವ ರಾಜಕೀಯ ವಿರೋಧದಿಂದ ವಿಕಾಸಗೊಳ್ಳ ಬೇಕಾಗಿದೆ.

ಎಡಶಕ್ತಿಗಳ ಪರ್ಯಾಯ

ಸಿಪಿಐ(ಎಂ) ತನ್ನ 'ಸಂಘರ್ಷ ಸಂದೇಶ ಜಾತಾ'ಗಳಲ್ಲಿ ಒಂದು ಪರ್ಯಾಯ ಧೋರಣೆಯ ಚೌಕಟ್ಟನ್ನು ಮುಂದಿಟ್ಟಿದೆ. ಇದು ಜನತೆಗೆ ಬಹು ಅಗತ್ಯವಾಗಿರುವ ಪರಿಹಾರವನ್ನೂ ಕೊಡಬಲ್ಲದು, ಜತೆ-ಗೆ ವಿಶಾಲ ಜನಸಮೂಹಗಳ ಆರ್ಥಿಕ ಸಬಲೀಕರಣದ ಆಧಾರದಲ್ಲಿ ಒಟ್ಟು ಆಂತರಿಕ ಬೇಡಿಕೆಯನ್ನು ವಿಸ್ತರಿಸಿ ಆರ್ಥಿಕ ಬೆಳವಣಿಗೆಗೆ ಒತ್ತಾಸೆಯನ್ನೂ ನೀಡಬಲ್ಲದು.

ಒಂದು ಪರ್ಯಾಯ ಧೋರಣೆ-ಯ ದಿಕ್ಕನ್ನು ಅನುಸರಿಸಬಲ್ಲ ಒಂದು ರಾಜಕೀಯ ಪರ್ಯಾಯಕ್ಕಾಗಿ ಕೆಲಸ ಮಾಡುವ ವಿಚಾರದಲ್ಲಿ ಸಿಪಿಐ(ಎಂ)ನ 20ನೇ ಮಹಾಧಿವೇಶನ ಪಕ್ಷದ ರಾಜಕೀಯ ನೀತಿಯನ್ನು ಹೀಗೆ ನಿರೂಪಿಸಿದೆ:

"ಸಿಪಿಐ(ಎಂ) ಕಾಂಗ್ರೆಸ್ ಮತ್ತು ಬಿಜೆಪಿ ವಿರುದ್ಧ ರಾಜಕೀಯವಾಗಿ ಹೋರಾಡಬೇಕು. ವರ್ಗ ಶೋಷಣೆಯನ್ನು ಶಾಶ್ವತಗೊಳಿಸುವ ಮತ್ತು ವಿವಿಧ ಜನಸಮೂಹಗಳ ಸಾಮಾಜಿಕ ದಮನಕ್ಕೆ ಹೊಣೆಯಾಗಿರುವ ದೊಡ್ಡ ಬಂಡವಾಳಶಾಹಿ-ಭೂಮಾಲಕ ವ್ಯವಸ್ಥೆಯನ್ನು ಈ ಎರಡೂ ಪಕ್ಷಗಳು ಪ್ರತಿನಿಧಿಸುತ್ತವೆ. ಅವರು ನವ-ಉದಾರವಾದಿ ಧೋರಣೆಯನ್ನು ಅನುಸರಿಸುತ್ತಾರೆ ಮತ್ತು ಅಮೆರಿಕಾ-ಪರ ವಿದೇಶಾಂಗ ನೀತಿಯನ್ನು ಪ್ರತಿಪಾದಿಸುತ್ತಾರೆ. ಯುಪಿಎ ಸರಕಾರವನ್ನು

ಪುಟ 10 ಕ್ಕೆ

ಜನಶಕ್ತಿ
ಕನ್ನಡ ವಾರಪತ್ರಿಕೆ

ತೆರಿಗೆ ಏರಿಕೆಯ ಸಿದ್ಧತೆಯಲ್ಲಿ ಸಿದ್ದರಾಮಯ್ಯನವರ 8 ನೇ ಬಜೆಟ್

ರಾಜ್ಯ ಕಾಂಗ್ರೆಸ್ ಸರ್ಕಾರದ ಮೊದಲ ಬಜೆಟ್‌ನ ಸಿದ್ಧತೆಗಳು ನಡೆದಿವೆ. ಕಾಂಗ್ರೆಸ್ ಪಕ್ಷದ ಜನ ವಿರೋಧಿ ನೀತಿಗಳ ಚೌಕಟ್ಟು ಮೀರಿ ಉತ್ತಮ ಬಜೆಟ್ ಮಂಡಿಸಲು ಸಾಧ್ಯವೇ? ಅದು ತೆರಿಗೆ ಏರಿಕೆ ಖ್ಯಾತಿಯ ಸಿದ್ದರಾಮಯ್ಯನವರಿಂದ?


ನಿತ್ಯಾನಂದಸ್ವಾಮಿ

ವಿಧಾನಸಭಾ ಚುನಾವಣೆಯ [illegible]ತುರಿಯಲ್ಲಿ ಹಿಂದಿನ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ಅವರು ಮಂಡಿಸಿದ ಒಂದು ಲಕ್ಷ ಕೋಟಿ ರೂಪಾಯಿಗಳಿಗೂ ಅಧಿಕ ಮೊತ್ತದ ಬಜೆಟ್ ಗದ್ದಲ ಗೊಂದಲಗಳ ನಡುವೆ ಚರ್ಚೆಯೇ ಇಲ್ಲದೆ ಅಂಗೀಕಾರವಾಗಿತ್ತು. ಆ ಬಜೆಟ್ ಆಧಾರದ ಮೇಲೆ ಈಗ ರಾಜ್ಯ ಸರ್ಕಾರದ ಹಣಕಾಸು ವ್ಯವಹಾರಗಳು ನಡೆಯುತ್ತಿರುವುದು. ನೂತನ ಕಾಂಗ್ರೆಸ್ ಸರ್ಕಾರದ ಚುನಾವಣಾ ಭರವಸೆಗಳನ್ನು ಮತ್ತು ಹೊಸ ಯೋಜನೆಗಳನ್ನು ಒಳಗೊಂಡ ಹೊಸ ಬಜೆಟ್ಟನ್ನು ಹಣಕಾಸು ಖಾತೆಯನ್ನು ಹೊಂದಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಜುಲೈ 12 ರಂದು ವಿಧಾನ ಸಭೆಯಲ್ಲಿ ಮಂಡಿಸಲಿದ್ದಾರೆ.

ಬಜೆಟ್ ಮಂಡನೆ ಸಿದ್ದರಾಮಯ್ಯನವರಿಗೆ ಹೊಸದೇನೂ ಅಲ್ಲ. ಈ ಹಿಂದೆ ಅವರು 7 [illegible]ಟ್‌ಗಳನ್ನು ಮಂಡಿಸಿದ್ದು [illegible]ದು ಅವರು ಮಂಡಿಸುವ 8ನೇ ಬಜೆಟ್ ಆಗಲಿದೆ. ಆದರೆ ಮುಖ್ಯಮಂತ್ರಿಯಾಗಿ ಅವರು ಮಂಡಿಸುವ ಮೊದಲನೇಯ ಬಜೆಟ್ ಇದಾಗಿದೆ. ಅದು ಹೇಗಿರಬಹುದು, ಅದರ ಹೂರಣ ಏನಿರಬಹುದು ಎಂಬುದೇ ತಕ್ಷಣದ ಕುತೂಹಲಕಾರಿ ಪ್ರಶ್ನೆ.

ರೈತರನ್ನು ದಾರಿತಪ್ಪಿಸುವ ಪ್ರತ್ಯೇಕ ಕೃಷಿ ಬಜೆಟ್ ಮಂಡಿಸುವುದಿಲ್ಲ ಎಂದು ಸ್ಪಷ್ಟಪಡಿಸಿರುವ ಮುಖ್ಯಮಂತ್ರಿಯವರು ರೈತರಿಗೆ ಪ್ರತ್ಯೇಕ ಬಜೆಟ್ ನೀಡುವ ಬದಲು ಅವರಿಗೆ ಅಗತ್ಯವಾದ ಬಿತ್ತನೆಯ ಬೀಜ, ರಸಗೊಬ್ಬರ ಹಾಗೂ ಅವರು ಬೆಳೆದ ಬೆಳೆಗಳಿಗೆ ಮಾರುಕಟ್ಟೆಯಲ್ಲಿ [illegible]ಗ್ಯ ಬೆಲೆ ದೊರಕಿಸಿಕೊಡಲು ಎಲ್ಲಾ ರೀತಿಯ ಕಾರ್ಯಕ್ರಮಗಳನ್ನು ಬಜೆಟ್‌ನಲ್ಲಿ ಅಳವಡಿಸುವುದಾಗಿ ತಿಳಿಸಿದ್ದಾರೆ. ಈ ಸಲದ ಬಜೆಟ್‌ನಲ್ಲಿ ಕೃಷಿ, ನೀರಾವರಿ, ಗ್ರಾಮೀಣಾಭಿವೃದ್ಧಿ, ಶಿಕ್ಷಣ, ಆರೋಗ್ಯ ಹಾಗೂ ವಿದ್ಯುತ್ ಕ್ಷೇತ್ರಗಳಿಗೆ ಆದ್ಯತೆ ನೀಡಲಾಗುವುದೆಂದೂ ಹೇಳಿದ್ದಾರೆ. ಹೀಗೆ ಹೇಳಿದ್ದನ್ನು ಜಾರಿಮಾಡಿದರೆ ಸಿದ್ದರಾಮಯ್ಯ ಅವರ ಮೊಟ್ಟಮೊದಲ ದಾಖಲೆಯ ಸಾಧನೆ ಅದಾಗಲಿದೆ.

ಸಂಪನ್ಮೂಲ ಕ್ರೋಡೀಕರಣವೇ ದೊಡ್ಡ ಸವಾಲು ಆಗಿದೆ ಎಂದು ಹೇಳಲು ಸಿದ್ದರಾಮಯ್ಯ ಮರೆಯಲಿಲ್ಲ. ಹೇಳಿ ಕೇಳಿ ಸಿದ್ದರಾಮಯ್ಯ ತೆರಿಗೆ ಹೇರಿಕೆಯಲ್ಲಿ ಸಿದ್ಧಹಸ್ತ. ಅವರ ಈ ಹಿಂದಿನ ಬಜೆಟ್‌ಗಳು ತೆರಿಗೆ ಏರಿಕೆಯ ದಾಖಲೆಗಳಾಗಿವೆ. ಕೋಟ್ಯಾಧಿಪತಿಗಳಿಗೆ ತೆ-ರಿಗೆ ರಿಯಾಯ್ತಿಗಳನ್ನು ಕೊಟ್ಟು ಬಡವರ ಮೇಲೆ ಪರೋಕ್ಷ ತೆರಿಗೆಗಳ ಹೊರೆ ಹೇರುವುದು ಕಾಂಗ್ರೆಸ್ ಸರ್ಕಾರಗಳ ಪರಂಪರೆ. ಸಿದ್ದರಾಮಯ್ಯ ಮೂಲ ಕಾಂಗ್ರೆಸಿಗರಲ್ಲದಿರಬಹುದು. ಕಾಂಗ್ರೆಸ್ ಸಂಸ್ಕೃತಿ ಅವರಲ್ಲಿ ರಕ್ತಗತ ಆಗದಿರಬಹುದು. ಆದರೂ, ಅದೇ ಕಾಂಗ್ರೆಸ್ ಪಕ್ಷದ ಒಬ್ಬ ಮುಖ್ಯಮಂತ್ರಿಯಾಗಿ ಅವರು ಭಿನ್ನವಾದ ದಾರಿಯನ್ನು ತುಳಿಯಲು ಸಾಧ್ಯವೆ? ಅಗ್ಗದ ಅಕ್ಕಿಯಂತಹ ಭರವಸೆಗಳನ್ನು ಯಥೇಚ್ಛವಾಗಿ ಕೊಡಬಹುದು. ಚುನಾವಣೆಗಳ ಮೇಲೆ ಕಣ್ಣಿಟ್ಟು ಕೆಲವನ್ನು ಅನುಷ್ಠಾನಕ್ಕೂ ತರಬಹುದು. ಆದರೆ, ಒಂದು ಕೈಯಲ್ಲಿ ಕೊಟ್ಟದ್ದನ್ನು ಇನ್ನೊಂದು ಕೈಯಲ್ಲಿ ಕಿತ್ತುಕೊಳ್ಳುವುದು ಕಾಂಗ್ರೆಸಿನ ಹಳೆಯ ಚಾಳಿಗಳಲ್ಲಿ ಒಂದು.



ಬಿಎಂಟಿಸಿ ಬಸ್ ದರ ಏರಿಕೆ



ಕೊಟ್ಟು ಕಿತ್ತುಕೊಳ್ಳುವ ಕಾಂಗ್ರೆಸ್ ಚಾಳಿ :

ಬಿಪಿಎಲ್ ಕಾರ್ಡುದಾರರಿಗೆ ಕೆ.ಜಿ.ಗೆ. 1 ರೂ. ದರದ ಅಗ್ಗದ ಅಕ್ಕಿ ವಿತರಿಸುವುದನ್ನು ಬಂದ್ ಮಾಡುವ ರಾಜ್ಯ ಸರ್ಕಾರದ ನಿರ್ಧಾರ ಒಂದು ಕೈಯಲ್ಲಿ ಕೊಟ್ಟದ್ದನ್ನು ಇನ್ನೊಂದು ಕೈಯಿಂದ ಕಿತ್ತುಕೊಳ್ಳುವ ಕಾಂಗ್ರೆಸ್ ಚಾಳಿಯ ತಾಜಾ ಉದಾಹರಣೆಯಲ್ಲವೇ?

ಕೇಂದ್ರ ಕಾಂಗ್ರೆಸ್ ಸರ್ಕಾರ ಪಡಿತರ ಕಾರ್ಡುಗಳ ವಿತರಣೆಯಲ್ಲಿ 'ಟಾರ್ಗೆಟ್ ಪದ್ಧತಿ'ಯನ್ನು ಕೈಬಿಡಲು ಒಪ್ಪದಿರುವುದರಿಂದ ಎಲ್ಲ ಅರ್ಹ ಬಿಪಿಎಲ್ ಕುಟುಂಬಗಳಿಗೆ ಬಿಪಿಎಲ್ ಕಾರ್ಡುಗಳು ಸಿಗಲಾರವು. ಪಡಿತರ ಪದ್ಧತಿಯನ್ನು ಸಾರ್ವತ್ರೀಕರಣಗೊಳಿಸಿ ಎಲ್ಲ ಕುಟುಂಬಗಳಿಗೂ ಯಾವುದೇ ಬೇದವಿಲ್ಲದೆ ಒಂದೇ ರೀತಿಯ ಪಡಿತರ ಕಾರ್ಡುಗಳನ್ನು ವಿತರಿಸಲು ಸರ್ಕಾರ ಮುಂದಾದರೆ ಮಾತ್ರ ಎಲ್ಲ ಬಡ ಕುಟುಂಬಗಳಿಗೆ ಅಗ್ಗದ ದರಗಳ ರೇಷನ್ ಸಿಗಲು ಸಾಧ್ಯ.

ಈಗ ಚಾಲ್ತಿಯಲ್ಲಿರುವ ಎಪಿಎಲ್ ಕಾರ್ಡುದಾರರಲ್ಲಿ ಬಹಳಷ್ಟು ಕುಟುಂಬಗಳು ಬಡತನ ರೇಖೆಯ ಕೆಳಗೆ ಇದ್ದವರೇ ಆಗಿದ್ದು ಅವರು ಬಿಪಿಎಲ್ ಕಾರ್ಡುಗಳಿಂದ ವಂಚಿತರಾಗಿದ್ದಾರೆ. ಜುಲೈ 1 ರಿಂದ ಅಗ್ಗದ ಅಕ್ಕಿ ವಿತರಣೆಗೆ ಆರಂಭ ಮಾಡುವ ಒಳಗಾಗಿ ಎಲ್ಲ ಅರ್ಹ ಬಿಪಿಎಲ್ ಕುಟುಂಬಗಳಿಗೆ ಬಿಪಿಎಲ್ ಕಾರ್ಡುಗಳನ್ನು ವಿತರಿಸಲು ಸಿದ್ದರಾಮಯ್ಯ ಸರ್ಕಾರ ಪ್ರಾಮಾಣಿಕ ಪ್ರಯತ್ನ ಮಾಡಬೇಕು.

ಬಿಪಿಎಲ್ ಕುಟುಂಬಗಳಿಗೆ ಕೆ.ಜಿ.ಗೆ. 1 ರೂ. ದರದಲ್ಲಿ ಅಕ್ಕಿ ವಿತರಿಸಲು ಸರ್ಕಾರ ನಿರ್ಧರಿಸಿರುವ ಬೆನ್ನಲ್ಲೇ ಎಪಿಎಲ್ ಕಾರ್ಡುದಾರರಿಗೆ ಇದುವರೆಗೆ ಕೆ.ಜಿ.ಗೆ 10 ರೂ. ದರದಲ್ಲಿ ನೀಡುತ್ತಿದ್ದ 10 ಕೆ.ಜಿ. ಅಕ್ಕಿ ಪೂರೈಕೆಯನ್ನೂ ನಿಲ್ಲಿಸಲು ಈ ಸರ್ಕಾರ ಕೈಗೊಂಡಿರುವ ಕ್ರಮವೂ ಖಂಡನೀಯವಾಗಿದೆ. ಒಬ್ಬರಿಗೆ ಅಗ್ಗದ ಅಕ್ಕಿ ನೀಡಲು ಇನ್ನೊಬ್ಬರಿಗೆ ರಿಯಾಯ್ತಿ ದರದ ಅಕ್ಕಿ ಖೋತಾ ಮಾಡುವುದು ಸರಿಯಲ್ಲ. ಎಪಿಎಲ್ ಕಾರ್ಡುದಾರರೆಲ್ಲರೂ ಕಡು ಬಡವರಲ್ಲದಿರಬಹುದು. ಆದರೆ ಅವರೆಲ್ಲರೂ ಶ್ರೀಮಂತರೇನೂ ಅಲ್ಲ. ಮುಕ್ತ ಮಾರುಕಟ್ಟೆಯಲ್ಲಿ ಅಕ್ಕಿ ಬೆಲೆ ಸಿಕ್ಕಾಪಟ್ಟೆ ದುಬಾರಿಯಾಗಿರುವಾಗ ಪಡಿತರ ಕಾರ್ಡ್ ಮೂಲಕ ಅಕ್ಕಿ ಕೊಳ್ಳುವುದು ಅವರಿಗೂ ಅನಿವಾರ್ಯವಾಗಿದೆ.

ಎಪಿಎಲ್ ಕುಟುಂಬಗಳಿಗೆ ನೀಡಲಾಗುತ್ತಿದ್ದ ಅಕ್ಕಿ ದುರ್ಬಳಕೆ ಆಗುತಿತ್ತು ಎಂಬ ಕಾರಣಕ್ಕಾಗಿ ಅಕ್ಕಿ ವಿತರಣೆ ಸ್ಥಗಿತಗೊಳಿಸುವ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಸರ್ಕಾರ ವಿವರಣೆ ನೀಡುತ್ತಿದೆ. ಯಾವುದೇ ಒಂದು ನಾಗರಿಕ ಸೌಲಭ್ಯ ವಿತರಣೆಯಲ್ಲಿ ದೋಷ ಇದೆ ಎಂದ ಮಾತ್ರಕ್ಕೆ ಆ ಸೌಲಭ್ಯವನ್ನೇ ಸ್ಥಗಿತಗೊಳಿಸುವುದು ಸರಿಯಾದ ಕ್ರಮವಲ್ಲ. ಜನರಿಗೆ ಹೆಚ್ಚೆಚ್ಚು ಸೌಲಭ್ಯಗಳನ್ನು ನೀಡುವುದು ಸರ್ಕಾರದ ಆದ್ಯತೆ ಆಗಬೇಕೇ ಹೊರತು ಸೌಲಭ್ಯಗಳನ್ನು ಕಿತ್ತುಕೊಳ್ಳುವುದಲ್ಲ. ಎಪಿಎಲ್ ಕುಟುಂಬಗಳಿಗೆ ರಿಯಾಯ್ತಿ ದರದ ಅಕ್ಕಿ ವಿತರಣೆಯನ್ನು ಬಂದ್ ಮಾಡುವ ತೀರ್ಮಾನವನ್ನು ಹಿಂದಿನ ಬಿಜೆಪಿ ಸರ್ಕಾರವೇ ಮಾಡಿತ್ತು ಎಂದು ಹೇಳುವ ಮೂಲಕ ಮುಖ್ಯಮಂತ್ರಿ ಸಿದ್ದರಾಮಯ್ಯ ಬಿಜೆಪಿ ಮತ್ತು ಕಾಂಗ್ರೆಸ್ ನಡುವಿನ ಕೆಸರೆರಚಾಟಕ್ಕೆ ಕಾರಣರಾಗಿದ್ದಾರೆ. ಎಪಿಎಲ್ ಕಾರ್ಡುದಾರರಿಗೆ ರಿಯಾಯ್ತಿ ದರದ ಅಕ್ಕಿಯನ್ನು ವಿತರಣೆ ಮಾಡುವುದನ್ನು ಹಿಂದಿನ ಬಿಜೆಪಿ ಸರ್ಕಾರವೇ ಬಂದ್ ಮಾಡಿದ್ದರೂ ಕಾಂಗ್ರೆಸ್ ಸರ್ಕಾರ ಅದನ್ನು ಮರಳಿ ಆರಂಭಿಸಲು ಯಾಕೆ ಮುಂದಾಗಬಾರದು? ಬಿಜೆಪಿ ಮಾಡಿದನ್ನೇ ಕಾಂಗ್ರೆಸ್ ಮಾಡುತ್ತದೆ ಎನ್ನುವುದಾದರೆ ಕಾಂಗ್ರೆಸ್ ಮತ್ತು ಬಿಜೆಪಿ ನಡುವೆ ಆರ್ಥಿಕ ದೋರಣೆಗಳ ವಿಷಯದಲ್ಲಿ ಯಾವುದೇ ವೆತ್ಯಾಸವಿಲ್ಲ ಎಂಬ ಆರೋಪ ಮತ್ತೆ ಮತ್ತೆ ಸಾಬೀತಾದಂತಾಗುತ್ತದೆ. ಈ ಹಿನ್ನೆಲೆಯಲ್ಲಿ, ಸಿದ್ದರಾಮಯ್ಯನವರ 8 ನೇ ಬಜೆಟ್ ದುಡಿಯುವ ಜನತೆಯ ಮೇಲೆ ಹೆಚ್ಚಿನ ಹೊರೆಯನ್ನು ಹೇರುವ ಲಕ್ಷಣಗಳೇ ಕಾಣುತ್ತವೆ. ಆರಂಭದಲ್ಲಿ ಕೆಲವು ಆಕರ್ಷಕ ಭರವಸೆಗಳನ್ನು ನೀಡಿದ್ದು ನಿಜವಾದರೂ ವಿದ್ಯುತ್ ದರ ಏರಿಕೆ, ಹಾಲಿನದರ ಏರಿಕೆ, ಬಸ್ ಪ್ರಯಾಣದರ ಏರಿಕೆ ಮುಂತಾದ ಕ್ರಮಗಳು ಮುಂದಿನ ಕರಾಳ ದಿನಗಳ ಮುನ್ಸೂಚನೆಗಳಂತೆ ಕಾಣುತ್ತಿವೆ.

ಹೀಗೊಂದು ಸರಳ ಮದುವೆಗೆ ಸಾಕ್ಷಿಯಾದ ಹಾನಗಲ್

ಅಂದು ಜೂನ್ 5, 2013. ಬೆಳಿಗ್ಗೆ ಸುಮಾರು 11 ಗಂಟೆಗೆಯಷ್ಟೊತ್ತಿಗೆ ಹಾನಗಲ್ ಶ್ರೀ ಕುಮಾರೇಶ್ವರ ಮಠದ ಪಕ್ಕದ ಅರಮಾನ್ ಕಲ್ಯಾಣ ಮಂಟಪ ಕಿಕ್ಕಿರಿದು ತುಂಬಿತ್ತು. ಅವರೆಲ್ಲರಲ್ಲಿ ಮದುವೆಯೊಂದರ ಸಂಭ್ರಮ ಎದ್ದು ಕಾಣುತ್ತಿತ್ತಾದರೂ ಮದುವೆಯ ಒಟ್ಟಾರೆ ಏರ್ಪಾಡುಗಳು ಅವರಲ್ಲಿ ಬಾರೀ ಕುತೂಹಲವನ್ನೂ ಉಂಟುಮಾಡಿತ್ತು. ಅಲ್ಲಿ ಬಾಜಾಭಜಂತ್ರಿಯ ಸದ್ದು ಇರಲಿಲ್ಲ. ಧ್ವನಿವರ್ಧಕ ಸಿನೆಮಾ ಹಾಡುಗಳನ್ನು ಹಾಡುತ್ತಿರಲಿಲ್ಲ. ಮದುವೆಯ ಮುಹೂರ್ತವನ್ನೇನು ನಿಗದಿಪಡಿಸಿರಲಿಲ್ಲ. ಶಾಸ್ತ್ರೋಕ್ತವಾಗಿ ಮಂತ್ರಪಠಣ ಮಾಡಬೇಕಾದ ಪುರೋಹಿತರ ಸುಳಿವೂ ಇರಲಿಲ್ಲ. ವಧುವರರನ್ನು ಹರಸಲು ಬಳಸುವ ಅಕ್ಕಿಕಾಳು ಸಹ ಕಾಣುತ್ತಿರಲಿಲ್ಲ. ಇದೆಲ್ಲವು ಇಲ್ಲದೆ ಹೇಗೆ ಮದುವೆ ನಡೆಯುತ್ತದೆ ಎಂಬುದೇ ಅಂದು ಅಲ್ಲಿ ನೆರೆದಿದ್ದ ಬಹಳಷ್ಟು ಜನರ ತಲೆತಿನ್ನುತ್ತಿದ್ದ ಪ್ರಶ್ನೆ.

ಮಧ್ಯಾಹ್ನ ಸುಮಾರು 12 ಗಂಟೆಗೆ 'ಮದುವೆ ಸಮಾರಂಭ ಆರಂಭವಾಗುತ್ತದೆ' ಎಂಬ ಪ್ರಕಟಣೆ ಧ್ವನಿವರ್ಧಕದಿಂದ ಹೊರಬೀಳುತ್ತಿದಂತೆ ಕಲ್ಯಾಣ ಮಂಟಪದಲ್ಲಿ ಮೌನ ಆವರಿಸಿತು. ಎಲ್ಲರ ದೃಷ್ಠಿ ಸರಳವಾಗಿ ಅಲಂಕೃತಗೊಂಡಿದ್ದ ವೇದಿಕೆಯತ್ತ ಕೇಂದ್ರೀಕೃತವಾಗಿತ್ತು. ಕಾರ್ಯಕ್ರಮದ ನಿರ್ವಹಣೆಯನ್ನು ಮಾಡಲಾರಂಭಿಸಿದ ರಾಘು ಪಾಟೀಲ್ ವಧುವರರನ್ನು ಮತ್ತು ಅವರ ತಂದೆ ತಾಯಂದಿರನ್ನು ವೇದಿಕೆಗೆ ಬರಮಾಡಿಕೊಂಡರು. ಹೇಮಾ ಅವರನ್ನು ಕೆರೆದುಕೊಂಡು ವರ ಅಣ್ಣಪ್ಪ ವೇದಿಕೆಯ ಮೇಲೆ ಆಸೀನರಾಗುತ್ತಿದ್ದಂತೆ ನೆರೆದಿದ್ದವರೆಲ್ಲರೂ ಕರತಾಡನದೊಂದಿಗೆ ಅವರನ್ನು ಸ್ವಾಗತಿಸಿದರು. ಶ್ರೀಮತಿ ಚಂದ್ರವ್ವ ಮತ್ತು ಶ್ರೀ ಚಂದ್ರಪ್ಪ ಚಿಕ್ಕಣ್ಣನವರ ಅಣ್ಣಪ್ಪನ ಪಕ್ಕದಲ್ಲಿ ಹಾಗೂ ಶ್ರೀಮತಿ ವಿದ್ಯಾವತಿ ಮತ್ತು ಶ್ರೀ ಆನಂದಪ್ಪ ಸುಣಗಾರ್ ಹೇಮಾರವರ ಪಕ್ಕದಲ್ಲಿ ಆಸೀನರಾದಾಗ ವೇದಿಕೆಗೆ ಎಲ್ಲಿಲ್ಲದ ಕಳೆ ಬಂದಂತಾಯಿತು.



ಗಜೇಂದ್ರಗಡದ ಎಂ.ಎಸ್. ಹಡಪದ ಮತ್ತು ಸಂಗಡಿಗರು ಸಂದರ್ಭಕ್ಕೆ ತಕ್ಕ ಭಾವಗೀತೆಗಳನ್ನು ಹಾಡುವ ಮೂಲಕ ಮದುವೆಯ ಸಮಾರಂಭದ ಕಲಾಪಗಳಿಗೆ ಚಾಲನೆ ನೀಡಿದರು. ವಕೀಲರಾದ ಶಿವರಾಯ ದೇಸಾಯಿ ಅವರು ಚಿಕ್ಕಣ್ಣನವರ ಮತ್ತು ಸುಣಗಾರ ಬಂಧುಗಳ ಪರವಾಗಿ ಎಲ್ಲರನ್ನು ಆತ್ಮೀಯವಾಗಿ ಸ್ವಾಗತಿಸಿದರು. ರೈತ – ಕಾರ್ಮಿಕರ ಮುಖಂಡರಾದ ನಿತ್ಯಾನಂದಸ್ವಾಮಿ ಅವರು ಅಣ್ಣಪ್ಪ ಮತ್ತು ಹೇಮಾ ಅವರ ಈ ಸರಳ ಮದುವೆಯ ಹಿನ್ನೆಲೆಯನ್ನು ವಿವರಿಸಿದರು.

ಅಣ್ಣಪ್ಪ ಹಾನಗಲ್ ಕಾಲೇಜ್‌ನಲ್ಲಿ ಓದುತ್ತಿದ್ದಾಗ ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ) ಪ್ರಗತಿಪರ ವಿದ್ಯಾರ್ಥಿ ಸಂಘಟನೆಯ ಕ್ರಿಯಾಶೀಲ ಕಾರ್ಯಕರ್ತನಾಗಿ ಒಂದು ಪ್ರಗತಿಪರ ಜೀವನಾದರ್ಶವನ್ನು ಮೈಗೂಡಿಸಿಕೊಂಡಿದ್ದರು. ಬದುಕಿನಲ್ಲಿ ಸಾಧ್ಯವಾದಷ್ಟು ಮೂಢನಂಬಿಕೆ, ಕಂದಾಚಾರಗಳಿಂದ ದೂರವಿರುವುದು, ವರದಕ್ಷಿಣೆಯನ್ನು ಪಡೆಯದೆ ಮದುವೆಯಾಗುವುದು ಮುಂತಾದ ಆದರ್ಶಗಳನ್ನು ಸ್ವಂತ ಜೀವನದಲ್ಲಿ ಅಳವಡಿಸಿಕೊಳ್ಳಲು ದೃಢ ನಿರ್ಧಾರ ಮಾಡಿಕೊಂಡವರಾಗಿದ್ದರು. ಇಂತಹ ಆದರ್ಶಗಳನ್ನು ಒಪ್ಪುವ ಬಾಳಸಂಗಾತಿಯನ್ನು ಕಂಡುಕೊಳ್ಳಲು ಸಾಕಷ್ಟು ಅನ್ವೇಷಣೆ ನಡೆಸಿ ಕೊನೆಗೆ ಕೆಲವರಕೊಪ್ಪ ಗ್ರಾಮದ ಶ್ರೀಮತಿ ವಿದ್ಯಾವತಿ ಮತ್ತು ಶ್ರೀ ಆನಂದಪ್ಪ ಸು–ಣಗಾರ ಅವರು ತಮ್ಮ ಮಗಳನ್ನು ಕೊಟ್ಟು ಮದುವೆ ಮಾಡಿಕೊಡಲು ಒಪ್ಪಿಸುವಲ್ಲಿ ಯಶಸ್ವಿಯಾದರು. ಹೀಗಾಗಿ ಹಾನಗಲ್ ಜನ ಬಹುಶ: ಮೊದಲ ಬಾರಿಗೆ ಒಂದು ಆದರ್ಶ ಸರಳ ಮದುವೆಗೆ ಸಾಕ್ಷಿಯಾದರು.

ನಿತ್ಯಾನಂದಸ್ವಾಮಿಯವರು ವಧುವರರಿಗೆ ಪ್ರತಿಜ್ಞೆಯೊಂದನ್ನು ಬೋಧಿಸಿದರು. ಕುಟುಂಬದ ಜವಾಬ್ದಾರಿಗಳನ್ನು ಪರಸ್ಪರ ಹಂಚಿಕೊಂಡು ಕೊನೆಯವರೆಗೂ ಅನ್ಯೋನ್ಯವಾಗಿ ಬಾಳಲು ತಾವು ಬದ್ಧರೆಂದು ಅಣ್ಣಪ್ಪ ಮತ್ತು ಹೇಮಾ ನೆರೆದವರೆಲ್ಲರ ಎದುರು ಪ್ರತಿಜ್ಞೆಮಾಡಿದರು. ಅನಂತರ ವಧುವಿಗೆ ವರನಿಂದ ಮಾಂಗಲ್ಯ ಧಾರಣೆಮಾಡಲಾಯಿತು. ಅವರಿಬ್ಬರು ಹೂವಿನ ಹಾರಗಳನ್ನು ಬದಲಾಯಿಸಿಕೊಂಡು ತಮ್ಮ ಮದುವೆಯನ್ನು ಘೋಷಿಸಿಕೊಂಡಾಗ ನೆರೆದಿದ್ದ ಬಂಧು ಮಿತ್ರರೆಲ್ಲರೂ ಅಕ್ಕಿಕಾಳಿನ ಬದಲಾಗಿ ಹೂವುಗಳನ್ನು ಹಾಕುವ ಮೂಲಕ ನೂತನ ದಂಪತಿಗಳನ್ನು ಹರಸಿದರು.

ಸಿಪಿಐ(ಎಂ) ಪಕ್ಷದ ಜಿಲ್ಲಾ ಕಾರ್ಯದರ್ಶಿ ಬಿ.ಎಸ್. ಸೊಪ್ಪಿನ್ ವಧುವರರಿಗೆ ಶುಭಕೋರಿ ಮಾತನಾಡುತ್ತಾ ವಕೀಲರಾದ ಅಣ್ಣಪ್ಪ ಅವರು ಸಮಾಜದ ಕೆಲಸಕ್ಕೆ ಹೆಚ್ಚೆಚ್ಚು ಲಭ್ಯವಾಗಬೇಕೆಂದೂ ಅವರ ಕೈಹಿಡಿದಿರುವ ಹೇಮಾ ಅವರು ಈ ದಿಕ್ಕಿನಲ್ಲಿ ಹೆಚ್ಚು ಸಹಕಾರ ಹಾಗೂ ಪ್ರೋತ್ಸಾಹ ನೀಡಬೇಕೆಂದೂ ಕರೆನೀಡಿದರು. ಹಿರಿಯ ರೈತ ಮುಖಂಡರಾದ ಫಕೀರಪ್ಪ ಹೋತನಹಳ್ಳಿ ಅವರು ಸಹ ಶುಭ ಕೋರಿ ಮಾತನಾಡಿದರು. ಕೊನೆಯಲ್ಲಿ ಅಣ್ಣಪ್ಪ ಚಿಕ್ಕಣ್ಣನವರ್ ಎಲ್ಲರಿಗೂ ತಮ್ಮ ಕೃತಜ್ಞತೆಗಳನ್ನು ಸಲ್ಲಿಸಿದರು. ಇದೇ ರೀತಿ ಸರಳ ವಿವಾಹವಾಗಿ ನಲ್ಮೆಯಿಂದ ಜೀವನ ಸಾಗಿಸುತ್ತಿರುವ ಹಲವು ಜೋಡಿಗಳು ಈ ಮದುವೆ ಸಮಾರಂಭದಲ್ಲಿ ಭಾಗವಹಿಸಿದ್ದು ವಿಶೇಷವಾಗಿತ್ತು.

ವರದಿ : ಶಿವರಾಯ ದೇಸಾಯಿ

ಕೊಡುಗೆ

ಜನಶಕ್ತಿ ಪತ್ರಿಕೆಯ ಓದುಗರು ಆಗಿರುವ ಸಂಗಾತಿ ಅಣ್ಣಪ್ಪ ಅವರಿಗೆ ಮತ್ತು ಅವರು ಮದುವೆಯಾಗಿರುವ ಹೇಮಾ ಅವರಿಗೆ ಜನಶಕ್ತಿ ಪತ್ರಿಕೆಯ ಬಳಗದ ಹಾರ್ದಿಕ ಶುಭಾಶಯಗಳು. ಸಂಗಾತಿ ಅಣ್ಣಪ್ಪ ಅವರು ತಮ್ಮ ಮದುವೆಯ ಸವಿನೆನಪಿನಲ್ಲಿ ಪತ್ರಿಕೆಗೆ ಎರಡು ಸಾವಿರ ರೂ.ಗಳನ್ನು ನೀಡಿದ್ದಾರೆ. ಅದಕ್ಕೂ ಪತ್ರಿಕೆಯ ವಂದನೆಗಳು.

–ಸಂಪಾದಕರು.

ರಾಜಕೀಯ ಮಂಥನ...

ಪುಟ 8 ರಿಂದ

ಸೋಲಿಸಲೇ ಬೇಕಾಗಿದೆ. ಏಕೆಂದರೆ ಒಂದೆಡೆ ಅದು ಜನರನ್ನು ಜರ್ಝರಿತಗೊಳಿಸುತ್ತಿರುವ ಬೆಲೆಯೇರಿಕೆ, ನಿರುದ್ಯೋಗದ ಹೊರೆಗಳನ್ನು ಹಾಕುತ್ತಿದೆ, ರೈತರ ಮತ್ತು ಕಾರ್ಮಿಕರ ಸಂಕಟಗಳಿಗೆ ಕಾರಣವಾಗಿದೆ. ಇನ್ನೊಂದೆಡೆ, ನಗ್ನ ಭ್ರಷ್ಟಾಚಾರ ಮತ್ತು ದೊಡ್ಡ ವ್ಯವಹಾರಸ್ಥರಿಗೆ ಮತ್ತು ಸಂಪನ್ನ ವಿಭಾಗಗಳಿಗೆ ದೊಡ್ಡ ಉತ್ತೇಜನೆಗಳನ್ನು ಕೊಡುತ್ತಿದೆ. ಬಿಜೆಪಿಯನ್ನು ಏಕಾಂಗಿಯಾಗಿಸುವುದು ಮತ್ತು ಕೋಮುವಾದಿ, ಬಲಪಂಥೀಯ ಅಜೆಂಡಾವನ್ನು ಎದುರಿಸುವುದು ಎಡ, ಪ್ರಜಾಪ್ರಭುತ್ವವಾದಿ ಮತ್ತು ಜಾತ್ಯಾತೀತ ಶಕ್ತಿಗಳ ಮುನ್ನಡೆಗೆ ಅನಿವಾರ್ಯ ಮತ್ತು ಅತ್ಯಗತ್ಯ.

"ಕಾಂಗ್ರೆಸ್ ಮತ್ತು ಬಿಜೆಪಿಗೆ ವಿರುದ್ಧವಾಗಿ ಸಿಪಿಐ(ಎಂ) ಎಡ ಮತ್ತು ಪ್ರಜಾಸತ್ತಾತ್ಮಕ ಪರ್ಯಾಯವನ್ನು ಮುಂದಿಡುತ್ತದೆ. ಒಂದು ಎಡ ಮತ್ತು ಪ್ರಜಾಪ್ರಭುತ್ವವಾದಿ ವೇದಿಕೆ ಮಾತ್ರವೇ ಬಂಡವಾಳಶಾಹಿ–ಭೂಮಾಲಕ ಆಳ್ವಿಕೆಗೆ ಪರ್ಯಾಯವಾಗ ಬಲ್ಲದು. ಈ ಪರ್ಯಾಯವನ್ನು ಆಂದೋಲನಗಳು ಮತ್ತು ಹೋರಾಟಗಳ ಒಂದು ಪ್ರಕ್ರಿಯೆಯ ಮೂಲಕ ಕಟ್ಟಬೇಕಾಗಿದೆ ಮತ್ತು ಎಡ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳ ಒಂದು ರಾಜಕೀಯ ಪರ್ಯಾಯ ಮೂಡಿ ಬರಬೇಕಾಗಿದೆ. ಈ ಪ್ರಯತ್ನಗಳನ್ನು ನಡೆಸುವಾಗ ಪ್ರಜಾಪ್ರಭುತ್ವ, ರಾಷ್ಟ್ರೀಯ ಸಾರ್ವಭೌಮತ್ವ, ಜಾತ್ಯಾತೀತತೆ, ಒಕ್ಕೂಟತತ್ವದ ರಕ್ಷಣೆಯಲ್ಲಿ, ಜನತೆಯ ಜೀವನಾಧಾರಗಳ, ಹಕ್ಕುಗಳ ರಕ್ಷಣೆಯಲ್ಲಿ ಒಂದು ಪಾತ್ರ ವಹಿಸಬಹುದಾದ ಕಾಂಗ್ರೆಸೇತರ, ಬಿಜೆಪಿಯೇತರ ಶಕ್ತಿಗಳನ್ನು ಅಣಿನೆರೆಸುವುದು ಅಗತ್ಯವಾಗಬಹುದು. ಇಂತಹ ಜಂಟಿ ವೇದಿಕೆಗಳ ಉದಯ ಎಡ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳ ಮೈತ್ರಿಯನ್ನು ಕಟ್ಟುವ ಪ್ರಕ್ರಿಯೆಯಲ್ಲಿ ನೆರವಾಗಬೇಕು.

"ಪ್ರಸಕ್ತ ಸನ್ನಿವೇಶದಲ್ಲಿ ಕಾಂಗ್ರೆಸೇತರ ಪಕ್ಷಗಳೊಂದಿಗೆ ವಿವಿಧ ಪ್ರಶ್ನೆಗಳ ಮೇಲೆ ಜಂಟಿ ಕಾರ್ಯಾಚರಣೆಗಳಿಗೆ ನಾವು ಶ್ರಮಿಸಬೇಕು, ಈ ಮೂಲಕ ಆಂದೋಲನಗಳನ್ನು ವಿಸ್ತಾರಗೊಳಿಸಲು ಸಾಧ್ಯವಾಗಬೇಕು. ನಿರ್ದಿಷ್ಟ ಧೋರಣೆಯ ವಿಷಯಗಳು ಮತ್ತು ಜನತೆಯ ಪ್ರಶ್ನೆಗಳ ಮೇಲೆ ಸಂಸತ್ತಿನಲ್ಲಿ ಈ ಪಕ್ಷಗಳೊಂದಿಗೆ ಸಹಕಾರ ಇರಲು ಸಾಧ್ಯವಿದೆ. ಅಗತ್ಯವಿದ್ದರೆ, ಅಂತಹ ಅಗತ್ಯ ಬಂದಾಗ ಈ ಕೆಲವು ಪಕ್ಷಗಳೊಂದಿಗೆ ಚುನಾವಣಾ ಹೊಂದಾಣಿಕೆಗಳು ಸಾಧ್ಯ."(ರಾಜಕೀಯ ನಿರ್ಣಯದ ಪರಿಚ್ಛೇದ 2.137 ರಿಂದ 2.139).

ಎಡಪಕ್ಷಗಳು ಜುಲೈ 1, 2013ರಂದು ನವದೆಹಲಿಯಲ್ಲಿ ಒಂದು ರಾಷ್ಟ್ರೀಯ ರಾಜಕೀಯ ಸಮಾವೇಶವನ್ನು ಕರೆದಿವೆ. ಈ ಸಮಾವೇಶ ದೇಶದಲ್ಲಿ ಒಂದು ಪರ್ಯಾಯ ಧೋರಣೆಯ ದಿಕ್ಕಿನತ್ತ ಎಡಪಕ್ಷಗಳ ನಿಲುವನ್ನು ಹೊಂದಿರುವ ಒಂದು ಘೋಷಣೆಯನ್ನು ಚರ್ಚಿಸಿ ಅಂಗೀಕರಿಸಲಿದೆ. ಈ ಘೋಷಣೆಯ ಆಧಾರದಲ್ಲಿ ಎಡಪಕ್ಷಗಳು ದೇಶಕ್ಕೆ ಒಂದು ಪರ್ಯಾಯ ಧೋರಣೆ–ಯ ದಿಕ್ಕನ್ನು ಬೆಂಬಲಿಸಬೇಕು, ಅದಕ್ಕಾಗಿ ಕೆಲಸ ಮಾಡಬೇಕು ಎಂದು ಕಾಂಗ್ರೆಸೇತರ, ಬಿಜೆಪಿಯೇತರ ಜಾತ್ಯಾತೀತ ಶಕ್ತಿಗಳು ಮತ್ತು ಪಕ್ಷಗಳಿಗೆ ಮನವಿ ಮಾಡಿಕೊಳ್ಳುತ್ತವೆ. ಪ್ರಸಕ್ತ ರಾಜಕೀಯ ಮಂಥನ, ನಮ್ಮ ದೇಶದ ಮತ್ತು ಜನತೆಯ ವಿಶಾಲ ಜನಸಮೂಹಗಳ ಹಿತದೃಷ್ಟಿಯಿಂದ, ಈ ದಿಕ್ಕಿನಲ್ಲಿ ಚಲಿಸಬೇಕಾಗಿದೆ.

ಬಿಸಿಯೂಟ ನೌಕರರಿಗೆ ರೂ. 10 ಸಾವಿರ ಮಾಸಿಕ ವೇತನ ನೀಡಲು ಲಿಂಗಸೂರು ಸಮ್ಮೇಳನದ ಆಗ್ರಹ

ಲಿಂಗಸಗೂರು ಪಟ್ಟಣದ ಐಎಂಐ ಹಾಲ್‌ನಲ್ಲಿ ದಿನಾಂಕ: 9-6-2013 ರಂದು ಲಿಂಗಸಗೂರು ತಾಲೂಕು ಬಿಸಿಯೂಟ ನೌಕರರ 3ನೇ ಸಮ್ಮೇಳನ ಯಶಸ್ವಿಯಾಗಿ ಜರುಗಿತು.

ಸಮ್ಮೇಳನವನ್ನು ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಶೇಕ್ಷಾಖಾದ್ರಿ ಉದ್ಘಾಟಿಸಿ, ಬಿಸಿಯೂಟ ನೌಕರರು ಸುಮಾರು 12 ವರ್ಷಗಳಿಂದ ಸತತವಾಗಿ ಹೋರಾಟ ಮಾಡುತ್ತಾ ಬೇಡಿಕೆಗಳನ್ನು ಈಡೇರಿಸಿಕೊಂಡಿದ್ದಾರೆ. ಜೂನ್ 14 ರಂದು ಬಿಸಿಯೂಟ ನೌಕರರನ್ನು ಕಾರ್ಮಿಕರೆಂದು ಪರಿಗಣಿಸಿ ಕನಿಷ್ಠ ಕೂಲಿ ಕಾಯ್ದೆ ಪ್ರಕಾರ ತಿಂಗಳಿಗೆ ರೂ 10 ಸಾವಿರ ರೂಪಾಯಿ ವೇತನ ನೀಡಬೇಕು, ಖಾತ್ರಿ ಪಿಂಚಣಿ ಯೋಜನೆ ಜಾರಿಮಾಡಬೇಕೆಂದು ಕರೆ ನೀಡಿದರು. ಮಾರ್ಚ 17 ಹಾಗೂ 18 ರಂದು ಕೇಂದ್ರ ಕಾರ್ಮಿಕ ಮಂತ್ರಿಗಳು ಹಾಗೂ ಪ್ರಧಾನ ಮಂತ್ರಿಗಳು ಭಾಗವಹಿಸಿದ ಇಂಡಿಯನ್ ಲೇಬರ್ ಕಾನ್‌ಫೇರನ್ಸ್ ತೀರ್ಮಾನಗಳನ್ನು ಜಾರಿ ಮಾಡಬೇಕೆಂದು ಒತ್ತಾಯಿಸಿದರು.

ಸಿಐಟಿಯು ಜಿಲ್ಲಾ ಸಹ ಕಾರ್ಯದರ್ಶಿ ಎಂ.ಸಿ.ನಿಂಗಪ್ಪ ಮಾತನಾಡಿ, ಬಿಸಿಯೂಟ



ನೌಕರರು ಹಲವಾರು ಸಮಸ್ಯೆಗಳನ್ನು ಎದುರಿಸುತಿದ್ದು, ದುಡಿಯುವ ಜನರ ಸಹಾಯಕ್ಕೆ ಬರಬೇಕಾದ ಸರಕಾರ ನಿರ್ಲಕ್ಷ್ಯಿಸುತಿದೆ. ಮಠ ಮಂದಿರಗಳಿಗೆ ಉದಾರವಾಗಿ ಕೋಟಿ ಕೋಟಿ ಹಣ ನೀಡುತಿದೆ. ಆದರೆ, ಬಿಸಿಯೂಟ ನೌಕರರಿಗೆ ಕನಿಷ್ಠ ಕೂಲಿ ನೀಡಬೇಕೆಂದಾಗ ಮೀನಮೇಷ ಎಣಿಸುತಿದೆ. ಕೂಡಲೇ ಕನಿಷ್ಠ ಕೂಲಿ ಕಾಯ್ದೆ ಜಾರಿ ಮಾಡಬೇಕೆಂದು ಒತ್ತಾಯಿಸಿದರು.

ವೇದಿಕೆ ಮೇಲೆ ಬಿಸಿಯೂಟ ನೌಕರರ ಸಂಘದ ಜಿಲ್ಲಾ ಅಧ್ಯಕ್ಷೆಯಾದ ಕಾಂ. ಕೆ.ರೇಣುಕಮ್ಮ ಸಿಂಧನೂರು, ಸಿಐಟಿಯು ಮುಖಂಡರಾದ ಜಿ.ಎಸ್.ಯಂಕೋಬ್ ಉಪಸ್ಥಿತರಿದ್ದರು. ಸಮ್ಮೇಳನದ ಅಧ್ಯಕ್ಷತೆಯನ್ನು ತಾಲೂಕು ಬಿಸಿಯೂಟ ನೌಕರರ ಸಂಘದ ಮುಖಂಡರಾದ ಶಂಕ್ರಮ್ಮ ಗುರುಗುಂಟಾ ವಹಿಸಿದ್ದರು.

ನೂತನ ಪದಾಧಿಕಾರಿಗಳು


ಅಧ್ಯಕ್ಷರು : ತುಳುಜಾಭಾಯಿ ಮಸ್ಕಿ, ಉಪಾಧ್ಯಕ್ಷರು: ಲಕ್ಷ್ಮೀ ನೀರಲಕೇರಿ, ಶರಣಮ್ಮ ರೋಡಲಬಂಡಾ ಕ್ಯಾಂಪ್, ಪದ್ಮಾ ಮಸ್ಕಿ, ಪ್ರಧಾನ ಕಾರ್ಯದರ್ಶಿ : ಯಲ್ಲಮ್ಮ ಮುದುಗಲ್, ಸಹ ಕಾರ್ಯದರ್ಶಿ: ಮಲ್ಲಮ್ಮ ಯಲಗಲದಿನ್ನಿ, ಐಶ್ವರ್ಯ ಗುರುಗುಂಟಾ, ಜಾನಮ್ಮ ಪೈದೊಡ್ಡಿ, ಖಜಾಂಚಿ : ಶಂಕ್ರಮ್ಮ ಗುರುಗುಂಟ ಇವರನ್ನು ಅವಿರೋಧವಾಗಿ ಪದಾಧಿಕಾರಿಗಳನ್ನಾಗಿ ಸಮ್ಮೇಳನದಲ್ಲಿ ಆಯ್ಕೆ ಮಾಡಲಾಯಿತು.

ವರದಿ: ಎಂ.ಸಿ.ನಿಂಗಪ್ಪ ಹಟ್ಟಿ.

ದಲಿತ ಯುವಕರ ಮೇಲೆ ಹಲ್ಲೆ : ಕೂಲಿಕಾರರ ಸಂಘಟನೆಯಿಂದ ಪ್ರತಿಭಟನೆ

ಗುಲ್ಬರ್ಗ ಜಿಲ್ಲೆ, ಚಿತ್ತಾಪುರ ತಾಲೂಕಿನ ಕಲ್ಲಹಿಪ್ಪರಗಾ ಗ್ರಾಮದಲ್ಲಿ ದಲಿತ ಯುವಕರ ಮೇಲೆ ಹಲ್ಲೆ ಮಾಡಿ ದೌರ್ಜನ್ಯವೆಸಗಿರುವ ಆರೋಪಿಗಳನ್ನು ಕೂಡಲೇ ಬಂಧಿಸಿ, ಅವರ ವಿರುದ್ಧ ಕಾನೂನು ಕ್ರಮ ಜರಗಿಸಬೇಕೆಂದೂ, ಗಂಭೀರವಾಗಿ ಗಾಯಗೊಂಡು ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ 5 ಜನ ದಲಿತ ಯುವಕರಿಗೆ 'ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮೇಲೆ ದೌರ್ಜನ್ಯ ತಡೆ ಕಾಯ್ದೆ' ಅಡಿಯಲ್ಲಿ ಪರಿಹಾರ ನೀಡಬೇಕೆಂದೂ ಮತ್ತು ಗ್ರಾಮದ ದಲಿತ ಕುಟುಂಬಗಳಿಗೆ ಅಗತ್ಯ ರಕ್ಷಣೆಯನ್ನು ಒದಗಿಸಬೇಕೆಂದೂ ಒತ್ತಾಯಿಸಿ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ಗುಲ್ಬರ್ಗಾ ಜಿಲ್ಲಾ ಸಮಿತಿಯು ಇದೇ ಜೂನ್ 13 ರಂದು ಜಿಲ್ಲಾಧಿಕಾರಿ ಕಛೇರಿ ಎದುರು ಪ್ರತಿಭಟನಾ ಧರಣಿಯನ್ನು ನಡೆಸಿತು.

ಕಲ್ಲಹಿಪ್ಪರಗಾ ಗ್ರಾಮದಲ್ಲಿ ಇತ್ತೀಚೆಗೆ ನಡೆದ ಜಾತ್ರೆಯ ಅಂಗವಾಗಿ ಏರ್ಪಡಿಸಲಾಗಿದ್ದ ಕುಸ್ತಿ ಪಂದ್ಯಾಟದಲ್ಲಿ ಪಾಲ್ಗೊಂಡಿದ್ದ ದಲಿತ ಯುವಕ ಬಹುಮಾನ ಗೆದ್ದಿದ್ದಾನೆ. ಈ ವಿಷಯದಲ್ಲಿ ದಲಿತ ಯುವಕರಿಗೂ ಕೆಲವು ಮುಸ್ಲಿಂ ಯುವಕರಿಗೂ ನಡುವೆ ವಾಗ್ವಾದ ನಡೆದಿದೆ. ಸೋತ ಯುವಕನ ಕಡೆಯವರು ಮೈನುದ್ದಿನ್ ಇನಾಮದಾರ್, ಬಾಬು ಪಟೇಲ್ ಶೆಳ್ಳಗಿ ಮುಂತಾದವರ ನೇತೃತ್ವದಲ್ಲಿ ಸುಮಾರು 25 ಜನ ದಲಿತರ ಕೇರಿಗೆ ನುಗ್ಗಿ, ಕೊಡಲಿ, ಚಾಕು, ಬಡಿಗೆಗಳಿಂದ ದಲಿತ ಯುವಕರ ಮೇಲೆ ಹಲ್ಲೆ ಮಾಡಿದ್ದಾರೆ. ದಲಿತ ಯುವಕರಾದ ಗಣೇಶ್ ಮದ್ದಳಿ, ವಿಶ್ವನಾಥ ಗಂವ್ಹಾರ, ಶಿವಾನಂದ ಸಾತ-



ಖೇಡ, ಶರಣಪ್ಪ ಮದ್ದಲಿ ಮೊದಲಾದವರು ಗಂಭೀರವಾಗಿ ಗಾಯಗೊಂಡಿದ್ದಾರೆ.

ಕಾಳಗಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದರೂ ಕೂಲಿಕಾರ ಸಂಘದವರು ಪ್ರತಿಭಟನೆ ಮಾಡುವವರೆಗೂ ಪೊಲೀಸರು ಆರೋಪಿಗಳನ್ನು ಬಂಧಿಸಿ ಕಾನೂನು ಕ್ರಮ ಜರಗಿಸಿರಲಿಲ್ಲ. ಬದಲಾಗಿ ಹಲ್ಲೆ ಮಾಡಿದ ಆರೋಪಿಗಳಿಂದ ದೌರ್ಜನ್ಯಕ್ಕೊಳಗಾದ ದಲಿತರ ವಿರುದ್ಧ ಪೊಲೀಸರು ದೂರು ಪಡೆದು, ಕೌಂಟರ್ ಕೇಸ್ ದಾಖಲು ಮಾಡಿದ್ದಾರೆ.

ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತನಾಡಿದ ಕೃಷಿ ಕೂಲಿಕಾರರ ಸಂಘದ ಜಿಲ್ಲಾ ಅಧ್ಯಕ್ಷ ಭೀಮಶೆಟ್ಟಿ ಯಂಪಳ್ಳಿ, 'ರಾಜ್ಯದಲ್ಲಿ ದಲಿತರ ಮೇಲೆ ದೌರ್ಜನ್ಯಗಳು ಹೆಚ್ಚಾಗುತ್ತಾ ಇವೆ. ಆದರೆ ಮೇಲ್ಜಾತಿ, ಮೇಲ್ವರ್ಗಗಳ ಹಿಡಿತದಲ್ಲಿರುವ ಪೊಲೀಸರು ಪ್ರಕರಣಗಳನ್ನು ದಾಖಲು ಮಾಡದೆ, ದಾಖಲು ಮಾಡಿಕೊಂಡರೂ ಆರೋಪಿಗಳಿಗೆ ಅನುಕೂಲವಾಗುವಂತೆ ಎಫ್.ಐ.ಆರ್. ದಾಖಲಿಸಿ, ಅಪರಾಧಿಗಳನ್ನು ಬಂಧಿಸದೆ ರಾಜಾರೋಷವಾಗಿ ಒಡಾಡಲು ಬಿಟ್ಟು, ಎಲ್ಲಾ ಸಾಕ್ಷಿ ಪುರಾವೆಗಳನ್ನು ನಾಶಮಾಡಲು ಅಪರಾಧಿಗಳಿಗೆ ಅನುವುಮಾಡಿಕೊಟ್ಟು ದಲಿತರ ಮೇಲೆ ದೌರ್ಜನ್ಯ ಮಾಡುವ ಅಪರಾಧಿಗಳಿಗೆ ಶಿಕ್ಷೆಯಾಗುವುದನ್ನು ವ್ಯವಸ್ಥಿತವಾಗಿ ತಡೆ-ಯುತ್ತಾರೆ. ಇದರಿಂದಾಗಿ ಮೇಲ್ಜಾತಿ, ಮೇಲ್ವರ್ಗಗಳ ಪಟ್ಟಬದ್ಧರಿಗೆ ದಲಿತರ ಮೇಲೆ ದೌರ್ಜನ್ಯ ನಡೆಸಲು ಹೆಚ್ಚೆಚ್ಚು ಕುಮ್ಮಕ್ಕು ಸಿಕ್ಕಂತಾಗುತ್ತದೆ' ಎಂದು ಟೀಕಿಸಿದರು. ಆರೋಪಿಗಳನ್ನು ಕೂಡಲೇ ಬಂಧಿಸಿ, ಕ್ರಮ ಜರುಗಿಸದೆ ಹೋದರೆ ಹೋರಾಟವನ್ನು ತೀವ್ರಗೊಳಿಸಲಾಗುವುದು ಎಂದು ಎಚ್ಚರಿಸಿದರು.

ಇದೇ ಸಂದರ್ಭದಲ್ಲಿ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ಜಿಲ್ಲಾ ಕಾರ್ಯದರ್ಶಿ ಅಶೋಕ್ ಮ್ಯಾಗೇರಿ, ತಾಲೂಕ ಅಧ್ಯಕ್ಷರಾದ ಅಶೋಕ ಕಲಶೆಟ್ಟಿ, ಮುಖಂಡರಾದ ಮೇಘರಾಜ ಕಠಾರೆ, ಮಲ್ಲಪ್ಪ ಹೇರೂರ, ಸಾಯಿಬಣ್ಣ ಸಿಂಗೆ ಹಾಗೂ ಸಂಘದ ಕಾರ್ಯಕರ್ತರು, ನೊಂದ ದಲಿತ ಕುಟುಂಬಗಳ ಸದಸ್ಯರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ವರದಿ : ಅಶೋಕ ಮ್ಯಾಗೇರಿ.

ಆಹಾರ, ಮನೆ ನಿವೇಶನ, ಉದ್ಯೋಗ ಖಾತ್ರಿ...


ಜೀವನಾಧಾರ ಅಗತ್ಯಗಳಿಗಾಗಿ ರಾಷ್ಟ್ರವ್ಯಾಪಿ ಚಳುವಳಿ

ಕುಟುಂಬಕ್ಕೆ 2 ರೂ ಮೀರದ ಬೆಲೆಯಲ್ಲಿ 35 ಕೆ.ಜಿ. ಆಹಾರ ಧಾನ್ಯ, ಬಿಪಿಎಲ್, ಎಪಿಎಲ್ ಎನ್ನದೇ ಈ ಪಡಿತರ ವ್ಯವಸ್ಥೆಯ ಸಾರ್ವತ್ರೀಕರಣ, ಬೆಲೆ ಏರಿಕೆ ತಡೆಗೆ ಕ್ರಮ, ವಸತಿ ಇಲ್ಲದ ಬಡವರಿಗೆ ಮನೆ ನಿವೇಶನ, ಸಾಮಾಜಿಕ ನ್ಯಾಯದ ರಕ್ಷಣೆ, ನಿರುದ್ಯೋಗ ನಿವಾರಣೆ ಕ್ರಮ, ಉದ್ಯೋಗ ಖಾತ್ರಿ ಯೋಜನೆಯ ಸಮರ್ಪಕ ಜಾರಿ, ಶಿಕ್ಷಣ ಮತ್ತು ಆರೋಗ್ಯದ ಹಕ್ಕು ಜಾರಿ, ವ್ಯಾಪಾರದಲ್ಲಿ ವಿದೇಶೀ ನೇರ ಬಂಡವಾಳಕ್ಕೆ ತಡೆ, ಭ್ರಷ್ಟಾಚಾರದ ವಿರುದ್ಧ ಕಠಿಣ ಕ್ರಮ ಇತ್ಯಾದಿ ಬೇಡಿಕೆಗಳ ಆಧಾರದಲ್ಲಿ ರಾಷ್ಟ್ರವ್ಯಾಪಿಯಾದ ಚಳುವಳಿ ನಡೆಸಲು ಸಿಪಿಐ(ಎಂ) ಪಕ್ಷದ ಕೇಂದ್ರ ಸಮಿತಿ ಕರೆ ನೀಡಿದ ಬಗೆಗೆ ಪತ್ರಿಕೆಯಲ್ಲಿ ಓದಿದ್ದೀರಿ. ಮೇ ತಿಂಗಳ ಕೊನೆಯಲ್ಲಿ ನಡೆದಿರುವ ಈ ಚಳುವಳಿಯ ಕುರಿತ ಸಂಕ್ಷಿಪ್ತ ವರದಿ ಇಲ್ಲಿದೆ.

ವರದಿ ಭಾಗ-2

ಕೇರಳ: ಹಿಂದೆ ಎಲ್‌ಡಿಎಫ್ ಸರ್ಕಾರದ ಸಮಯದಲ್ಲಿ ಕೇರಳ ರಾಜ್ಯ ಕಾನೂನು ಸುವ್ಯಸ್ಥೆಯ ದೃಷ್ಟಿಯಿಂದ ಮುಂಚೂಣಿ ರಾಜ್ಯವಾಗಿದ್ದದ್ದು ಈಗ ಅಪರಾಧಗಳ ಪ್ರಮಾಣದಲ್ಲಿ ಮುಂಚೂಣಿ ರಾಜ್ಯವಾಗಿದೆ. ಕಾಂಗ್ರೆಸ್ ಪಕ್ಷದ ಕಿತ್ತಾಟಗಳ ನಡುವೆ ಯುಡಿಎಫ್ ಸರ್ಕಾರ ದಿಕ್ಕುಗೆಟ್ಟಂತಾಗಿದ್ದು ಆಡಳಿತ ತುಕ್ಕು ಹಿಡಿದಂತಾಗಿದೆ. ಜನರ ಪಾಲಿಗೆ ಸರ್ಕಾರವೇ ಸಮಸ್ಯೆಯಾಗಿದೆ. ಪರಿಹಾರ ಇಲ್ಲವಾಗಿದೆ. ಜೊತೆಗೆ ಅದು ಕೇಂದ್ರ ಸರ್ಕಾರದ ಜನವಿರೋಧಿ ನೀತಿಗಳಿಗೆ ತಾಳ ಹಾಕುತ್ತಿದೆ.

ಈ ಧೋರಣೆಗಳನ್ನು ಖಂಡಿಸಿ ಸಿಪಿಐ(ಎಂ) ಕೇರಳ ಸಮಿತಿ ಮೇ 20 ರಿಂದ 25 ರವರೆಗೆ 6 ದಿನಗಳ ಕಾಲ ರಾಜ್ಯದಾದ್ಯಂತ ತಾಲ್ಲೂಕು ಕಚೇರಿಗಳ ಮುತ್ತಿಗೆ ಹಾಕಿತು. 14 ಜಿಲ್ಲೆಗಳ 63 ತಹಸೀಲ್ದಾರರ ಕಛೇರಿಗಳನ್ನು ಸಾವಿರಾರು ಚಳುವಳಿಗಾರರ ತಂಡ ಮುತ್ತಿಗೆ ಹಾಕಿದೆ. ಒಟ್ಟಾರೆ ಲಕ್ಷಾಂತರ ಜನರು ಈ ಹೋರಾಟದಲ್ಲಿ ಭಾಗವಹಿಸಿದ್ದಾರೆ. ಮುತ್ತಿಗೆ ಹಾಕಿದ ದಿನ ಅಲ್ಲಿನ ತಾಲ್ಲೂಕು ಕಛೇರಿಯ ಕಾರ್ಯ ಸ್ಥಗಿತಗೊಳ್ಳುತ್ತಿತ್ತು. ದೊಡ್ಡ ಜನಚಳುವಳಿ–ಹೋರಾಟಗಳ ಹಿನ್ನೆಲೆ ಇರುವ ಕೇರಳದ ಸಿಪಿಐ(ಎಂ) ಪಕ್ಷಕ್ಕೂ ಇದು ಒಂದು ವಿಭಿನ್ನ ಅನುಭವವಾಗಿತ್ತು. ಪಕ್ಷದ ಶಾಖೆಗಳ ಮಟ್ಟದಲ್ಲಿ ಜನರ ಸಭೆಗಳು, ಏರಿಯಾದ ಮಟ್ಟದಲ್ಲಿ ಪ್ರಚಾರಾಂದೋಲನ ಯೋಜಿಸಲಾಗಿತ್ತು. ಈ ಆಂದೋಲನ ರಾಜ್ಯದ ಎಡಚಳುವಳಿಯಲ್ಲಿ ಹೊಸ ಉತ್ಸಾಹ ಮೂಡಿಸಿದೆ.




ತಮಿಳು ನಾಡು: ತಮಿಳು ನಾಡಿನಲ್ಲಿ ಚಳುವಳಿ ವ್ಯಾಪಕವಾಗಿ ನಡೆದಿದೆ. ಒಟ್ಟಾರೆ 402 ಕೇಂದ್ರಗಳಲ್ಲಿ ಪ್ರತಿಭಟನೆಗಳು ನಡೆದಿವೆ. ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಕೇಂದ್ರ ಸರ್ಕಾರಿ ಕಛೇರಿಗಳ ಮುತ್ತಿಗೆ ಹಾಕಲಾಗಿದೆ. ಒಟ್ಟಾರೆ ಸು. 50,000 ಜನರು ರಾಜ್ಯದಾದ್ಯಂತ ಬಂಧನಕ್ಕೊಳಗಾಗಿದ್ದಾರೆ. ಇದರಲ್ಲಿ ಸು. 10,000 ದಷ್ಟು ಮಹಿಳೆಯರೇ ಇದ್ದರು ಇನ್ನುವುದು ವಿಶೇಷ. ಮಹಿಳೆಯರ ಜೊತೆ 202 ಮಕ್ಕಳು ಸಹ ಬಂಧನಕ್ಕೊಳಗಾಗಿವೆ.

ಸಿಪಿಐ(ಎಂ) ಪಾಲಿಟ್ ಬ್ಯೂರೋ ಸದಸ್ಯರಾದ ಕೆ. ವರದರಾಜನ್ ಅವರು ತಿರುಚ್ಚಿಯಲ್ಲಿ, ಎ.ಕೆ. ಪದ್ಮನಾಭನ್ ಅವರು ತಿರುಪ್ಪೂರ್‌ನಲ್ಲಿ, ರಾಜ್ಯ ಕಾರ್ಯದರ್ಶಿ ಜಿ. ರಾಮಕೃಷ್ಣನ್ ಅವರು ಚೆನ್ನೈನಲ್ಲಿ ಪ್ರತಿಭಟನೆಯ ನೇತೃತ್ವ ವಹಿಸಿದ್ದರು.

ಪಾಂಡಿಚೆರಿ: ಪಾಂಡಿಚೆರಿಯಲ್ಲಿ ಐವತ್ತು ಮಹಿಳೆಯರು ಸೇರಿದಂತೆ ಸು. 500 ಜನರು ಪ್ರತಿಭಟನೆಯಲ್ಲಿ ಬಂಧನಕ್ಕೆ ಒಳಗಾಗಿದ್ದಾರೆ.

ಅಸ್ಸಾಂ: ಅಸ್ಸಾಂನಲ್ಲಿ ನಡೆದಿರುವ ಈ ಹಂತದ ಚಳವಳಿಯು ಇಡೀ ರಾಜ್ಯದಲ್ಲಿ ಸಿಪಿಐ(ಎಂ) ಪಕ್ಷಕ್ಕೆ ಹೊಸ ಹುರುಪು ತುಂಬಿದೆಯೆಂಬ ಉತ್ಸಾಹದ ವರದಿ ಬಂದಿದೆ. ಮೇ ತಿಂಗಳ ಮೂರನೇ ವಾರದಲ್ಲಿ ವ್ಯಾಪಕ ಪ್ರಚಾರಾಂದೋಲನ ಕೊನೆಯ ವಾರದಲ್ಲಿ ತೀವ್ರ ಪ್ರತಿಭಟನೆಗಳು ನಡೆದಿವೆ. ಕೇಂದ್ರ ಸಮಿತಿ ನಿಗದಿ ಮಾಡಿರುವ ಬೇಡಿಕೆಗಳಲ್ಲದೇ ರಾಜ್ಯದಲ್ಲಿ ಪ್ರವಾಹ ಪರಿಹಾರ ಕ್ರಮಗಳಿಗಾಗಿ ಮತ್ತು ಗಡಿಯಿಂದ ಅಕ್ರಮ ನುಸುಳುವಿಕೆ, ವಲಸೆ ಸಮಸ್ಯೆ ಎದುರಿಸುತ್ತಿರುವ ಈ ರಾಜ್ಯದಲ್ಲಿ ದೇಶದ ಪೌರತ್ವಕ್ಕೆ ಸಂಬಂಧಿಸಿ ರಾಷ್ಟ್ರೀಯ ನಾಗರೀಕತ್ವ ದಾಖಲೆ(ಎನ್.ಸಿ.ಆರ್.) 1951 ಅನ್ನು 1971 ಇಸವಿಗೆ ಕೊನೆಯೆಂದು ಪರಿಗಣಿಸಿ ಅಂತಿಮಗೊಳಿಸಬೇಕೆಂಬುದು ಸೇರಿದಂತೆ ವಿವಿಧ ಬೇಡಿಕೆಗಳನ್ನು ಸೇರಿಸಿಕೊಳ್ಳಲಾಗಿತ್ತು.



ಮೇ 31 ರಂದು ಗುವಾಹಟಿಯಲ್ಲಿ ಸು. 5,000 ಜನರು ಹೇಮೆನ್ ದಾಸ್, ದೇಬೇನ್ ಭಟ್ಟಾಚಾರ್ಯ ಮುಂತಾದವರ ನಾಯಕತ್ವದಲ್ಲಿ ಪ್ರತಿಭಟನೆ ನಡೆಸಿದ್ದಾರೆ. ರೋಗೇಶ್ವರ್‌ನಲ್ಲಿ ಸು. 1,000 ಜನ, ರಂಗಿಯಾದಲ್ಲಿ ಸು. 3,000 ಜನರು, ತೇಜ್‌ಪುರದಲ್ಲಿ ಸು. 3,000 ಜನರು, ಲಕ್ಷ್ಮೀಪುರ ಜಿಲ್ಲೆಯಲ್ಲಿ ಸು. 2,000 ಜನರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದಾರೆ. ಮೇಲ್ ಅಸ್ಸಾಂನ ಭಾಗ, ತಳದ ಅಸ್ಸಾಂನ ಭಾಗ, ಕಣಿವೆ ಹೀಗೆ ಎಲ್ಲ ಪ್ರದೇಶಗಳಲ್ಲಿಯೂ ಪ್ರತಿಭಟನೆಗಳು ನಡೆದಿವೆ. ಕೊಕ್ರಜಾರ್‌ನಲ್ಲಿ ರಸ್ತೆತಡೆ ನಡೆದಿದೆ.

ಗೋವಾ: ಗೋವಾದಲ್ಲಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ತಾಲ್‌ಮನ್ ಅವರ ನೇತೃತ್ವದಲ್ಲಿ ಚಳುವಳಿ ನಡೆದಿದೆ. ಬಿಚೋಲಿಂ, ಪೋಂಡಾ, ಕ್ವೇಪೆಂ, ಮರ್ಮಗೋವಾ ಮುಂತಾದೆಡೆ ಪ್ರತಿಭಟನೆಗಳು ನಡೆದಿವೆ. ಕೇಂದ್ರ ಸರ್ಕಾರದ ನಗದು ವರ್ಗಾವಣೆ ಯೋಜನೆ ವಿರುದ್ಧ 'ನಮ್ಮ ದುಡ್ಡು ನಮ್ಮ ಕೈಯಲ್ಲಿ' ಕಾರ್ಯಕ್ರಮ ಬೇಡ, 'ನಮ್ಮ ಊಟ ನಮ್ಮ ತಟ್ಟೆಯಲ್ಲಿ' ಕಾರ್ಯಕ್ರಮ ನೀಡಿ ಎಂದು ಆಗ್ರಹಿಸಲಾಯಿತು.

ಅಕ್ರಮ ಗಣಿಗಾರಿಕೆಯಲ್ಲಿ ಸು. 35 ಸಾವಿರ ಕೋಟಿ ದೋಚಿರುವ ನಾನಾ ಕಂಪನಿಗಳಿಂದ ಹಣ ವಸೂಲಿ ಮಾಡಿ ಕ್ರಮ ಕೈಗೊಳ್ಳಬೇಕು, ಖಾಸಗಿ ಕಂಪನಿಗಳ ಜೊತೆಗಿನ ಗಣಿಗಾರಿಕೆ ರದ್ದು ಮಾಡಬೇಕು. ಕುಣಿಬಿ, ಗೌಡ, ವೆಳಿಪ್ ಮುಂತಾದ ಬುಡಕಟ್ಟು ಸಮುದಾಯಗಳನ್ನು ಎಸ್.ಟಿ. ಎಂದು ಪರಿಗಣಿಸಿ ಸಾಮಾಜಿಕ ನ್ಯಾಯ ಒದಗಿಸಬೇಕು ಮುಂತಾದ ಸ್ಥಳೀಯ ಬೇಡಿಕೆಗಳ ಈಡೇರಿಕೆಗಾಗಿಯೂ ಚಳವಳಿ ಆಗ್ರಹಿಸಿತು.


ಮಹಾರಾಷ್ಟ್ರ: ಮಹಾರಾಷ್ಟ್ರದಲ್ಲಿ ಸಾಮಾನ್ಯ ಬೇಡಿಕೆಗಳಲ್ಲದೇ ಅರಣ್ಯ ಭೂಮಿ ಸಾಗುವಳಿ ಬೇಡಿಕೆ ಆಧಾರದಲ್ಲಿ ಮೇ 15 ರಿಂದ 31 ರವರೆಗೆ ರಾಜ್ಯವ್ಯಾಪಿ ಚಳುವಳಿ ಮುತ್ತಿಗೆ, ಜೈಲ್ ಭರೋ, ರಸ್ತಾ ರೋಖೋ ಮುಂತಾದ ರೂಪಗಳಲ್ಲಿ ನಡೆದ ವರದಿ ಇದೆ.

ಬಿಹಾರ: ರಾಜ್ಯದ ಭೂಹೀನರಿಗೆ ಭೂಮಿ ನೀಡಿ ಎಂಬ ಬೇಡಿಕೆ ಸೇರಿದಂತೆ ಜನಪರ ಬೇಡಿಕೆಗಳ ಆಧಾರದಲ್ಲಿ ಜನಪರ ಪರ್ಯಾಯ ನೀತಿಗಳ ಜಾರಿಗಾಗಿ, ಮೇ 1 ರಿಂದಲೇ ಎರಡನೇ ಹಂತದ ಚಳುವಳಿ ಆರಂಭಿಸಿಲಾಗಿತ್ತು. ಮೇ 19 ರಿಂದ ಮೇ 22ರವರೆಗೆ ಬ್ಲಾಕ್ ಮಟ್ಟದಲ್ಲಿ ವ್ಯಾಪಕವಾಗಿ ಚಳುವಳಿ ನಡೆದಿದೆ. ಮೇ 31 ರಂದು ಯೋಜಿಸಲಾಗಿದ್ದ ಜೈಲ್ ಭ–ರೋ ಹೋರಾಟವು ಭಾರಿ ಮಳೆ ಮತ್ತು ಹದಗೆಟ್ಟ ವಾತಾವರಣದ ಕಾರಣ ತೊಂದರೆಗೊಳಗಾಯಿತು. ಆದರೂ ಸಹಸ್ರಾರು ಸಂಖ್ಯೆಯಲ್ಲಿ ಚಳುವಳಿಗಾರರು ಚಳುವಳಿಯಲ್ಲಿ ಪಾಲ್ಗೊಂಡಿದ್ದಾರೆ.

ಅದೇ ರೀತಿ ಒರಿಸ್ಸಾ, ಹರ್ಯಾಣ ಮುಂತಾದ ರಾಜ್ಯಗಳಲ್ಲಿ ಸಹ ಚಳುವಳಿ ನಡೆದ ವರದಿಗಳು ಬಂದಿವೆ.


ಜನಶಕ್ತಿ
ಕನ್ನಡ ವಾರಪತ್ರಿಕೆ

ಲಾಭ ತರುವ ವಿಮಾನ ನಿಲ್ದಾಣಗಳ ಖಾಸಗೀಕರಣಕ್ಕೆ ಪಿ.ಪಿ.ಪಿ. ದಾರಿ



ವೇದರಾಜ ಎನ್.ಕೆ.

ಪಿ.ಪಿ.ಪಿ. ಅಂದರೆ ಸಾರ್ವಜನಿಕ-ಖಾಸಗಿ-ಪಾಲುದಾರಿಕೆ ಯುಪಿಎ-2 ಸರಕಾರ ಸಾರ್ವಜನಿಕ ಹಣದಲ್ಲಿ ಖಾಸಗಿಯವರಿಗೆ ಲಾಭ ಮಾಡಿಕೊಡಲು ಅನುಸರಿಸುತ್ತಿರುವ ಕಾರ್ಯತಂತ್ರ. ಲಾಭ ಮಾಡುತ್ತಿರುವ ಚೆನ್ನೈ ಮತ್ತು ಕೊಲ್ಕತಾ ವಿಮಾನ ನಿಲ್ದಾಣಗಳ ಖಾಸಗೀಕರಣಕ್ಕೆ ಈಗ ಯುಪಿಎ-2 ಸರಕಾರ ಅದೇ ದಾರಿ ಹಿಡಿದಿದೆ. ಒಂಭತ್ತು ತಿಂಗಳ ಹಿಂದೆಯೊಮ್ಮೆ ಈ ಯೋಚನೆಯನ್ನು ಸರಕಾರ ಮಾಡಿತ್ತು. ಆಗ ಸಿಐಟಿಯು ಪ್ರಧಾನ ಕಾರ್ಯದರ್ಶಿ ಮತ್ತು ಸಿಪಿಐ(ಎಂ) ಸಂಸತ್ ಸದಸ್ಯ ತಪನ್ ಸೇನ್ ಅವರು ಈ ಕ್ರಮಕ್ಕೆ ಆಕ್ಷೇಪ ವ್ಯಕ್ತಪಡಿಸಿ ವಿಮಾನಯಾನ ಮಂತ್ರಿಗಳಿಗೆ ಪತ್ರ ಬರೆದಿದ್ದರು.


ತಪನ ಸೇನ್

ಈ ನಡುವೆ ಸರಕಾರವೇ ನೇಮಿಸಿದ್ದ ತ್ರಿಪಕ್ಷೀಯ ಸಮಿತಿ ಈ ಎರಡು ಮಹಾನಗರಗಳ ವಿಮಾನ ನಿಲ್ದಾಣಗಳೂ ಸೇರಿದಂತೆ 60 ವಿಮಾನ ನಿಲ್ದಾಣಗಳ ಆಧುನೀಕರಣವನ್ನು 'ಭಾರತದ ವಿಮಾನ ನಿಲ್ದಾಣಗಳ ಪ್ರಾಧಿಕಾರ'(ಎಎಐ) ನಡೆಸಬೇಕೆಂದು ಶಿಫಾರಸು ಮಾಡಿತು. ವಿಮಾನಯಾನ ಇಲಾಖೆ ಅದನ್ನು ಅಂಗೀಕರಿಸಿದೆ. ಇದರ ಪ್ರಕಾರ ಈಗಾಗಲೇ ಎಎಐ 3700 ಕೋಟಿ ರೂ.ಗಳ ಹೂಡಿಕೆಯನ್ನೂ ಈ ಎರಡು ಮಹಾನಗರ ವಿಮಾನ ನಿಲ್ದಾಣಗಳ ಆಧುನೀಕರಣಕ್ಕೆ ಮಾಡಿದೆ. ಹೀಗಿರುವಾಗ ವಿಮಾನಯಾನ ಇಲಾಖೆ ತನ್ನದೇ ನಿರ್ಣಯವನ್ನು ತಿರುಗುಮುರುಗುಗೊಳಿಸುತ್ತಿರುವುದು ಏಕೆ, ಆಮೂಲಕ ಖಾಸಗಿಯವರು ಸರಕಾರದ ಹೂಡಿಕೆಗಳ ಪ್ರತಿಫಲ ಪಡೆಯುವಂತೆ ಏಕೆ ಮಾಡಬೇಕು ಎಂದು ಸಿಐಟಿಯು ಪ್ರಧಾನ ಕಾರ್ಯದರ್ಶಿಗಳು ಯುಪಿಎ-2 ವಿಮಾನಯಾನ ಮಂತ್ರಿಗಳಿಗೆ ಕಳೆದ ವಾರ ಮತ್ತೆ ಬರೆದ ಪತ್ರದಲ್ಲಿ ಪ್ರಶ್ನಿಸಿದ್ದಾರೆ.

ದಿಲ್ಲಿ ಮತ್ತು ಮುಂಬೈ ವಿಮಾನನಿಲ್ದಾಣಗಳು [illegible]ಗೀ 'ವೃತ್ತಿಪರರ' ನಿರ್ವಹಣೆಯಲ್ಲಿದ್ದು ಎಎಐಗಿಂತ ಉತ್ತಮ ನಿರ್ವಹಣೆಯನ್ನೇನೂ ನೀಡಿಲ್ಲ. ಬದಲಿಗೆ ಪ್ರಯಾಣಿಕರ ಮೇಲೆ 'ಬಳಕೆ ಖರ್ಚು'ಗಳನ್ನು ಹೇರಿದ್ದಾರೆ. ಅಲ್ಲಿಯ ಅನುಭವ ಸಾರ್ವಜನಿಕ ಹಿತಾಸಕ್ತಿ ಅಡಗಿರುವ ಮಹತ್ವದ ಮೂಲರಚನೆ ಯೋಜನೆಗಳಲ್ಲಿ ಖಾಸಗಿಯವರನ್ನು ಒಳಗೊಳ್ಳುವುದರ ಹಾನಿಕಾರಕ ಅಂಶಗಳನ್ನು ಬಯಲಿಗೆ ತಂದಿವೆ. ಆದರೂ ಸರಕಾರ ಚೆನ್ನೈ ಮತ್ತು ಕೊಲ್ಕತಾ ವಿಮಾನ ನಿಲ್ದಾನಗಳನ್ನೂ ಅದೇ ದಾರಿಗೆ ತಳ್ಳುವ ಹುನ್ನಾರ ನಡೆಸಿರುವಂತೆ ಕಾಣುತ್ತದೆ. ಇದನ್ನು ವಿಮಾನ ನಿಲ್ದಾಣಗಳ ಪ್ರಾಧಿಕಾರ ನೌಕರರ ಸಂಘ ಬಲವಾಗಿ ವಿರೋಧಿಸಿದೆ, ಜೂನ್ 21ರಂದು ಒಂದು ದಿನದ ಸಾಮೂಹಿಕ ರಜೆಯ ಮೂಲಕ ತಮ್ಮ ಪ್ರತಿಭಟನೆಯನ್ನು ದಾಖಲಿಸಲು ಅದು ನಿರ್ಧರಿಸಿದೆ.

'ಎಲ್ಲರನ್ನು ಒಳಗೊಳ್ಳುವ ಆರ್ಥಿಕ ಬೆಳವಣಿಗೆ' ಎಂಬುದೊಂದು ಲೊಳಲೊಟ್ಟೆ

ಕಳೆದ ದಶಕದಲ್ಲಿ ದೇಶದ ಆರ್ಥಿಕ ಬೆಳವಣಿಗೆ ಎಲ್ಲರನ್ನೂ ಹೆಚ್ಚೆಚ್ಚು ಒಳಗೊಳ್ಳುತ್ತಿರುವ ಬೆಳವಣಿಗೆ ಎಂದು ಪ್ರಧಾನ ಮಂತ್ರಿಗಳಿಂದ ಆರಂಭಿಸಿ, ಯುಪಿಎ ಅಧ್ಯಕ್ಷರಾದಿಯಾಗಿ ಎಲ್ಲ ಯುಪಿಎ ಮುಖಂಡರು ಇತ್ತೀಚೆಗೆ ಹೋದಲ್ಲೆಲ್ಲ ಹೇಳುತ್ತಿದ್ದಾರೆ. ಆದರೆ ಇದು ವಾಸ್ತವಕ್ಕೆ ತದ್ವಿರುದ್ಧ, ವಾಸ್ತವವನ್ನು ಮರೆಮಾಚಲೆಂದೇ ಇದನ್ನು ಹೇಳುತ್ತಿದ್ದಾರೆ ಎಂದು ಬಹುಮಂದಿ ಅನುಮಾನ ವ್ಯಕ್ತಪಡಿಸುತ್ತಿದ್ದರು. ಭಾರತೀಯ ರಿಝರ್ವ್ ಬ್ಯಾಂಕಿನ ಇತ್ತೀಚಿನ ಸರ್ವೆಯೊಂದು ಈ ಅನುಮಾನವನ್ನು ದೃಢಪಡಿಸಿದೆ. ಜತೆಗೆ 2011ರ ಜನಗಣತಿ ಅಂಕಿ-ಅಂಶಗಳೂ ಯುಪಿಎ ಮುಖಂಡರ ಮಾತನ್ನೇನೂ ಸಮರ್ಥಿಸುತ್ತಿಲ್ಲ.

ರಿಝರ್ವ್ ಬ್ಯಾಂಕ್ ಇತ್ತೀಚೆಗೆ ಒಂದು ಕಾರ್ಯಕಾರಿ ಪ್ರಬಂಧವನ್ನು ಪ್ರಕಟಿಸಿದೆ-"ಗ್ರಾಮೀಣ ಭಾರತದಲ್ಲಿ ಇನ್ನೂ ಉಳಿದಿರುವ ಅನೌಪಚಾರಿಕ ಸಾಲ ವ್ಯವಸ್ಥೆ: ನಿಯಂತ್ರಕ ಧೋರಣೆಗಳು ಬದಲಾಗುತ್ತಿರುವ ಪರಿದೃಶ್ಯವನ್ನುಗುರುತಿಸುವ ಅಗತ್ಯ"ಎಂಬುದು ಅದರ ಶಿರೋನಾಮೆ. ಈ ಪ್ರಬಂಧದ ಪ್ರಕಾರ 1970ರ ದಶಕದಿಂದ 1991ರ ವರೆಗೆ ಗ್ರಾಮೀಣ ಸಾಲವ್ಯವಸ್ಥೆಯಲ್ಲಿ ಅನೌಪಚಾರಿಕ ಸಾಲಗಳ, ಅಂದರೆ ಲೇವಾದೇವಿಗಾರರಿಂದ ಪಡೆಯುವ ದುಬಾರಿ ಬಡ್ಡಿಯ ಸಾಲಗಳ ಪ್ರಮಾಣ ಇಳಿಮುಖವಾಗುತ್ತಾ ಬಂದಿತ್ತು. ಆದರೆ ನಂತರದ ಎರಡು ದಶಕಗಳಲ್ಲಿ ಅದು ಮತ್ತೆ ತಿರುಗು-ಮುರುಗಾಗಿದೆ. ಲೇವಾದೇವಿ ಸಾಲಗಳ ಪ್ರಮಾಣ ಏರಲಾರಂಭಿಸಿದೆ. ವಾಣಿಜ್ಯ/ಸಹಕಾರಿ ಬ್ಯಾಂಕುಗಳು, ಸಹಕಾರಿ ಸೊಸೈಟಿಗಳು ಮತ್ತಿತರ ಸಂಸ್ಥೆಗಳಿಂದ ರೈತರು ಮತ್ತು ಗ್ರಾಮೀಣ ಪ್ರದೇಶಗಳ ಇತರರಿಗೆ ನೀಡಿದ ಸಾಲದ ಪ್ರಮಾಣ 1971ರಲ್ಲಿ 29.2 ಶೇ.ದಷ್ಟಿತ್ತು. 1991ರ ವೇಳೆಗೆ ಇದು 61.2ಶೇ. ಕ್ಕೆ ಏರಿತು. ಆದರೆ ನವ-ಉದಾರವಾದಿ ಆರ್ಥಿಕ 'ಸುಧಾರಣೆ'ಗಳ ಆರಂಭದೊಂದಿಗೇ ಮತ್ತೆ ಇಳಿಕೆ ಆರಂಭವಾಯಿತು. 2002ರಲ್ಲಿ 57.1 ಶೇ.ಕ್ಕೆ ಇಳಿಯಿತು. ಇದೇ ಅವಧಿಯಲ್ಲಿ


ಚೆನ್ನೈ ಅಂತರಾಷ್ಟ್ರೀಯ ವಿಮಾನ ನಿಲ್ದಾಣ

ಲೇವಾದೇವಿಗಾರರು ಮತ್ತಿತರರಿಂದ ದುಬಾರಿ ಬಡ್ಡಿಗೆ ಪಡೆದ ಸಾಲದ ಪ್ರಮಾಣ 70.8ಶೇ.ದಿಂದ 30.6ಶೇ.ಕ್ಕೆ ಇಳಿದದ್ದು, ನಂತರ ಮತ್ತೆ ಏರಲಾರಂಭಿಸಿ 2002ರ ವೇಳೆಗೆ 42.9ಶೇ. ತಲುಪಿತು.

ಇಲ್ಲಿ ಮತ್ತೊಂದು ಸಂಗತಿಯನ್ನು ಗಮನಿಸಬೇಕು. ರಿಝರ್ವ್ ಬ್ಯಾಂಕ್ ಚಿಟ್ ಫಂಡ್‌ಗಳು ಮತ್ತು ಕಿರುಸಾಲ ಸಂಸ್ಥೆಗಳು ನೀಡುವ ಸಾಲಗಳನ್ನೂ ಸಾಂಸ್ಥಿಕ ಸಾಲಗಳೆಂದು ಪರಿಗಣಿಸುತ್ತದೆ. ವಾಸ್ತವವಾಗಿ ಇವು ಲೇವಾದೇವಿಗಾರರ ದುಬಾರಿ ಬಡ್ಡಿ ಸಾಲಕ್ಕಿಂತ ಬಹಳ ಭಿನ್ನವಾಗಿಲ್ಲ. ಆದ್ದರಿಂದ ಇವನ್ನು ಸಾಂಸ್ಥಿಕ ಸಾಲಗಳೆಂದು ಪರಿಗಣಿಸದಿದ್ದರೆ ಅನೌಪಚಾರಿಕ ಸಾಲದ ಪ್ರಮಾಣ 90ಶೇ.ದಷ್ಟಾಗಬಹುದು ಎಂದು ಅಂದಾಜು ಮಾಡಲಾಗಿದೆ. ಅಷ್ಟೇ ಅಲ್ಲ, ಈ ಸಾಂಸ್ಥಿಕ ಸಾಲಗಳಲ್ಲಿ ಕೃಷಿ ಚಟುವಟಿಕೆಗಳಿಗೆ ನೀಡುವ ಸಾಲದ ಪ್ರಮಾಣವೂ ಇಳಿಮುಖಗೊಳ್ಳುತ್ತಿದೆ. ಗ್ರಾಮೀಣ ಶ್ರೀಮಂತರ ಪಾಲು ಹೆಚ್ಚುತ್ತಿದೆ. ಇದೀಗ ಯುಪಿಎ ಮುಖಂಡರು ಹೇಳಿಕೊಳ್ಳುವ 'ಎಲ್ಲರನ್ನು ಒಳಗೊಳ್ಳುವ ಹಣಕಾಸು ಧೋರಣೆ'ಯ ಫಲಿತಾಂಶ.

ಆದರೂ ಹಣಕಾಸು ಮಂತ್ರಿಗಳು ಸಂಸತ್ತಿನ ಚಳಿಗಾಲದ ಅಧಿವೇಶನದಲ್ಲಿ ಕಾರ್ಪೊರೇಟ್ ಕುಳಗಳು ಹೊಸ ಬ್ಯಾಂಕುಗಳನ್ನು ಆರಂಭಿಸಲು ಅವಕಾಶ ಕಲ್ಪಿಸುವ ಮಸೂದೆಯನ್ನು ಮಂಡಿಸುವಾಗ ಇದರಿಂದ ಬ್ಯಾಂಕ್ ಶಾಖಾ ಜಾಲ ವಿಸ್ತರಣೆಗೊಳ್ಳುತ್ತದೆ, ಆಮೂಲಕ ಸರಕಾರದ 'ಎಲ್ಲರನ್ನೂ ಒಳಗೊಳ್ಳುವ' ಆರ್ಥಿಕ ಬೆಳವಣಿಗೆಗೆ ನೆರವಾಗುತ್ತದೆ ಎಂದು ಅದೇ ರಾಗ ಆಲಾಪಿಸಿದರು. ರಿಝರ್ವ್ ಬ್ಯಾಂಕಿನ ಈ ಪ್ರಬಂಧದ ಪ್ರಕಾರ ಕೇವಲ ಬ್ಯಾಂಕ್ ಶಾಖೆಗಳ ಹೆಚ್ಚಳದಿಂದ ಎಲ್ಲರನ್ನು ಒಳಗೊಳ್ಳುವ ಹಣಕಾಸು ಬೆಳವಣಿಗೆ ಸಾಧ್ಯವಾಗುವುದಿಲ್ಲ.

ಮೈಲುಗಟ್ಟಲೆ ನಡೆ ಅಥವ ಮಿಲಿಯಗಟ್ಟಲೆ ಗುಳುಂ?

"ಮೀಲೋಂ ಹಮ್ ಆಗಯೇ, ಮೀಲೋಂ ಹಮೇಂ ಜಾನಾ ಹೈ"(ಎಷ್ಟೋ ಮೈಲುಗಳಷ್ಟು ಬಂದಿದ್ದೇವೆ, ಎಷ್ಟೋ ಮೈಲುಗಳಷ್ಟು ಹೋಗಬೇಕಾಗಿದೆ)- ಇದು ಯುಪಿಎ ಜಾಹೀರಾತುಗಳ ಸರಣಿಯ ಶಿರೋನಾಮೆ. ಬಿಜೆಪಿ ನೇತೃತ್ವದ ಎನ್‌ಡಿಎ ಸರಕಾರದ 'ಇಂಡಿಯಾ ಶೈನಿಂಗ್' ಮಾದರಿಯದ್ದಲ್ಲ ಇದು ಎಂದು ಕಾಂಗ್ರೆಸ್ ವಕ್ತಾರರುಗಳು ಹೇಳಿದರೂ, ಅದೇ ರೀತಿಯಲ್ಲಿ ತಮಾಷೆಯ ವಸ್ತುವಾಗುತ್ತಿದೆ. "ಎಷ್ಟೋ ಮಿಲಿಯಗಳಷ್ಟು ತಿಂದಿದ್ದೇವೆ, ಎಷ್ಟೋ ಮಿಲಿಯಗಳಷ್ಟು ತಿನ್ನಲಿಕ್ಕಿದೆ" ಎಂಬ ಅಣಕ ಆಗಲೇ ಜನಜನಿತವಾಗುತ್ತಿದೆ. ಒಂದು ರೀತಿಯಲ್ಲಿ ಯುಪಿಎ-2 ಆಳ್ವಿಕೆಯ ನಿಜಕತೆಯನ್ನು ಈ ಒಂದೇ ವಾಕ್ಯದಲ್ಲಿ ನಿರೂಪಿಸಲು ಈ ಜಾಹೀರಾತುಗಳೇ ನೆರವಾದಂತಿದೆ.

'ಆಮ್ ಆದ್ಮಿ'ಮಾದರಿಯ ಪದಪುಂಜಗಳನ್ನು ಪುಷ್ಕಳವಾಗಿ ಈ ಜಾಹೀರಾತುಗಳಲ್ಲಿ ಬಳಸಲಾಗಿದೆ-'ಜನತೆಯನ್ನು ತಲುಪುವ 9 ವರ್ಷಗಳು', 'ಎಲ್ಲರನ್ನೂ ಒಳಗೊಳ್ಳುವ ಬೆಳವಣಿಗೆ', 'ಬದುಕುಗಳ ಪರಿವರ್ತನೆ' ಇತ್ಯಾದಿ. ಈ 'ಬದುಕುಗಳ ಪರಿವರ್ತನೆ'ಯಲ್ಲಿ ಒಂದು 'ಆಶಾ' ಕಾರ್ಯಕರ್ತೆಯ ಮೇಲಿದೆ. ಆಕೆ ನಮ್ಮ ಆರೋಗ್ಯ ವ್ಯವಸ್ಥೆಯ ಅನಾಮಧೇಯ ವೀರವನಿತೆ, ಸಮುದಾಯ ಮಟ್ಟದಲ್ಲಿ ಆರೋಗ್ಯಪಾಲನೆಗೆ ಮೊದಲ ಸಂಪರ್ಕ ಒದಗಿಸುವಾಕೆ ಎಂದೆಲ್ಲ ಹೇಳಲಾಗಿದೆ. ಇದಕ್ಕಾಗಿ ಆಕೆ 'ಕಾರ್ಯಸಾಧನೆ ಆಧಾರದಲ್ಲಿ ಪರಿಹಾರ', ಅಂದರೆ ಹಣದ ಪ್ರತಿಫಲ ಪಡೆಯತ್ತಾಳೆ- ಎಷ್ಟು? ತಿಂಗಳಿಗೆ 1000ರೂ.ಗಳು! ಈಕೆ ಹಳ್ಳಿಗಳಿಂದ ಆಸ್ಪತ್ರೆಗಳಿಗೆ ಓಡಾಡಲು ಪ್ರಯಾಣ ಭತ್ಯೆಯನ್ನು ಈ 1000ರೂ.ಗಳಲ್ಲೇ ತೆರಬೇಕು! ಯುಪಿಎ ಆಡಳಿತದಲ್ಲಿ ಈಕೆಯ 'ಬದುಕು ಪರಿವರ್ತನೆ'ಗೊಂಡ ಪರಿಯಿದು. ಈಕೆಯದ್ದು ಮಾತ್ರವಲ್ಲ, ಭಾರತದ ಎಲ್ಲ 'ಆಮ್ ಆದ್ಮಿ'ಗಳ 'ಬದುಕಿನ ಪರಿವರ್ತನೆ' ಆಗಿರುವುದು ಸುಮಾರಾಗಿ ಇದೇ ರೀತಿಯಲ್ಲಿ. ಈ ವಿಷಯದಲ್ಲಿ ಮಾತ್ರ ಯುಪಿಎ ಜಾಹೀರಾತು ಪ್ರಚಾರ ಎನ್‌ಡಿಎ 'ಇಂಡಿಯಾ ಶೈನಿಂಗ್'

ಪುಟ 15 ರಿಂದ

ಜಗದಗಲ

ಶರತ್‌ಚಂದ್ರ

ಟರ್ಕಿಯಲ್ಲೀಗ ವಶಪಡಿಸಿಕೊಳ್ಳಿ’ ಚಳುವಳಿಯ ಬಿರುಗಾಳಿ

ಈಜಿಪ್ಟಿನ ರಾಜಧಾನಿ ಕೈರೊದಲ್ಲಿ ತಹ್ರೀರ್ ಚೌಕದಲ್ಲಿ ಆರಂಭವಾದ ‘ಚೌಕ ವಶಪಡಿಸಿಕೊಳ್ಳಿ’ ಮಾದರಿಯ ಚಳುವಳಿ ತುರ್ಕಿಗೂ ಹರಡಿದೆ. ತುರ್ಕಿಯ ಪ್ರಮುಖ ನಗರ ಇಸ್ತಾನ್‌ಬುಲ್‌ನ ಕೇಂದ್ರ ಪ್ರದೇಶದಲ್ಲಿರುವ ತಕ್ಸಿಮ್ ಚೌಕದ ಹತ್ತಿರ ಇರುವ ಗೆಝಿ ಪಾರ್ಕನ್ನು ವಾಣಿಜ್ಯ ಸಂಕೀರ್ಣಗಳ ಮೂಲಕ ‘ಪುನಃ-ಅಭಿವೃದ್ಧಿ’ ಪಡಿಸುವುದರ ಯೋಜನೆ ವಿರುದ್ಧ ಆರಂಭವಾಗಿತ್ತು ಪರಿಸರವಾದಿ ಚಳುವಳಿ. ಆದ-ರೆ ಕೆಲವೇ ದಿನಗಳಲ್ಲಿ ಅದು ದೇಶದಾದ್ಯಂತ ‘ಫ್ಯಾಸಿಸ್ಟ್’ ಎರ್ಡೊಗಾನ್ ಸರ್ಕಾರದ ವಿರುದ್ಧ ವ್ಯಾಪಕ ಚಳುವಳಿಯಾಗಿ ಆಶ್ಚರ್ಯಕಾರಿಯಾಗಿ ಬೆಳೆಯಿತು. ಈ ಚಳುವಳಿಯ ವಿರುದ್ಧ ಪ್ರಧಾನಿ ಎರ್ಡೊಗಾನ್ ತಳೆದ ದಮನಕಾರಿ ನೀತಿ ಜನತೆಯನ್ನು ರೊಚ್ಚಿಗೆಬ್ಬಿಸಿತು. ಗೆಝಿ ಪಾರ್ಕಿನಲ್ಲಿ ಶಾಂತಿಯುತವಾಗಿ ಧರಣಿ ಹೂಡಿದ್ದ ಸಾವಿರಾರು ಪ್ರತಿಭಟನಾಕಾರರನ್ನು ಚದುರಿಸಲು ಸರ್ಕಾರ ಜಲಫಿರಂಗಿ, ಅಶ್ರುವಾಯು ಮತ್ತು ಗೋಳಿಬಾರು ನಡೆಸಿತು.

ಮೇ28ರಂದು ಆರಂಭವಾಗಿ ಕಳೆದ 3 ವಾರಗಳಿಂದ ಬೇರೆ ಬೇರೆ ರೂಪಗಳಲ್ಲಿ ಮುಂದುವರೆಯುತ್ತಿರುವ ಚಳುವಳಿಯ ವಿರುದ್ಧ ದಮನದಲ್ಲಿ 4 ಜನ ಸತ್ತಿದ್ದು 5 ಸಾವಿರಕ್ಕೂ ಹೆಚ್ಚು ಜನ ತೀವ್ರವಾಗಿ ಗಾಯಗೊಂಡಿದ್ದಾರೆ. ಈ ದಮನದ ನಂತರ ಚಳುವಳಿ ದೇಶದಾದ್ಯಂತ ಸುಮಾರು 70 ಪಟ್ಟಣಗಳಿಗೆ ಹಬ್ಬಿತು. ಎಲ್ಲೆಲ್ಲೂ ಸಾವಿರಾರು ಜನ ಕೇಂದ್ರ ಚೌಕಗಳನ್ನು ವಶಪಡಿಸಿಕೊಂಡರು. ಜೂನ್ 4-5 ರಂದು ಎರಡು ಪ್ರಧಾನ ಟ್ರೇಡ್ ಯೂನಿಯನುಗಳು ‘ಸಾರ್ವತ್ರಿಕ ಮುಷ್ಕರ’ದೊಂದಿಗೆ ಚಳುವಳಿ ಇನ್ನಷ್ಟು ಕಸುವು ಪಡೆಯಿತು. ಚಳುವಳಿ ವ್ಯಾಪಕವಾಗಿ ಹರಡುವುದನ್ನು ನೋಡಿ ಬೆದರಿದ ಸರ್ಕಾರ ಗೆಝಿ ಪಾರ್ಕಿನ ‘ಪುನಃ-ಅಭಿವೃದ್ಧಿ’ ಯೋಜನೆಯನ್ನು ತಡೆಹಿಡಿಯುವುದಾಗಿ ಘೋಷಿಸಿತು.

ಆದರೆ ಯೋಜನೆಯನ್ನು ಪೂರ್ಣವಾಗಿ ರದ್ದುಪಡಿಸಬೇಕೆಂದು ಚಳುವಳಿ ಮುಂದುವರೆಯಿತು. ಗೆಝಿ ಪಾರ್ಕಿನಲ್ಲಿ ಪೊಲೀಸ್ ಕಾರ್ಯಾಚರಣೆ ನಂತರ ಜನ ಕಡಿಮೆಯಾಗುತ್ತಿದ್ದಂತೆ, ಪ್ರಧಾನಿ ಎರ್ಡೊಗಾನ್ ಸರ್ಕಾರ ಯೋಜನೆಯ ಪರವಾಗಿ ತಮ್ಮ ಬೆಂಬಲಿಗರ ದೊಡ್ಡ ರ್‍ಯಾಲಿಗಳನ್ನು ಸಂಘಟಿಸಿತು. ಯೋಜನೆಯ ಬಗ್ಗೆ ಜನಮತ ಸಂಗ್ರಹದ ನಂತರ ನಿರ್ಧಾರ ಕೈಗೊಳ್ಳುವುದರ ಬಗ್ಗೆ ಮಾತನಾಡಲು ಆರಂಭಿಸಿದ್ದ ಸರ್ಕಾರ ಯೋಜನೆ ತಡೆಹಿಡಿಯುವುದಾಗಿ ಕೊಟ್ಟ ಭರವಸೆಯಿಂದ



ಜಾರಿಕೊಳ್ಳಲು ಪ್ರಯತ್ನಿಸಿತು. ಚಳುವಳಿಯ ಹಿಂದೆ ವಿದೇಶೀ ಶಕ್ತಿಗಳು ಮತ್ತು ‘ಸ್ಥಳೀಯ ಭಯೋತ್ಪಾದಕರು’ ಇದ್ದಾರೆ ಎಂಬ ಸರ್ಕಾರಿ ಹೇಳಿಕೆ ಸಹ ಜನತೆಯನ್ನು ರೊಚ್ಚಿಗೆಬ್ಬಿಸಿದೆ. ಇದರಿಂದ ಪುನಃ ಚಳುವಳಿ ಗರಿಗೆದರಿಗೊಂಡಿದೆ. ಗುಂಡುಝ್ ಎಂಬ ನಟ 8 ಗಂಟೆಗಳ ‘ಸುಮ್ಮನೆ ನಿಲ್ಲುವ’ ಹೊಸ ರೂಪದ ಪ್ರತಿಭಟನೆ ಆರಂಭಿಸಿದ. ನೂರಾರು ಜನ ಆತನ ಜತೆ ಸೌಹಾರ್ದ ಕ್ರಮವಾಗಿ ‘ಸುಮ್ಮನೆ ನಿಲ್ಲುವ’ ಹೊಸ ರೂಪದ ಪ್ರತಿಭಟನೆಯಲ್ಲಿ ಭಾಗವಹಿಸಿದರು. ಈ ರೂಪದ ಶಾಂತಿಯುತ ಪ್ರತಿಭಟನೆ ಬೆಳೆಯುತ್ತಿದೆ. ಶಾಂತಿಯುತವಾಗಿ ಇರುವುದರಿಂದ ಸರ್ಕಾರ ಏನೂ ಕ್ರಮ ಕೈಗೊಳ್ಳಲಾಗದೆ ಸುಮ್ಮನಿದೆ. ಸರ್ಕಾರ ಮತ್ತು ಪ್ರತಿಭಟನಾಕಾರರ ಮುಖಾಮುಖಿ ಮುಂದುವರೆದಿದೆ.

ಗೆಝಿ ಪಾರ್ಕಿನ ‘ಪುನಃ-ಅಭಿವೃದ್ಧಿ’ ಯೋಜನೆ ಈ ಚಳುವಳಿಗೆ ಕಿಡಿ ಒದಗಿಸಿತು. ಇಷ್ಟು ಬೇಗ ವ್ಯಾಪಕವಾಗಿ ಬೆಳೆದ ಚಳುವಳಿಯ ಹಿಂದೆ ಇರುವುದು ಹಲವು ವರ್ಷಗಳಿಂದ ಎರ್ಡೊಗನ್ ಸರ್ಕಾರದ ವಿರುದ್ಧ ಕುದಿಯುತ್ತಿದ್ದ ಆಕ್ರೋಶ. ಎರ್ಡೊಗನ್ ನಾಯಕತ್ವದ ‘ಮೆದು ಮೂಲಭೂತವಾದಿ’ ಎಕೆಪಿ ಪಕ್ಷದ ಸರ್ಕಾರ ಅಧಿಕಾರಕ್ಕೆ ಬಂದಾಗಿನಿಂದಲೂ ಕೆಮಾಲ್ ಅತಾತುರ್ಕ್ ಸ್ಥಾಪಿಸಿದ ಆಧುನಿಕ ತುರ್ಕಿ ರಿಪಬ್ಲಿಕನ್ ಸಂವಿಧಾನದ ಮೂಲ ಆಶಯಗಳನ್ನು ಮೂಲಭೂತವಾಗಿ ಬದಲಾಯಿಸುವ ಹುನ್ನಾರ ನಡೆಸಿತ್ತು. ಸಂವಿಧಾನದ ಸೆಕ್ಯುಲರ್, ಪ್ರಜಾಸತ್ತಾತ್ಮಕ ಮತ್ತು ಸ್ವಾತಂತ್ರ್ಯಗಳ ಆಶಯಗಳ ವಿರುದ್ಧ ಹಲವು ಕಾನೂನು ಕ್ರಮಗಳನ್ನು ಜಾರಿ ಮಾಡಿತ್ತು. ಶಾಲೆಗಳಲ್ಲಿ ಹೆಣ್ಣು ಮಕ್ಕಳು ‘ಸ್ಕಾರ್ಫ’ ಧರಿಸುವುದು ಕಡ್ಡಾಯ ಮಾಡುವುದು, ‘ಅತಾತುರ್ಕ್’ ರಾಷ್ಟ್ರೀಯ ದಿನದಂದು ಗಂಡು ಮತ್ತು ಹೆಣ್ಣುಗಳ ಜೋಡಿ ನೃತ್ಯ ನಿಲ್ಲಿಸಿರುವುದು, ಇಸ್ಲಾಮಿಕ್ ನಿಯಮಾವಳಿಗಳನ್ನು ಇನ್ನೂ ಹಲವು ಕ್ಷೇತ್ರಗಳಲ್ಲಿ ಜಾರಿಗೆ ತರುವುದು ಇತ್ಯಾದಿ ಇಂತಹ ಕ್ರಮಗಳು. ಅಲ್ಲದೆ ಪ್ರಭುತ್ವದ ಹಲವು ಸಂಸ್ಥೆಗಳಲ್ಲಿ ಸೆಕ್ಯುಲರ್ ವ್ಯಕ್ತಿ-ಶಕ್ತಿಗಳನ್ನು ಕಿತ್ತು ಹಾಕಿ ‘ಮೂಲಭೂತವಾದಿ’ ವ್ಯಕ್ತಿ-ಶಕ್ತಿಗಳನ್ನು ತರುವುದನ್ನು (ಬಿಜೆಪಿ ಸರ್ಕಾರದ ಕೇಸರೀಕರಣದಂತೆ) ಅವ್ಯಾಹತವಾಗಿ ನಡೆಸಿತ್ತು. ಆ ಪ್ರದೇಶದಲ್ಲಿ ಪ್ರಾದೇಶಿಕ ಸೂಪರ್ ಪವರ್ ಆಗುವ ತವಕದಲ್ಲಿ ನೆರೆಯ ಸಿರಿಯಾ ವಿರುದ್ಧ ಪ್ರಾಕ್ಸಿ ಯುದ್ಧದಲ್ಲಿ ಭಾಗಿಯಾಗಿದೆ. ಇದನ್ನು ಹಲವು ಶಾಂತಪ್ರಿಯ ಯುದ್ಧ ವಿರೋಧಿ ಶಕ್ತಿಗಳು ವಿರೊಧಿಸುತ್ತಿವೆ. ಚಳುವಳಿಯನ್ನು ಪೂರ್ತಿ ಬ್ಲಾಕ್ ಔಟ್ ಮಾಡಿದ ಸರ್ಕಾರಿ ಮತ್ತು ಖಾಸಗಿ ಮಾಧ್ಯಮಗಳ ವಿರುದ್ಧ ವೂ ಜನ ರೊಚ್ಚಿಗೆದ್ದಿದ್ದಾರೆ.

ಸರ್ಕಾರ ನವ-ಉದಾರವಾದಿ ನೀತಿಗಳನ್ನು ಜೋರಾಗಿ ಜಾರಿ ಮಾಡುತ್ತಿದ್ದು, ಕೊಲ್ಲಿ ದೇಶಗಳ ಅಮೀರರ ವಿದೇಶೀ ಹಣ ತುರ್ಕಿಗೆ ಹರಿಯುತ್ತಿದೆ. ತುರ್ಕಿಯ ಮೂಲ ಸೌಕರ್ಯದ ಪುನ-ನಿರ್ಮಾಣ ಮಾಡುವ ನೆಪದಲ್ಲಿ ಪ್ರಾಕೃತಿಕ ಸಂಪನ್ಮೂಲಗಳನ್ನು ವಿದೇಶೀ ಅಮೀರರರಿಗೆ ಮಾರಲು ಸರ್ಕಾರ ಉದ್ದೇಶಿಸಿದೆ. ಬೃಹತ್ ಗೆಝಿ ಪಾರ್ಕಿನ ಮಾರಾಟ ಇದರ ಒಂದು ಉದಾಹರಣೆಯಷ್ಟೇ. ಇದಲ್ಲದೆ ಕೆಮಾಲ್ ಅತಾತುರ್ಕನ ಆಧುನಿಕತೆಯ ಪ್ರತೀಕಗಳಾದ ರಾಷ್ಟ್ರೀಯ ಸ್ಮಾರಕಗಳನ್ನು ಅಳಿಸಿ ಹಾಕಿ, ಪ್ರಾಚೀನ ತುರ್ಕಿ ಒಟ್ಟೊಮಾನ್ ಸಾಮ್ರಾಜ್ಯವನ್ನು ವೈಭವೀಕರಿಸುವ ಸ್ಮಾರಕಗಳನ್ನು ಸ್ಥಾಪಿಸುವ ಯೋಜನೆಯನ್ನು ಜಾರಿಗೆ ತಂದಿರುವುದು ಸೆಕ್ಯುಲರ್‌ವಾದಿಗಳನ್ನು ರೊಚ್ಚಿಗೆಬ್ಬಿಸಿದೆ. ಗೆಝಿ ಪಾರ್ಕಿನ ಹತ್ತಿರ ಇರುವ ಬೃಹತ್ ‘ಅತಾತು[illegible] ಸಾಂಸ್ಕೃತಿಕ ಕೇಂದ್ರ’ವನ್ನು ಒಡೆದು ಹಾ[illegible] ಒಟ್ಟೊಮಾನ್ ಶಸ್ತ್ರಾಗಾರದ ಸ್ಮಾರಕವನ[illegible] ಸ್ಥಾಪಿಸುವ ಯೋಜನೆಯೂ ಇದರ[illegible] ಸೇರಿತ್ತು. ಇದೇ ಸ್ಥಳದಲ್ಲಿ ಅತಾತುರ್ಕ[illegible] ಮತ್ತು ಒಟ್ಟೊಮಾನ್ ಸೈನಿಕರಿಗೂ ಭೀಷಣ[illegible] ಕಾಳಗವಾಗಿತ್ತು ಎನ್ನುವುದೂ ಗಮನಾರ್ಹ.

ಆದ್ದರಿಂದಲೇ ಏನೋ ಪ್ರತಿಭಟನಾಕಾರರ[illegible] ಅತಾತುರ್ಕನ ದೊಡ್ಡ ಚಿತ್ರಗಳನ[illegible] ಹಿಡಿದಿದ್ದರು. ತಾವು ಆತನ ಆಧುನಿಕ ರಿಪಬ್ಲಿಕ[illegible] ಸೆಕ್ಯುಲರ್ ಪ್ರಜಾಸತ್ತಾತ್ಮಕ ಆಶಯಗಳನ[illegible] ಎತ್ತಿಹಿಡಿಯುತ್ತೇವೆ ಎನ್ನುತ್ತಾರೆ. ಒಟ್ಟೊಮಾನ[illegible] ಸಾಮ್ರಾಜ್ಯದ ಭವ್ಯ ಪರಂಪರೆ ಮತ್ತು ಇಸ್ಲಾಮಿಕ್ ಧರ್ಮವನ್ನು ಎತ್ತಿ ಹಿಡಿಯಲು ಎಕೆಪಿ ಪಕ್ಷ ಕಟಿ ಬದ್ಧವಾಗಿದೆ. ತಕ್ಸಿಮ್ ಚೌಕದ ಚಳುವಳಿಯನ್ನು 70 ಸೆಕ್ಯು[illegible] ಪ್ರಜಾಸತ್ತಾತ್ಮಕ, ಎಡ-ಪ್ರಗತಿಪರ, ಪರಿಸರವಾದಿ ಸಂಘಟನೆಗಳ ‘ತಕ್ಸಿಮ್ ಸಾಲಿಡಾರಿಟಿ’ ಎಂಬ ಕೂಟ ವಹಿಸಿದೆ. ‘ಫ್ಯಾಸಿಸ್ಟ್’ ಎರ್ಡೊಗಾನ್ ಸರ್ಕಾರದ ವಿರುದ್ಧ ಅವು ಒಂದಾಗಿವೆ. ಈ[illegible] ವರೆಗಿನ ಇತರ ದೇಶಗಳ ಎಲ್ಲಾ ‘ಚೌಕ ವಶಪಡಿಸಿಕೊಳ್ಳಿ’ ಚಳುವಳಿಗಳ ಗಟ್ಟಿತನ-ದೌರ್ಬಲ್ಯಗಳು ಇರುವ ಈ ಚಳುವಳಿ ಬೇರೆ ರೀತಿಯಲ್ಲಿ ರೂಪುಗೊಳ್ಳುತ್ತದೆಯೇ ಎಂದು ಕಾದು ನೋಡಬೇಕಾಗಿದೆ.

‘ಹಸಿವು ಮಿತವ್ಯಯಗಳಿಂದ ಕೊಲ್ಲುವ ಕೊಲೆಗಡುಕರು ಇವರು’

ಇದು ಜಿ-8 ಸಭೆಯ ವಿರುದ್ಧ ಪ್ರತಿಭಟನೆಯಲ್ಲಿ ಕೇಳಿ ಬಂದ ಘೋಷಣೆಗಳಲ್ಲಿ ಒಂದು. ಈ ವರ್ಷದ ಜಿ-8 ಸಭೆಯನ್ನು ಉತ್ತರ ಐರ್ಲೆಂಡಿನ ಎನ್ನಿಸ್ಕಿಲ್ಲೆನ್ ಎಂಬ ಪಟ್ಟಣದಲ್ಲಿ ಆಯೋಜಿಸಲಾಯಿತು. ಕಳೆದ ಹಲವು ವರ್ಷಗಳಿಂದ ಜಿ-8 ಶೃಂಗಸಭೆಯನ್ನು ಸಾಮ್ರಾಜ್ಯಶಾಹಿ ಜಾಗತೀಕರಣದ [illegible] (ಅಥವಾ ಒಂದು ರೀತಿಯ ಸೆಕ್ರೆಟಾರಿಯಟ್) ಎಂದು ಪರಿಗಣಿಸಲಾಗುತ್ತಿದ್ದು, ಅದರ ವಿರುದ್ಧ ವ್ಯಾಪಕ ಪ್ರತಿಭಟನೆ ಮತ್ತು ಪ್ರತಿ-ರೋಧ ಕಂಡು ಬರುತ್ತಿದೆ. ಜಾಗತೀಕರಣದ ಹಲವು ನೀತಿಗಳ ವಿರುದ್ಧ ಹೋರಾಡುವ ಸಂಘಟನೆಗಳು ಒಟ್ಟು ಸೇರಿ ಜಿ-8 ಸಭೆಯ ವಿರುದ್ಧ ಪ್ರತಿಭಟಿಸುತ್ತಿವೆ. ಈ ಪ್ರತಿಭಟನೆಗಳ ವಿರುದ್ಧ ದಮನ ದರ್ಪದ ನೀತಿ, ಈ ಸಭೆಗಳನ್ನು ನಡೆಸಲು ಮತ್ತು ಅದರ ‘ಭದ್ರತೆ’ಗೆ ಮಾಡುತ್ತಿರುವ ಖರ್ಚು ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಿದೆ. ಅದೇ ಪ್ರತಿಭಟನೆಯ ಒಂದು ವಿಷಯವೂ ಆಗುತ್ತಿದೆ. ಈ ಬಾರಿಯ ಸಭೆಗೆ 6 ಕೋಟಿ ಪೌಂಡು ಖರ್ಚಾಗಿದೆಯಂತೆ. ಜಾಗತಿಕ ಆರ್ಥಿಕ ಬಿಕ್ಕಟ್ಟು ಮುಂತಾದ ಯಾವುದೇ ಪ್ರಮುಖ ಸಮಸ್ಯೆಗಳ ಬಗ್ಗೆ ಯಾವುದೇ ಅರ್ಥಪೂರ್ಣ ಮುಂದಾಳ್ತನ ತೋರದ ಜಿ-8 ಸಭೆಯಲ್ಲಿ

ಜನಶಕ್ತಿ
ಕನ್ನಡ ವಾರಪತ್ರಿಕೆ

ಮಾ ಶತಮಾನೋತ್ಸವ...

ಟ 16 ರಿಂದ

ಡಲು ಶ್ರಮಿಸಿದರು. ಬಂಗಾಲದ ಗಾಲದ ಸುತ್ತ ಅವರು ಜನತೆಯ ಚಳುವಳಿಯನ್ನು ಬೆಳೆಸುವ ಪ್ರಯತ್ನ ಯುತ್ತಾ ಅಂದಿನ ಪ್ರಸಿದ್ಧ ಕಲಾವಿದರನ್ನು ವಳಿಯೊಳಗೆ ಎಳೆತಂದರು. ಇಪ್ಟಾ ವಿ ನಾಟಕಗಳ ನಂತರ ಪೃಥ್ವೀರಾಜ್ ರರು ಬರಗಾಲ ಸಂತ್ರಸ್ತರಿಗಾಗಿ ಹಣ ಗ್ರಹಿಸುತ್ತಿದ್ದರು. ಸಾಹಿತ್ಯ ದಿಗ್ಗಜರುಗಳಾದ ಲ್ಕ್ ರಾಜ್ ಆನಂದ್, ಖ್ವಾಜಾ ಅಹ್ಮದ್ ಬ್ಬಾಸ್, ಅಲಿ ಜರ್ದಾರ್ ಜಫ್ರಿ, ಉದಯ್ ಕರ್, ರವಿ ಶಂಕರ್, ಚಿತ್ತೋಪ್ರಸಾದ್, ಬು ಮಿತ್ರ, ಎಸ್‌ಡಿ ಬರ್ಮನ್, ಸಲಿಲ್



ಧರಿ ಮತ್ತು ತಮ್ಮ ಕ್ಷೇತ್ರಗಳಲ್ಲಿ ಖ್ಯಾತಿ ಸಿದ ಇತರೆ ಹಲವಾರು ಕಲಾವಿದರು ಈ ವಳಿಗೆ ಸೇರುವಂತಾಯಿತು.

ಕಾಲು ಶತಮಾನಕ್ಕೂ ಮೀರಿದ ಅವಧಿಯಲ್ಲಿ ರಾಜ ಸಾಹ್ನಿ ಯವರು 125 ಕ್ಕೂ ಹೆಚ್ಚು ಮಾಗಳಲ್ಲಿ ಪಾತ್ರ ವಹಿಸಿದರು. ಭೀಮಲ್ ಯ್ ಅವರ 'ದೊ ಬಿಘಾ ಜಮೀನ್' ಅಮಿಯೋ ಚಕ್ರಬೊರ್ತಿಯವರ 'ಸೀಮಾ', ರಾಜೇಂದ್ರ ಸಿಂಗ್ ಬೇಡಿಯವರ ಕಥೆ ಆಧಾರಿತ 'ಗರಮ್ ಕೋಟ್', ಹೇಮನ್ ಗುಪ್ತ ಅವರ 'ಕಾಬೂಲಿವಾಲ', ಯಶ್ ಚೋಪ್ರ ಅವರ 'ವಕ್ತ್' ಅಥವಾ ಎಂ.ಎಸ್. ಸತ್ಯು ಅವರ 'ಗರಮ್ ಹವಾ'ದಲ್ಲಿನ ಪಾಕಿಸ್ತಾನಕ್ಕೆ ಗುಳೆ ಹೋಗಲು ನಿರಾಕರಿಸುವ ಮುಸ್ಲಿಮನ ಅವರ ಅಭಿನಯ ನನ್ನ ಸಮಕಾಲಿನರ ಮನದಲ್ಲಿ ಅಚ್ಚೊತ್ತಿ ನಿಂತಿದೆ. ಈ ಕೊನೆಯ ಚಿತ್ರದ ಡಬ್ಬಿಂಗ್ ಮುಗಿದ ಒಂದೇ ದಿನದಲ್ಲಿ ಬಲರಾಜ್ ಸಾಹ್ನಿ ನಿಧನರಾದರು.

ಭಾರತೀಯ ಸಿನಿಮಾದ ಶತಮಾನೋತ್ಸವ ಆಚರಣೆ ನಾವಿಂದು ಯಾವ ದಿಸೆಯಲ್ಲಿ ಹೋಗುತ್ತಿದ್ದೇವೆ ಎಂಬುದರ ಪರಿಶೋಧನೆಯ ಚಳುವಳಿಯೂ ಆಗಬೇಕು. ದೊಡ್ಡ ಹಣಕಾಸಿನ ಪ್ರಭಾವ, ಕನಸಿನ ಜೀವನ, ವಾಸ್ತವದಿಂದ ಹೊರಗುಳಿದ ಬದುಕು ಭಾರತೀಯ ಸಿನಿಮಾವನ್ನು 'ದೇಶದ ಅಂತಃಸ್ಸಾಕ್ಷಿಯು ಕಾವಲುಗಾರ'ನ ಪಾತ್ರದಿಂದ ಹೊರಗುಳಿಸಿದೆ. ಈ ಸಂದರ್ಭದಲ್ಲಿ ಇಂದಿನ ಯುವ ಪೀಳಿಗೆಯವರಾದ ಹಿಮಾಂಶು ಧೂಲಿಯ, ಸೂರ್ಜಿತ್ ಸರ್ಕಾರ್, ಆಶುತೋಷ್ ಗೋ ವಿಟ್ಕರ್, ಸುಧೀರ್ ಮಿಶ್ರ, ವಿಶಾಲ್ ಭಾರದ್ವಾಜ್, ಅನುರಾಗ್ ಕಾಶ್ಯಪ್ ಮತ್ತು ಇತರ ಹಲವರು ಹೊಸ ಸಿನಿಮಾದ ಹೂರಣ ಮತ್ತು ವ್ಯಾಕರಣವನ್ನು ಸೃಜಿಸುತ್ತಿರುವುದನ್ನು ನೋಡುವುದು ಭರವಸೆ ಮೂಡಿಸುವಂತಹದ್ದಾಗಿದೆ.

ಸಿರಿಯಾದ ಸರ್ಕಾರ ಬದಲಾವಣೆ ಮುಖ್ಯ ವಿಷಯವಾಗಿತ್ತು. ಯದ ದೃಢ ವಿರೋಧದಿಂದ ಸಿರಿಯಾದ ರ್ಕಾರದ ವಿರುದ್ಧ ಯುದ್ಧ ಹೂಡಿ ರನ್ನು ಉರುಳಿಸುವುದರ ಬಗ್ಗೆ ಸಹಮತ ಮೂಡಿಸುವ ನಾಟೋ ದೇಶಗಳ ಹುನ್ನಾರ ಲಕಾರಿಯಾಗಲಿಲ್ಲ

ಎಂದಿನಂತೆ ಈ ಬಾರಿಯೂ (ಉತ್ತರ ರ್ಲಂಡಿನ) ದೂರದ ಪಟ್ಟಣವೊಂದರಲ್ಲಿ ಕಿಸಿದರೂ ವ್ಯಾಪಕ ಪ್ರತಿಭಟನೆ ಕಂಡು ಂದಿತು. ವ್ಯಾಪಕ ನಿರ್ಬಂಧಗಳು, ಗ್ಬಂಧನ, ಬಂದೋಬಸ್ತು ಇದ್ದಾಗ್ಯೂ ವಿರಾರು ಪ್ರತಿಭಟನಾಕಾರರು ಹೊರ ೀಲಿಯವರೆಗೂ ಸುಮಾರು 6 ಕಿ.ಮಿ. ಯುದ್ಧದ ಮೆರವಣಿಗೆ ನಡೆಸಿದರು. ಕೆಲವು ಕಡೆ ೀಲಿ ಮುರಿದು ಹೋಗಲು ಪ್ರಯತ್ನಿಸಿದರೂ ಯಾವುದೇ ಹಿಂಸಾಕೃತ್ಯ ನಡೆಯಲಿಲ್ಲ. ಉತ್ತರ ರ್ಲಂಡಿನಲ್ಲಿ ದಶಕಗಳ ಕಾಲ ಆಂತರಿಕ ಯುದ್ಧ-ದಮನ ನಡೆಸಿದ 'ಅನುಭವಿ' ಪೊಲಿಸ್ ಪಡೆಯಿಂದಾಗಿಯೋ ಏನೋ, ಇತ್ತೀಚಿನ ವರ್ಷಗಳಲ್ಲಿ ಇದು ಅತ್ಯಂತ 'ಶಾಂತಿಯುತ' ಜಿ-8 ಸಭೆ ಆಗಿತ್ತಂತೆ.

ಆದ್ದರಿಂದಲೇ ಏನೋ ಹೆಚ್ಚಿನ ಜಾಗತಿಕ ಮಾಧ್ಯಮಗಳಿಗೆ ಇದು ಸುದ್ದಿಯಾಗಲೇ ಇಲ್ಲ. ಪ್ರತಿಭಟನಾ ಮೆರವಣಿಗೆ ನೋಡಲು ನೆರೆದಿದ್ದ ಜನ ಪ್ರತಿಭಟನಾಕಾರರ ಪರವಾಗಿ ಘೋಷಣೆ ಹಾಕಿದರು. ಜಿ-8 ನಾಯಕ-ನಾಯಕಿಯರ ಮುಖವಾಡ ಧರಿಸಿದ ಹಲವು ಪ್ರತಿಭಟನಾಕಾರರು ಅವರ ನೀತಿಗಳ ಅಣಕವಾಡುವ ಟ್ಯಾಬ್ಲೊಗಳನ್ನು ಮಾಡಿದ್ದರು. 'ಮಿತವ್ಯಯ ನಮ್ಮನ್ನು ಕೊಲ್ಲುತ್ತಿದೆ', 'ಹಸಿವು ಮಿತವ್ಯಯಗಳಿಂದ ಕೊಲ್ಲುವ ಕೊಲೆಗಡುಕರು ಇವರು', 'ಸಾಕಪ್ಪಾ ಸಾಕು, ಬಂಡವಾಳಶಾಹಿಯ ಹುಚ್ಚಾಟ ಸಾಕು', 'ಬ್ಯಾಂಕ್ ಬೈಲೌಟ್ ಬೇಡ', 'ಬಡ ದೇಶಗಳಿಗೆ ಸಾಲಮನ್ನಾ ಮಾಡಿ, ಬಾಂಬ್ ದಾಳಿ ಅಲ್ಲ', 'ತೆರಿಗೆ ಕಳ್ಳತನ ನಿಲ್ಲಿಸಿ', 'ಇನ್ನೊಂದು ಭೂಮಿ ಇಲ್ಲ' – ಪ್ರತಿಭಟನೆಯಲ್ಲಿ ಕೇಳಿಬಂದ ಘೋಷಣೆಗಳು.

'ಸೋಲಾರ್ ಪವರ್' ಹಗರಣಕೋರರೊಂದಿಗಿನ ಸಂಬಂಧದ ಆರೋಪ

ಓಮನ್ ಚಾಂಡಿ ರಾಜಿನಾಮೆಗೆ ಸಿಪಿಐ(ಎಂ)ಆಗ್ರಹ

ಬಹುಕೋಟಿ 'ಸೋಲಾರ್ ಪವರ್' ಹಗರಣಕೋರರ ಜೊತೆ ಸಂಬಂಧ ಹೊಂದಿರುವ ಬಗೆಗೆ ತಮ್ಮ ವಿರುದ್ಧ ಬಂಧಿರುವ ಗಂಭೀರ ಅರೋಪದ ಹಿನ್ನೆಲೆಯಲ್ಲಿ ಕೇರಳ ರಾಜ್ಯದ ಮುಖ್ಯಮಂತ್ರಿ ಶ್ರೀ ಓಮನ್ ಚಾಂಡಿಯವರು ತಮ್ಮ ಮುಖ್ಯಮಂತ್ರಿ ಸ್ಥಾನಕ್ಕೆ ರಾಜಿನಾಮೆ ನೀಡಬೇಕೆಂದು ಕೇರಳದ ಎಡ ಪ್ರಜಾಸತ್ತಾತ್ಮಕ ರಂಗವು ಕೇಳಿದೆ. ಮತ್ತು ಈ ವಿಷಯದ ಬಗೆಗೆ ನ್ಯಾಯಾಂಗ ತನಿಖೆಗೆ ಆಗ್ರಹಿಸಿದೆ. ಸಿಪಿಐ(ಎಂ) ಪಕ್ಷದ ಪಾಲಿಟ್ ಬ್ಯೂರೋ ಈ ಪ್ರಕರಣದ ಕುರಿತು ನ್ಯಾಯಾಂಗ ತನಿಖೆಗೆ ಅವಕಾಶ ನೀಡಿ ಓಮನ್ ಚಾಂಡಿ ತಮ್ಮ ಸ್ಥಾನದಿಂದ ಕೂಡಲೇ ಕೆಳಕ್ಕಿಳಿಯಬೇಕೆಂದು ಆಗ್ರಹಿಸಿದೆ.

ಈ ವಿಷಯದಲ್ಲಿ ಸರ್ಕಾರದ ನಿಷ್ಕ್ರಿಯತೆಯನ್ನು ಖಂಡಿಸಿ ಪ್ರತಿಭಟನೆ ನಡೆಸುತ್ತಿದ್ದವರ ಮೇಲೆ ನಡೆದಿರುವ ಕ್ರೂರ ಪೋಲಿಸ್ ದಾಳಿಯನ್ನು ಸಿಪಿಐ(ಎಂ) ಪಾಲಿಟ್ ಬ್ಯೂರೋ ತೀವ್ರವಾಗಿ ಖಂಡಿಸಿದೆ.

ವಿಮಾನ ನಿಲ್ದಾಣಗಳ...

ಪುಟ 13 ರಿಂದ

ಪ್ರಚಾರದಂತಲ್ಲ, 'ಪ್ರಾಮಾಣಿಕ'ವಾಗಿದೆ ಎಂದು ಕಟಕಿಯಾಡಿದ್ದಾರೆ ಒಬ್ಬ ವಿಶ್ಲೇಷಕರು!

ಇಲ್ಲಿ ಗಮನಿಸಬೇಕಾದ ಇನ್ನೊಂದು ಮುಖ್ಯ ಸಂಗತಿಯಿದೆ. ಈ ಜಾಹೀರಾತುಗಳು ಯುಪಿಎ-2 ಸರಕಾರದ 4 ವರ್ಷಗಳ ಬಗ್ಗೆ ಹೇಳುತ್ತಿಲ್ಲ, ಯುಪಿಎ ಸರಕಾರಗಳ 9 ವರ್ಷಗಳ ಬಗ್ಗೆ ಹೇಳುತ್ತವೆ. ಇದೊಂದು ದೊಡ್ಡ ಮೋಸ ಎನ್ನುತ್ತಾರೆ ವಿಶ್ಲೇಷಕರು. ಯುಪಿಎ-1 ಮತ್ತು ಯುಪಿಎ-2 ಸರಕಾರಗಳ ನಡುವೆ ಬಹಳ ವ್ಯತ್ಯಾಸಗಳಿವೆ. ಯುಪಿಎ-1 ಎಡಪಕ್ಷಗಳ ಬೆಂಬಲವನ್ನು ಅವಲಂಬಿಸಿತ್ತು. ಅದರಿಂದಾಗಿ ರೇಗ, ಮಾಹಿತಿ ಹಕ್ಕು, ಶಿಕ್ಷಣದ ಹಕ್ಕು ಮುಂತಾದ ಕಾನೂನುಗಳು ಬಂದವು. ಅವುಗಳ ಬಲದಿಂದ ಅಧಿಕಾರಕ್ಕೆ ಬಂದ ಯುಪಿಎ-2 ಸರಕಾರ ಎಡಪಕ್ಷಗಳ 'ಹಸ್ತಕ್ಷೇಪ'ದಿಂದ 'ಸ್ವತಂತ್ರ'ವಾಗಿದೆ-ಆದ್ದರಿಂದ ಇಂತಹ ಸಾಧನೆಗಳೇನೂ ಇಲ್ಲ; ಲೋಕಪಾಲ ಮಸೂದೆ ನೆನೆಗುದಿಯಲ್ಲಿ ಬಿದ್ದಿದೆ, ಆಹಾರ ಭದ್ರತಾ ಮಸೂದೆಯ ಹೆಸರಿನಲ್ಲಿ ಅರೆಬರೆ ಮಸೂದೆಯನ್ನು 4ವರ್ಷಗಳ ನಂತರ, ಈಗ ತರಾತುರಿಯಲ್ಲಿ ಪಾಸು ಮಾಡಿಕೊಳ್ಳುವ ಪ್ರಯತ್ನ ನಡೆದಿದೆ. ಇನ್ನೊಂದೆಡೆ, 2ಜಿ ಯಿಂದ ಹಿಡಿದು ಮಿಲಿಯ-ಮಿಲಿಯಗಟ್ಟಲೆ ರೂ.ಗಳ ಹಗರಣಗಳ ಸಾಲು-ಸಾಲು. ಇದೂ ಸಾಲದೆಂಬಂತೆ ಜಾಗತಿಕ ಹಣಕಾಸು ಬಂಡವಾಳದ ಲಾಭಗಳ ಹಸಿವನ್ನು ತಣಿಸಲು 'ಆರ್ಥಿಕ ಸುಧಾರಣೆ'ಗಳ ಮತ್ತೊಂದು ದೊಡ್ಡ ಕಂತು. ನಿಜ, ಇವುಗಳ ಪ್ರಸ್ತಾಪಗಳು ಈ ಜಾಹೀರಾತುಗಳಲ್ಲಿಲ್ಲ !

ರೈತ ಚಳುವಳಿ....

ಪುಟ 2 ರಿಂದ

ಸಂಸ್ಥೆಗಳ ನಾಯಕರೇ ಕ್ರಾಂತಿಯನ್ನು ನಡೆಸಿದ್ದು. ಈ ಸೋವಿಯೆತ್‌ಗಳ ಸಭೆಯೇ ರಷ್ಯಾದಲ್ಲಿ ಕಾರ್ಮಿಕ ಕ್ರಾಂತಿಯ ಯಶಸ್ಸನ್ನು ಘೋಷಿಸಿದ್ದು. ಆದ್ದರಿಂದಲೇ ರಷಿಯಾಕ್ಕೆ ಸೋವಿಯೆತ್ ಸಮಾಜವಾದೀ ಒಕ್ಕೂಟ ಎಂಬ ಹೆಸರು ಬಂದಿದ್ದು. ಅಂದಿನಿಂದ ಎಲ್ಲೆಲ್ಲಿ ದುಡಿಯುವ ಜನರ ಪ್ರಭುತ್ವವನ್ನು ಒಂದು ಪ್ರದೇಶದಲ್ಲಿ ಸ್ಥಾಪಿಸುವ ಅವಕಾಶ ಬಂದಾಗ ಅಲ್ಲಿ ಒಂದು ಸೋವಿಯೆತ್ ಮಾದರಿ ಸಂಸ್ಥೆಯನ್ನು ರಚಿಸುವುದು ಒಂದು ಕ್ರಾಂತಿಕಾರಿ ವಿಧಾನ.)

ಪೆಂಗ್ ಪೈರವರನ್ನು ಕೊಲೆ ಮಾಡಿದ ಸರ್ಕಾರ

ಹೀಗೆ ಚೀನಾದ ಹಲವು ಮೊದಲುಗಳ ಕಾರಣ ಕರ್ತರಾದ ಪೆಂಗ್ ಪೈ ರವರು ಕಮ್ಯುನಿಸ್ಟ್ ಪಕ್ಷದ ಕೇಂದ್ರ ಸಮಿತಿ ಸದಸ್ಯರೂ, ಕೆಲ ತಿಂಗಳ ನಂತರ ಪಾಲಿಟ್ ಬ್ಯೂರೋ ಸದಸ್ಯರೂ ಆದರು. ಕಮ್ಯುನಿಸ್ಟ್ ಪಕ್ಷದ ಕಾರ್ಮಿಕ ಸಮಿತಿಯ ಕಾರ್ಯದರ್ಶಿಯಾದರು. ಚೌ ಎನ್ ಲಾಯ್‌ರವರು ಕಾರ್ಯದರ್ಶಿಯಾಗಿದ್ದ ಪಕ್ಷದ ಮಿಲಿಟರಿ ಆಯೋಗದ ಸದಸ್ಯರೂ ಆಗಿದ್ದರು. ಅದರೆ ಭೂ ಮಾಲಕರ ದಬ್ಬಾಳಿಕೆಗೆ ಸವಾಲಾಗಿದ್ದ ಇವರನ್ನು ಕೊಲೆ ಮಾಡಲು ಹಲವು ಪ್ರಯತ್ನಗಳು ನಡೆದುವು. ಕೊನೆಗೆ ಇವರಿಗೆ ಸಹಾಯಕನಾಗಿದ್ದ ಪಕ್ಷದ ಸದಸ್ಯನೊಬ್ಬನ ಮನೆಯಲ್ಲಿ ಪಕ್ಷದ ಸಮಿತಿಯೊಂದರ ಸಭೆ ನಡೆಸುತ್ತಿದ್ದಾಗ ಆ ಸದಸ್ಯನ ದ್ರೋಹದಿಂದಾಗಿ ಪೋಲೀಸರು ಮೋಸದಿಂದ ಇನ್ನೂ ನಾಲ್ವರು ಪ್ರಮುಖ ನಾಯಕರೊಂದಿಗೆ ಸೆರೆ ಹಿಡಿದರು. ಆ ಸಂದರ್ಭದಲ್ಲಿಯೂ ಧೈರ್ಯಗೆಡದೆ ಜೈಲಿನಲ್ಲಿದ್ದ ಎಲ್ಲ ಖೈದಿಗಳ ನಡುವೆ, ಹಾಗೂ ಜೈಲು ಸಿಬ್ಬಂದಿಗಳ ನಡುವೆ ಕ್ರಾಂತಿಯ ವಿಚಾರಗಳನ್ನು ಬಿತ್ತಿದರು. ಕ್ರಾಂತಿ ಗೀತೆಗಳನ್ನು ಹಾಡುತ್ತಾ ಗಲ್ಲಿಗೇರಿದರು. ಆಗ ಪೆಂಗ್ ಪೈ ರವರಿಗೆ ಕೇವಲ 33 ವರ್ಷ ವಯಸ್ಸು.

ಈ ಹುತಾತ್ಮರನ್ನು ಚೀನಾ ಹಲವು ರೀತಿಯಲ್ಲಿ ಗೌರವಿಸಿದೆ. ಚೀನಾದ ಕೆಂಪು ಸೈನ್ಯದ ತರಬೇತಿ ಸಂಸ್ಥೆಗಳಿಗೆ ಪೆಂಗ್ ರವರ ಹೆಸರನ್ನು ಇಡಲಾಗಿದೆ. ಅವರ ಮನೆಯನ್ನೂ ನಾಶ ಮಾಡಲಾಯಿತಾದರೂ ಮುಂದೆ ಅದನ್ನು ಪುನಃ ನಿರ್ಮಾಣ ಮಾಡಿ ಸ್ಮಾರಕವನ್ನಾಗಿ ಮಾಡಲಾಗಿದೆ. ಚೀನಾದ 100 ಜನ ಅಪ್ರತಿಮ ಕ್ರಾಂತಿಕಾರಿಗಳಲ್ಲಿ ಒಬ್ಬರಾಗಿ ಅವರ ಹೆಸರು ಅಚ್ಚಳಿಯದೇ ಉಳಿದಿದೆ.

ಭಾರತೀಯ ಸಿನಿಮಾದ ಶತಮಾನೋತ್ಸವ


– ಒಂದು ಭಿನ್ನ ದೃಷ್ಟಿಕೋನ



ಪತೇರ್ ಪಾಂಚಾಲಿ

ಸೀತಾರಾಮ್ ಯೆಚೂರಿ
ಕನ್ನಡಕ್ಕೆ ಜಿ.ಎಸ್.ಮಣಿ

ದಾದಾ ಸಾಹೇಬ್ ಫಾಲ್ಕೆಯವರ ಮೂಕಿ ಚಿತ್ರ 'ಸತ್ಯ ಹರಿಶ್ಚಂದ್ರ' 1913 ರಲ್ಲಿ ಬಿಡುಗಡೆಯಾಗಿ ಶತಮಾನವಾಗುತ್ತಿರುವಾಗ 2013ರ ಈ ವರ್ಷವನ್ನು ಭಾರತದ ಸಿನಿಮಾದ ಶತಮಾನೋತ್ಸವವೆಂದು ಪರಿಗಣಿಸಿ ಬೃಹತ್ ಸಮಾರಂಭಗಳೊಂದಿಗೆ ತಳುಕಿನ ಆಚರಣೆಗಳು ಪ್ರಾರಂಭಗೊಂಡಿವೆ. ಹಿಂದಿ ಸಿನಿಮಾ ರಂಗದ ವಿಕಾಸದ ರೂವಾರಿಯಾಗಿ ಕಾಲು ಶತಮಾನಕ್ಕೂ ಹೆಚ್ಚು ಕಾಲ ದೈತ್ಯ ಪ್ರತಿಭೆಯಾಗಿ ಮೆರೆದ 'ಜನರ ರಂಗ ಸಂಸ್ಕೃತಿ'ಯ ಬೆಳವಣಿಗೆಯ ಹರಿಕಾರ ಬಲರಾಜ ಸಾಹ್ನಿ ಅವರ ಜನ್ಮ ಶತಮಾನವೂ 2013 ಎಂಬುದು ಗಮನಕ್ಕೆ ಬಾರದೇ ಹೋಗಿದೆ.




ಈ ಕಳೆದ ಶತಮಾನದಲ್ಲಿ ಭಾರತೀಯ ಸಿನಿಮಾ, ಜನತೆಯ ಸಾಮೂಹಿಕ ಪ್ರಜ್ಞೆಯನ್ನು ರೂಪಿಸುವಲ್ಲಿ ಬಹುಮುಖ್ಯ ಪಾತ್ರ ವಹಿಸಿದೆ. ಅದರ ವಿವಿಧ ಅವತಾರಗಳು ಹಸೀ ಮನರಂಜನೆಯನ್ನು ನೀಡುವುದರಿಂದ ಹಿಡಿದು ಜನರು, ಅದರಲ್ಲೂ ಅನಕ್ಷರಸ್ಥ ಜನರು ತಮ್ಮ ಕನಸಿನ ಜಗತ್ತೇ ನಿಜವೆಂದು ನಂಬಿ ಆ ಪ್ರಜ್ಞೆಯಿಂದ ಅವರು ತಮಗಾಗುವ ಅನ್ಯಾಯ ಮತ್ತು ನಿಜ ಜೀವನದ ನರಳಾಟಗಳ ವಿರುದ್ಧ ಹೋರಾಟದ ಹಾದಿಯನ್ನು ಹಿಡಿಯದಂತೆ ಮಾಡುವಂತಹ ತಾತ್ವಿಕತೆ ಅಂದರೆ 'ಜೀವನ ದರ್ಶನ' ರೂಪಿಸಿ ಬೆಳೆಸಿದೆ.

ಲೋಲಕದ ಈ ವಿಸ್ತಾರ ಹಿಂದಿ ಸಿನಿಮಾದ ಮೇಲೆ ಮಾತ್ರ ಪ್ರಭಾವ ಬೀರಿಲ್ಲ, ಕೋಲ್ಕೊತ್ತಾ ಮತ್ತು ಬಂಗಾಲಗಳಲ್ಲಿ ತಯಾರಾದ ಸಿನಿಮಾಗಳ ಮೇಲೆ, ಮೊದಲು ಮದ್ರಾಸಿನಲ್ಲಿ ಹಾಗೂ ನಂತರದಲ್ಲಿ ಎಲ್ಲ ದಕ್ಷಿಣದ ನಾಲ್ಕು ಭಾಷೆಗಳಲ್ಲಿ ಮತ್ತು ಇಂದು ಭೋಜಪುರಿಯಂತಹ ಭಾಷಿಕ ಪ್ರದೇಶಗಳಲ್ಲೆಲ್ಲ ಪ್ರಭಾವ ಬೀರಿದೆ. ಆದ್ದರಿಂದ 2013, ಹಿಂದಿ ಸಿನಿಮಾದ ಶತಮಾನೋತ್ಸವವಲ್ಲ ಬದಲಿಗೆ, ಎಲ್ಲ ಭಾಷಿಕ ಮತ್ತು ಕಲಾತ್ಮಕ ಅಭಿವ್ಯಕ್ತಿಯ ಭಾರತೀಯ ಸಿನಿಮಾದ ಶತಮಾನೋತ್ಸವವಾಗಿದೆ.

ತನ್ನ ವಿಶಾಲ ಅಳವಿನ ಲೋಲಕದಡಿ ಭಾರತೀಯ ಸಿನಿಮಾ ದೇಶದ ಸಾಮೂಹಿಕ ಯಿಪ್ರಜ್ಞೆಯ ಮತ್ತು ಆತ್ಮ ಸಾಕ್ಷಿಯ ಜೀವಂತಿಕೆಯನ್ನು ಕಾಯುವ ಕೆಲಸವನ್ನು ಅದು ಮಾಡಿದೆ. ಬಂಗಾಳದ ಸತ್ಯಜಿತ್ ರೇ, ರಿತ್ವಿಕ್ ಘಾಟಕ್ ಅಥವಾ ಮೃಣಾಲ್ ಸೇನ್ ಮತ್ತು ಇತರರು ಇಂತಹ ಪಾತ್ರವನ್ನು ಮುಖ್ಯವಾಗಿ ವಹಿಸಿದರು. ದಕ್ಷಿಣದ ಚಿತ್ರೋದ್ಯಮ ಇಂತಹದೇ ಪಾತ್ರವನ್ನು ವಹಿಸಿತು. ಬಂಗಾಳಿ ಪ್ರಭಾವ ಹಿಂದಿ ಸಿನಿಮಾದ ಮೇಲೆ ಆಗಿ ಬೀಮಲ್ ರಾಯ್ ಅವರ ದೊ ಬಿಘಾ ಜಮೀನ್ (ಭೂ ಸುಧಾರಣೆ) ಅಥವಾ ಸುಜಾತ (ಅಸ್ಪೃಶ್ಯತೆ) ಮತ್ತು ಇತರ ಹಲವು ಸಿನಿಮಾಗಳು ಭಾರತೀಯ ಸಿನಿಮಾಕ್ಕೆ ನೈಜ ಗುಣವನ್ನು ನೀಡಿದವು.



ಅಮೆರಿಕನ್ನರು ಜಗತ್ತಿಗೆ ಒಂದು ಅಸಹ್ಯಕರ ನುಡಿಗಟ್ಟನ್ನು ನೀಡಿದ್ದಾರೆ– 'ಮೇಲಾಧಾರದ ಹಾನಿ' (Collateral damage) ಎಂಬುದೇ ಅದು. ಇದನ್ನು ಅವರು ತಮ್ಮ ಮಿಲಿಟರಿ ಕಾರ್ಯಾಚರಣೆಯಲ್ಲಿ ಸಾಯುವ ಮುಗ್ಧ ಜನರ ಬಗ್ಗೆ ಅವರು ಬಳಸುತ್ತಾರೆ. ಭಾರತದ ಸಂದರ್ಭದಲ್ಲಿ ಎಡ ಪಂಥೀಯರು ನೀಡಿದ ಕೊಡುಗೆಯನ್ನು ಸೂಚಿಸಲು ನಾವು ಇದಕ್ಕೆ ವಿರುದ್ಧವಾದ ನುಡಿಗಟ್ಟನ್ನು ಬಳಸಬಹುದೇನೋ. 'ಮೇಲಾಧಾರದ ಲಾಭ'– 'ಭಾರತದ ಅಂತಃಸಾಕ್ಷಿಯ ಕಾವಲುಗಾರ' ಎಂಬ ಅರ್ಥದಲ್ಲಿ. ಹಿಂದಿ ಸಿನಿಮಾದಲ್ಲಿ ಬಲರಾಜ್ ಸಾಹ್ನಿ ಇಂತಹ ಮುಖ್ಯ ಪಾತ್ರ ವಹಿಸುವ ಮೂಲಕ ಅಪಾರ ಕೊಡುಗೆ ನೀಡಿದರು. ಕಾಕತಾಳೀಯವೆಂಬಂತೆ ಅವರು 1913 ರ ಮೇ ದಿನದಂದು ಹುಟ್ಟಿ ಭಾರತೀಯ ಶೋಷಿತ ಜನರ ಉದ್ಧಾರ–ಕ್ಕೆ ಮತ್ತು ಸಮಾಜವಾದದ ಸ್ಥಾಪನೆಗೆ ಬದ್ಧರಾಗಿ ಉಳಿದರು. ಅಂದಿನ ಅವಿಭಜಿತ ಭಾರತದ ರಾವಲ್ಪಿಂಡಿಯಲ್ಲಿ ಹುಟ್ಟಿದ ಅವರು ಲಾಹೋರಿನ ಸರ್ಕಾರಿ ಕಾಲೇಜಿನಲ್ಲಿ ಓದಿ ಪತ್ರಿಕೋದ್ಯಮಕ್ಕೆ ತಮ್ಮನ್ನು ಅರ್ಪಿಸಿಕೊಂಡರು. ಪತ್ರಿಕೋದ್ಯಮ ಅವರ ಮೊದಲ ಪ್ರೀತಿಯಾಗಿತ್ತು. ಅವರನ್ನು ಬಲ್ಲವರೆಲ್ಲ ಸಿನಿಮಾ ಸೆಟ್ಟಿನಲ್ಲಿ ಸಹ ಅವರು ತಮ್ಮ ಬೆರಳಚ್ಚು ಯಂತ್ರವನ್ನು ತೆಗೆದುಕೊಂಡು ಹೋಗಿ ನಡು ನಡುವೆ ಸಿಕ್ಕ ಸಮಯದಲ್ಲಿ ಹಠತೊಟ್ಟು ನಾಟಕ ಅಥವಾ ಲೇಖನಗಳನ್ನು ರಚಿಸುತ್ತಿದ್ದುದನ್ನು ನೆನೆಪಿಸಿಕೊಳ್ಳುತ್ತಾರೆ.



ಬಲರಾಜ ಸಾಹ್ನಿ ಅವರು ಭಾರತವನ್ನು ವಸಾಹತುಶಾಹಿಯಿಂದ ಬಿಡುಗಡೆಗೊಳಿಸುವ ಮತ್ತು ಪಾಶ್ಚಿಮಾತ್ಯ ಉದಾರವಾದ ಮತ್ತು ಭಾರತೀಯ ರಾಷ್ಟ್ರೀಯವಾದಗಳೆರಡೂ ಒ
ಒಂದು ದಾರಿಯನ್ನು ಹುಡು
ಗುರುದೇವ ರವೀಂದ್ರನಾಥ ಟಾ
ಶಾಂತಿನಿಕೇತನ ವಿಶ್ವವಿದ್ಯಾ
ಹಿಂದಿ ಕಲಿಸುತ್ತಾ 1937 ರಿಂದ
ವರ್ಷ ಕಳೆದರು. ಆನಂತರ
ವಾರ್ಧಾದ ಸೇವಾಗ್ರಾಮ ಆ
ಗಾಂಧೀಜಿಯವರ ಜೊತೆ ವಾ
1939 ರಲ್ಲಿ ಗಾಂಧೀಜಿಯವರು
ಸೃಜನಾತ್ಮಕ 'ನಯಿ ತಾಲೀಮ್'ನ
ಮಾಡಿದರು. ಆಮೇಲೆ ಅವರು
ತೆರಳಿ ಅಲ್ಲಿ 'ಬಿಬಿಸಿ' ಸುದ್ದಿ
ಹಿಂದಿ ಸುದ್ದಿ ಬರಹಗಾರರಾಗಿ
44ರವರೆಗೆ ಕೆಲಸ ಮಾಡಿದರು
ಎರಡನೇ ಮಹಾಯುದ್ಧದ
ಹಿಟ್ಲರನ ಬರ್ಬರತೆ ಲಂಡನ್
ಹಲವು ಬಾರಿ ಬಾಂಬ್
ಒಳಮಾಡಿದ ಕಾಲವಾಗಿತ್ತು. ಈ
ಅನುಭವಗಳಿಂದ ಪಕ್ವವಾದ
ಸಾಹ್ನಿ ಭಾರತಕ್ಕೆ ಮರಳಿ ಭಾರತದ
ಮತ್ತು ಫ್ಯಾಸಿಸಮ್ ವಿರುದ್ಧ ಸ
ಹೋರಾಡುವ ರಾಜಕೀಯ ಶಕ್ತಿಯ
ಸೇರಬಯಸಿದರು. ಬ್ರಿಟನ್ನಿನ ಕಮ್ಯು
ಜೊತೆಗೆ ಆಗಲೇ ಕೆಲಸ ಮಾಡಿದ್ದ
ತಮ್ಮ ಪತ್ನಿ ದಮಯಂತಿಯವರ
ಗೆ ಅಂದಿನ ಅವಿಭಜಿತ ಸಿಪಿಐ
ಸೇರಿ ಇಂಡಿಯನ್ ಪೀಪಲ್ಸ್ ಥಿ
ರ್ ಅಸೋಸಿಯೇಷನ್ (ಇಪ್ಟಾ)ಗೆ
ನೀಡಿದರು. ಹೀಗೆ ಅವರು
ರಾಜಕೀಯ ಪ್ರಜ್ಞೆಯನ್ನು ಕಲೆಯ ಅ
ಮುಖ್ಯವಾಗಿ ಥಿಯೇಟರ್‌ನ

ಮುಂ

JANASHAKTHI KANNADA VARA PATRIKE: Printed by G.V.SRIRAMA REDDY, EMS Bhavana, No.37/A, 8th Cross, Mahalakshmi Layout, BANGALORE-560086Published by: G.V.SRIRAMA REDDY EMS Bhavana, No.37/A, 8th Cross, Mahalakshmi Layout, BANGALORE-560086, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, No. 12, 18th Cross, Sampangirama Nagar, Bangalore 560027 Karnataka(State). and Published at BANGALORE. EMS Bhavana, No.37/A, 8th Cross, Mahalakshmi Layout, BANGALORE-560086 . Editor NITHYANANDASWAMI EMS Bhavana, No.37/A, 8th Cross, Mahalakshmi Layout, BANGALORE-560086 Editor : NITHYANANDASWAMI